Swabhimani Sahakari
Pages : 34 / 12₹
Volume - 20
Issue - 02
February - 2023

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

## ಕೇಂದ್ರ ಬಜೆಟ್ 2023: ಅಮೃತ ಕಾಲದ ಮೊದಲ ಬಜೆಟ್



**ಸಹಕಾರ ಕ್ಷೇತ್ರಕ್ಕೆ ತೆರಿಗೆ ವಿನಾಯಿತಿ**
ಉತ್ಪಾದನೆ ಕೇಂದ್ರಿತ ಹೊಸ ಸಹಕಾರಿ ಸಂಘಗಳನ್ನು ಪ್ರೋತ್ಸಾಹಿಸಲು ತೆರಿಗೆಯಲ್ಲಿ ಶೇ 15ರಷ್ಟು ರಿಯಾಯಿತಿ,
ಸಹಕಾರ ಸಚಿವಾಲಯಕ್ಕೆ ಸರ್ಕಾರವು 2023–24ರಲ್ಲಿ ಒಟ್ಟು ರೂ.1,150.38 ಕೋಟಿ ಅನುದಾನ ಮೀಸಲಿಟ್ಟಿದೆ.

* ಆದಾಯ ತೆರಿಗೆ ಮಿತಿ
  ರೂ. 5 ಲಕ್ಷದಿಂದ ರೂ. 7 ಲಕ್ಷಕ್ಕೆ ಏರಿಕೆ
* ಗೃಹ ಬಳಕೆ ವಸ್ತುಗಳ ಮೇಲಿನ ತೆರಿಗೆ ಕಡಿತ

ಭಾರತದ ಆರ್ಥಿಕತೆ ಸರಿಯಾದ ಹಾದಿಯಲ್ಲಿದ್ದು,
ಉಜ್ವಲ ಭವಿಷ್ಯದತ್ತ ಸಾಗುತ್ತಿದೆ
-ನಿರ್ಮಲಾ ಸೀತಾರಾಮನ್

* ರೂ. 20 ಲಕ್ಷ ಕೋಟಿ ಕೃಷಿ ಸಾಲದ ಗುರಿ
* ಭದ್ರಾ ಮೇಲ್ದಂಡೆಗೆ ರೂ. 5300 ಕೋಟಿ
* ಮದ್ಯಮ ವರ್ಗಕ್ಕೆ ಬಂಪರ್ ಕೊಡುಗೆ

* ಯುವ ಉದ್ಯಮಿಗಳಿಗೆ ಕೃಷಿ–ಸ್ಟಾರ್ಟ್‌ಅಪ್‌ಗಳನ್ನು ಆರಂಭಿಸಲು ಕೃಷಿ ವೇಗವರ್ಧಕ ನಿಧಿ ಸ್ಥಾಪನೆ



ಫೆಬ್ರವರಿ 18
ಮಹಾ ಶಿವರಾತ್ರಿ

ಸೌಹಾರ್ದ ಸಹಕಾರಿಗಳ ಸಂಖ್ಯೆ : 5783

ಇ–ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1600



**ಜಿ. ನಂಜನಗೌಡ**

> ರಾಜ್ಯದ ಎಲ್ಲ ಸಹಕಾರಿಗಳಿಗೆ ಹೃದಯಪೂರ್ವಕ ನಮಸ್ಕಾರಗಳು ಹಾಗೂ ಶಿವರಾತ್ರಿ ಹಬ್ಬದ ಹಾರ್ದಿಕ ಶುಭಾಶಯಗಳು. ಕೈಲಾಸವಾಸಿ ಈಶ್ವರನು ಎಲ್ಲರ ಬಾಳಿನಲ್ಲಿ ಸುಖ ಸಂತೋಷ ಹಾಗೂ ನೆಮ್ಮದಿಯನ್ನು ಕರುಣಿಸಲಿ. ಎಲ್ಲ ಸೌಹಾರ್ದ ಸಹಕಾ-ರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುವಂತಾಗಲಿ ಎಂದು ಹಾರೈಸುತ್ತೇನೆ.

# ಸಂಯುಕ್ತ ಸಹಕಾರಿಯ ನಿರ್ದೇಶಕರ ತರಬೇತಿ ಸಹಕಾರಿಗಳ ನಿರ್ದೇಶಕರುಗಳು, ಸಹಕಾರಿಯ ಪರಿಪೂರ್ಣ ಮಾಹಿತಿಯನ್ನು ಹೊಂದಿರುವುದು ಅಗತ್ಯ ಎಂಬ ಸಂದೇಶ

ರಾಜ್ಯದ ಎಲ್ಲ ಸಹಕಾರಿಗಳಿಗೆ ಹೃದಯಪೂರ್ವಕ ನಮಸ್ಕಾರಗಳು ಹಾಗೂ ಶಿವರಾತ್ರಿ ಹಬ್ಬದ ಹಾರ್ದಿಕ ಶುಭಾಶಯಗಳು. ಕೈಲಾಸವಾಸಿ ಈಶ್ವರನು ಎಲ್ಲರ ಬಾಳಿನಲ್ಲಿ ಸುಖ ಸಂತೋಷ ಹಾಗೂ ನೆಮ್ಮದಿಯನ್ನು ಕರುಣಿಸಲಿ. ಎಲ್ಲ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುವಂತಾಗಲಿ ಎಂದು ಹಾರೈಸುತ್ತೇನೆ.

ಇದೇ ದಿನಾಂಕ 11 ಜನವರಿ 2023ರಂದು ಸಂಯುಕ್ತ ಸಹಕಾರಿಯ ನಿರ್ದೇಶಕರಿಗೆ ಬೆಂಗಳೂರಿನಲ್ಲಿ ಸಂಯುಕ್ತ ಸಹಕಾರಿಯ ತರಬೇತಿ ಸಭಾಂಗಣದಲ್ಲಿ ತರಬೇತಿಯನ್ನು ಏರ್ಪಡಿಸಲಾಗಿತ್ತು. ಮೊದಲನೇಯ ಉಪನ್ಯಾಸಕಾರರಾಗಿ ಚಾಣಕ್ಯ ವಿಶ್ವ ವಿದ್ಯಾಲಯದ ಕುಲಪತಿಗಳಾದ ಶ್ರೀ ಯಶವಂತ ಡೋಂಗ್ರೆಯವರು ಸಹಕಾರಿ ಕ್ಷೇತ್ರದ ಸವಾಲುಗಳು ಹಾಗೂ ಅವಕಾಶಗಳು ಮತ್ತು ಸುಸ್ಥಿರ ಅಭಿವೃದ್ಧಿ ಹಾಗೂ ಸಹಕಾರಿಗಳ ಪಾತ್ರ ಎಂಬ ವಿಷಯಗಳನ್ನು ಬಗ್ಗೆ ಅತ್ಯಂತ ಪರಿಣಾಮಕಾರಿಯಾಗಿ ಮಂಡಿಸಿದರು. ವಿಶೇಷವಾಗಿ ಸಹಕಾರಿ ಅನನ್ಯತೆ (ಕೋ ಆಪರೇಟಿವ್ ಐಡೆಂಟಿಟಿ) ಬಗ್ಗೆ ಜಾಗತಿಕ ಮಟ್ಟದಲ್ಲಿ ಚಿಂತನೆ ನಡೆಯುತ್ತಿದೆ. ಪ್ರಸ್ತುತ ವಿಶ್ವದ ಅರ್ಥವ್ಯವಸ್ಥೆಯಲ್ಲಿ ಸಹಕಾರಿ ಕ್ಷೇತ್ರದ ಕೊಡುಗೆ ಕೇವಲ 5% ಮಾತ್ರ. 7% ಆದರೆ ಒಂದು ಸರಾಸರಿ ಕೊಡುಗೆ ಎಂದು ಹೇಳಲಾಗುತ್ತಿದೆ. ಈ ಮಟ್ಟಕ್ಕೆ ಸಹಕಾರಿ ಕ್ಷೇತ್ರ ಕಾರ್ಯನಿರ್ವಹಿಸಬೇಕಿದೆ. ಆದಾಗ್ಯೂ ಸಹಕಾರ ಕ್ಷೇತ್ರ ಎಲ್ಲರ ಗಮನ ಸೆಳೆಯುವಂತಾಗಿದೆ. ಅರ್ಥ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವಂತಿದೆ. ಅನೇಕ ಸಂಕಟ ಸಂದರ್ಭಗಳಲ್ಲಿಯೂ ಸಹಕಾರ ಕ್ಷೇತ್ರ ಮಹತ್ವವನ್ನು ಪಡೆದಿದೆ. ಆರ್ಥಿಕ ವ್ಯವಸ್ಥೆಯ ಸಂಕಟ ನಿವಾರಣೆಯಲ್ಲಿ ಸಹಕಾರಿಗಳು ಪ್ರಮುಖ ಪಾತ್ರ ನಿರ್ವಹಿಸುವುದು ಅಗತ್ಯವೆನಿಸುತ್ತದೆ– ಎಂಬ ಬಗ್ಗೆ ವಿಷಯ ಮಂಡಿಸಿರುವುದು ಸಹಕಾರಿಗಳಿಗೆ ಉತ್ತಮ ಮಾರ್ಗದರ್ಶನವಾಗಿದೆ.

ಇಂತಹ ಮಹತ್ವದ ಘಟ್ಟದಲ್ಲಿ ಸಹಕಾರಿಗಳಾದ ನಾವು ಕಾರ್ಯನಿರ್ವಹಿಸುವ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕಿದೆ. ವಿಶ್ವ ಮಾರುಕಟ್ಟೆಯಲ್ಲಿ ವಾಣಿಜ್ಯ ಹಾಗೂ ಖಾಸಗಿ ವ್ಯಾಪಾರಿ ಸಂಸ್ಥೆಗಳಿಗೆ ಸಹಕಾರಿ ಕ್ಷೇತ್ರದ ಅಸ್ತಿತ್ವ ಸಮಾನಾಂತರ ಬದಲಿ ವ್ಯವಸ್ಥೆ ಎಂಬ ಅರಿವು ಆಗುವಂತೆ ಸಹಕಾರಿಗಳಾದ ನಾವು ಕಾರ್ಯನಿರ್ವಹಿಸುವುದು ಅಗತ್ಯ. ನಂತರ ಶ್ರೀ ಸಿ.ಎನ್.ಪರಶಿವಮೂರ್ತಿಯವರು ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳ ಪಾತ್ರ ವಿಷಯಗಳ ಬಗ್ಗೆ ಅತ್ಯಂತ ವಿವರವಾಗಿ ವಿಷಯ ಮಂಡಿಸಿರುವುದು ನಂತರ ಸುದೀರ್ಘ ಸಮಾಲೋಚನೆ ನಡೆದಿರುವುದು ಹಾಜರಿದ್ದ ನಿರ್ದೇಶಕರೆಲ್ಲರೂ ಸಂತೋಷವನ್ನು ವ್ಯಕ್ತಪಡಿಸಿರುವುದು ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮ ನಿಜವಾಗಿಯೂ ಅತ್ಯಂತ ಪರಿಣಾಮಕಾರಿಯಾಗಿ ನಡೆದು ಸಹಕಾರಿ ಸಮುದಾಯಕ್ಕೆ ಒಂದು ಮಹತ್ವದ ಸಂದೇಶವನ್ನು ನೀಡಿದೆ ಎಂದು ನಾನು ಭಾವಿಸುತ್ತೇನೆ.

ಮಾನ್ಯ ಸಹಕಾರಿ ಬಂಧುಗಳೇ ಈ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ನಿಮ್ಮ ಸೌಹಾರ್ದ ಸಹಕಾರಿಗಳಲ್ಲಿ ಹಮ್ಮಿಕೊಂಡು ಸುಸ್ಥಿರ ಅಭಿವೃದ್ಧಿಯಲ್ಲಿ ಸಹಕಾರಿ ಕ್ಷೇತ್ರದ ಮಹತ್ವದ ಪಾತ್ರವನ್ನು ನಿರ್ವಹಿಸುವಂತಾಗಲೂ ಎಲ್ಲ ನಿರ್ದೇಶಕರು ಈ ಕ್ಷೇತ್ರದ ಬಗ್ಗೆ ಅರಿವನ್ನು ಆಸಕ್ತಿಯನ್ನು ಹೆಚ್ಚಿಸಿಕೊಳ್ಳಿ. ಈ ಕ್ಷೇತ್ರದ ಬಗ್ಗೆ ಸಕಾರಾತ್ಮಕ ಭಾವನೆಗಳನ್ನು ರೂಢಿಸಿಕೊಂಡು ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲುದಾರರಾಗಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ, ಈ ನಿಟ್ಟಿನಲ್ಲಿ ನಾವೆಲ್ಲ ಕಾರ್ಯ ನಿರ್ವಹಿಸೋಣ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು

ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ.......................................... 2
ಸಂಪಾದಕೀಯ.......................................... 3
ಜ್ಞಾನ ಜ್ಯೋತಿ.......................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು ....
.................................................. 05–13,
ಸೌಹಾರ್ದ ಸಹಕಾರಿಗಳ ಸಮಾಚಾರಗಳು ....
.................................................. 14–19,
**ಲೇಖನಗಳು :**
ಸಹಕಾರ ಅಭಿವೃದ್ಧಿಗೆ ವರದಾನ (ಸಹಕಾರದಿಂದ ಸಮೃದ್ಧಿ ........................................ 20–21
ಸಾರ್ವಜನಿಕ ಸಂಬಂಧಗಲ ನಿರ್ವಹಣೆ ಮತ್ತು ಸಹಕಾರ ಸಂಘಗಳ ಜವಾಬ್ದಾರಿ ........ 29–30
ಸಹಕಾರದಿಂದ ಸಮೃದ್ಧಿಯ ಅರಿವು ಮೂಡುತ್ತಿದೆ
.................................................. 31–34

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳ ಚುನಾವಣೆಗಳು ಅಧಿಕಾರಿಗಳ ಹಾಗೂ ಸಿಬ್ಬಂದಿಯವರ ಕರ್ತವ್ಯ ಹಾಗೂ ಜವಾಬ್ದಾರಿಗಳ ನಿರ್ವಹಣೆಯಲ್ಲಿ ಎಚ್ಚರದ ನಡೆ ಅಗತ್ಯ.

ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಈ ವರ್ಷ 2023 ಜನವರಿ 1 ರಿಂದ ಡಿಸೆಂಬರ 31 ರವರೆಗೆ 500 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳಿಗೆ ಚುನಾವಣೆಗಳು ನಡೆಯಲಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳು ಪಾರದರ್ಶಕವಾಗಿರಬೇಕು ಬಾಹ್ಯ ಹಸ್ತಕ್ಷೇಪಗಳಿಂದ ದೂರವಾಗಿರಬೇಕು. ಯಾವುದೇ ಪಕ್ಷಪಾತ, ಕೋಮು ವ್ಯವಸ್ಥೆ ಇತ್ಯಾದಿಗಳಿಂದ ದೂರವಾಗಿ ವೃತ್ತಿಪರತೆಯನ್ನು ರೂಢಿಸಿಕೊಳ್ಳುವುದು ಅಗತ್ಯ. ಈ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವಲ್ಲಿ ಅಧಿಕಾರಿಗಳ ಹಾಗೂ ಸಿಬ್ಬಂದಿಯವರ ಜವಾಬ್ದಾರಿ ಮಹತ್ವದ್ದಾಗಿದೆ.

ಚುನಾವಣೆಯನ್ನು ಚುನಾವಣಾ ಪೂರ್ವ ಆಂತರಿಕ ವ್ಯವಸ್ಥೆ ಬಾಹ್ಯ ವ್ಯವಸ್ಥೆ ಚುನಾವಣೆ ಪ್ರಕ್ರೀಯೆ ಹಾಗೂ ಚುನಾವಣೆಯ ಫಲಿತಾಂಶ ಹಾಗೂ ಫಲಿತಾಂಶದ ನಂತರ ಹೀಗೆ ಹಂತಗಳನ್ನು ವಿಂಗಡಿಸಿದಾಗ ಚುನಾವಣೆ ಅತ್ಯಂತ ಪಾರದರ್ಶಕತೆಯಿಂದ ಉತ್ತಮವಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ. ಚುನಾವಣಾ ಪೂರ್ವ ಹಂತದಲ್ಲಿ ಸಹಕಾರಿಯ ಸಿಬ್ಬಂದಿಯವರ ಪಾತ್ರ ಮಹತ್ವದ್ದು ಚುನಾವಣೆ ಅಧಿಕಾರಿಗಳನ್ನು ಸಂಪರ್ಕಿಸಬೇಕು ಮತದಾರರ ಪಟ್ಟಿ ಸಿಧ್ಧಪಡಿಸಲು ಅಗತ್ಯ ಮಾಹಿತಿ ಸಿದ್ಧಪಡಿಸಿ ಚುನಾವಣಾಧಿಕಾರಿಗೆ ಸೂಕ್ತ ದಾಖಲೆಗಳೊಂದಿಗೆ ಒದಗಿಸಬೇಕು. ಇದರ ಜೊತೆಗೆ ಆಡಳಿತ ಮಂಡಳಿ ಹಾಗೂ ಚುನಾವಣಾಧಿಕಾರಿಗಳ ಜೊತೆಗೆ ಸಮಾಲೋಚಿಸಿ ಚುನಾವಣೆ ನಡೆಸುವ ಸ್ಥಳ ಮತ್ತು ವ್ಯವಸ್ಥೆಗಳನ್ನು ಸಿದ್ಧಪಡಿಸುವುದು ಮತ್ತು ಚುನಾವಣಾ ವೇಳಾಪಟ್ಟಿಯನ್ನು ಚುನಾವಣಾಧಿಕಾರಿಯಿಂದ ಪಡೆದುಕೊಂಡು ಎಲ್ಲ ಅರ್ಹ ಸದಸ್ಯರಿಗೆ ಅಂಚೆ ಧೃಡೀಕರಣದೊಂದಿಗೆ ಕಳುಹಿಸಿಕೊಡುವ ವ್ಯವಸ್ಥೆಮಾಡಬೇಕು ಸ್ಥಳೀಯ ಪತ್ರಿಕೆಗಳಲ್ಲಿ ಮಾಹಿತಿ ಪ್ರಚಾರ ಆಗಬೇಕು. ಈ ಸಂದರ್ಭಗಳಲ್ಲಿ ಪ್ರತಿಹಂತದಲ್ಲಿಯೂ ಚುನಾವಣಾಧಿಕಾರಿಗಳ ಮಾರ್ಗದರ್ಶನ ಪಡೆದು ಅಗತ್ಯ ದಾಖಲೆಗಳೊಂದಿಗೆ ಕಾರ್ಯನಿರ್ವಹಿಸುವುದು ಅಗತ್ಯ.

ಚುನಾವಣಾಧಿಕಾರಿಯಾದವರು ಸಹಕಾರಿಯ ಆಡಳಿತ ಮಂಡಳಿಯವರ ಸಹಕಾರ ಹಾಗೂ ಸಿಬ್ಬಂದಿಯವರ ನೆರವಿನಿಂದ ಚುನಾವಣಾ ಪ್ರಕ್ರೀಯೇಯನ್ನು ಸಂಪೂರ್ಣ ಪಾರದರ್ಶಕತೆಯಿಂದ ನಡೆಸುವುದು ಪ್ರಥಮ ಕರ್ತವ್ಯ. ಸಹಕಾರ ಕಾಯ್ದೆ ನಿಯಮಗಳು ಸಹಕಾರಿಯ ಉಪವಿಧಿಗಳನ್ನು ಆಧಾರಿಸಿ ಸರಕಾರ, ಸಹಕಾರ ಚುನಾವಣಾ ಪ್ರಾಧಿಕಾರ ಹಾಗೂ ಸಹಕಾರ ಇಲಾಖೆಯವರು ಕಾಲಕಾಲಕ್ಕೆ ನೀಡಿದ ಮಾರ್ಗದರ್ಶನಗಳು, ಹೊರಡಿಸಿದ ಸುತ್ತೋಲೆಗಳ ಮಾರ್ಗದರ್ಶನದಂತೆ ಪ್ರತಿಯೊಂದು ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಅರ್ಹ ಮತದಾರರ ಪಟ್ಟಿ ಸಿದ್ಧಪಡಿಸಿ ಪ್ರಚುರ ಪಡಿಸುವುದು, ಚುನಾವಣಾ ವೇಳಾ ಪಟ್ಟಿಯನ್ನು ಪ್ರಕಟಿಸುವುದು, ಉಮೇದವಾ–ರಿಕೆಗಳನ್ನು ಪಡೆಯುವುದು, ಉಮೇದವಾರರ ಅರ್ಜಿಗಳ ವಿವರಗಳನ್ನು ಉಮೇದವಾರರ ಸಮಕ್ಷಮದಲ್ಲಿ ಅವರು ಸ್ಪರ್ಧಿಸಲು ಇಚ್ಛಿಸುವ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅವರ ಸ್ವ–ವಿವರಗಳನ್ನು ಪರಿಶೀಲಿಸುವುದು, ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವುದು ಅಗತ್ಯವೆನಿಸಿದರೆ ಚುನಾವಣಾ ಪ್ರಕ್ರಿಯೇ ನಡೆಸುವುದು ಮತ ಎಣಿಕೆ ನಂತರ ಗೆಲುವು ಸಾಧಿಸಿರುವ ಅಭ್ಯರ್ಥಿಗಳ ಚುನಾವಣಾ ಫಲಿತಾಂಶ ಘೋಷಿಸುವುದು. ನಂತರ ಚುನಾವಣಾ ಫಲಿತಾಂಶದ ವಿವರಗಳನ್ನು ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಸಹಕಾರಿಯ ನೋಟೀಸ್ ಬೋರ್ಡ್‌ಗೆ ಮತ್ತು ರಾಜ್ಯದ ಸಹಕಾರ ಚುನಾವಣಾ ಪ್ರಾಧಿಕಾರ ಹಾಗೂ ಸಂಯುಕ್ತ ಸಹಕಾರಿಗೆ ಮಾಹಿತಿಗಾಗಿ ಸಲ್ಲಿಸಬೇಕು. ಚುನಾವಣಾ ಪ್ರಕ್ರೀಯೆ ಮುಗಿದ ನಂತರ ಎಲ್ಲ ಅರ್ಹ ಉಮೇದವಾರರ ಸಮಕ್ಷಮದಲ್ಲಿ ಅವುಗಳನ್ನು ಭದ್ರವಾಗಿ ಸೀಲ್ ಮಾಡಿ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾ–ರಿಯವರ ಸುಪರ್ದಿಗೆ ಕೊಡಬೇಕು. ಈ ಎಲ್ಲ ಕರ್ತವ್ಯ ಹಾಗು ಜವಾಬ್ದಾರಿಗಳನ್ನು ಅಧಿಕಾರಿಗಳು ಹಾಗೂ ಸಹಕಾರಿಗಳ ಸಿಬ್ಬಂದಿಯವರು ದಕ್ಷತೆಯಿಂದ ನಿರ್ವಹಿಸಿ ಚುನಾವಣಾ ಪ್ರಕ್ರಿಯೇಗಳನ್ನು ನಿಯಮಾನುಸಾರ ಸುಸೂತ್ರವಾಗಿ ನಡೆಸಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

## "ಸಹವಾಸ ಹೇಗಿರಬೇಕು?"

ನಮ್ಮ ಸಮಯವನ್ನು ಕಳೆಯಲು ನಾವು ಇಷ್ಟಪಡುವ ಸ್ನೇಹಿತ, ನಮ್ಮ ಸಂತೋಷ ಮತ್ತು ದುಃಖಗಳನ್ನು ಹಂಚಿಕೊಳ್ಳಬಹುದು. ಗೆಳೆತನ ಪ್ರಪಂಚದ ಅತ್ಯಂತ ಸುಂದರವಾದ ಸಂಬಂಧಗಳಲ್ಲಿ ಒಂದಾಗಿದೆ.

ಸ್ನೇಹವು ಯಾರಾದರೂ ಬಯಸಬಹುದಾದ ಅತ್ಯುತ್ತಮ ಬಂಧಗಳಲ್ಲಿ ಒಂದಾಗಿದೆ. ಅವರು ನಂಬಬಹುದಾದ ಸ್ನೇಹಿತರನ್ನು ಹೊಂದಿರುವವರು ಅದೃಷ್ಟವಂತರು. ಸ್ನೇಹವು ಇಬ್ಬರು ವ್ಯಕ್ತಿಗಳ ನಡುವಿನ ಸಮರ್ಪಿತ ಸಂಬಂಧವಾಗಿದೆ. ಇಬ್ಬರೂ ಪರಸ್ಪರ ಅಪಾರ ಕಾಳಜಿ ಮತ್ತು ಪ್ರೀತಿಯನ್ನು ಅನುಭವಿಸುತ್ತಾರೆ. ಸಾಮಾನ್ಯವಾಗಿ, ಒಂದೇ ರೀತಿಯ ಆಸಕ್ತಿಗಳು ಮತ್ತು ಭಾವನೆಗಳನ್ನು ಹೊಂದಿರುವ ಇಬ್ಬರು ವ್ಯಕ್ತಿಗಳಿಂದ ಸ್ನೇಹವನ್ನು ಹಂಚಿಕೊಳ್ಳಲಾಗುತ್ತದೆ.

ಜೀವನದ ಹಾದಿಯಲ್ಲಿ ನೀವು ಅನೇಕರನ್ನು ಭೇಟಿಯಾಗುತ್ತೀರಿ ಆದರೆ ಕೆಲವರು ಮಾತ್ರ ನಿಮ್ಮೊಂದಿಗೆ ಶಾಶ್ವತವಾಗಿ ಉಳಿಯುತ್ತಾರೆ. ಸ್ನೇಹವು ನೀವು ಯಾರಿಗಾದರೂ ಪ್ರಸ್ತುತಪಡಿಸಬಹುದಾದ ಅತ್ಯಂತ ಸುಂದರವಾದ ಉಡುಗೊರೆಯಾಗಿದೆ. ಇದು ವ್ಯಕ್ತಿಯೊಂದಿಗೆ ಶಾಶ್ವತವಾಗಿ ಉಳಿಯುವ ಸಂಬಂಧಗಳಲ್ಲಿ ಒಂದಾಗಿದೆ. ಒಂದು ಆಳವಾದ ಬಾವಿಯಲ್ಲಿರುವ ಸುಜಲವನ್ನು ಸವಿಯುವುದಕ್ಕೆ ಆ ಬಾವಿಗೆ ಮೆಟ್ಟಿಲುಗಳಿರಬೇಕು: ಇಲ್ಲವಾದರೆ ನಮ್ಮ ಹತ್ತಿರ ಒಂದು ಹಗ್ಗವಾದರು ಬೇಕು ಅಲ್ಲವೇ ಹಾಗೇಯೇ ನಮ್ಮ ಸರಿ ತಪ್ಪುಗಳನ್ನು ಸರಿಪಡಿಸಲು ಸದಾ ನಮ್ಮೊಂದಿಗೆ ಸ್ನೇಹಿತ ಅಥವಾ ಒಂದು ಉತ್ತಮ ಸಹವಾಸಬೇಕು. ಆ ಸಹವಾಸ ಹೇಗಿರಬೇಕು? ನಾವು ಎಂತವರ ಜೊತೆ ಸಹವಾಸ ಮಾಡಬೇಕು? ಯಾರೊಂದಿಗೆ ಸ್ನೇಹ ಮಾಡಬೇಕು? ಎಂಬುದನ್ನು ಒಂದು ಕಥೆಯಲ್ಲಿ ತಿಳಿಸುತ್ತೇನೆ.

ಒಂದು ನದಿಯ ತಟದಲ್ಲಿ ಒಂದು ಕಪ್ಪೆ ಇತ್ತು ಅದರ ಬಳಿಯೇ ಒಂದು ಬಿಲದಲ್ಲಿ ಒಂದು ಇಲಿ ವಾಸವಾಗಿತ್ತು. ಹೀಗೆ ದಿನ ಕಳೆದಂತೆ ಕಪ್ಪೆ– ಇಲಿ ಎರಡು ಸ್ನೇಹ ಬೆಳೆಸಿದವು. ಕಪ್ಪೆ ಇಲಿಯ ಸ್ನೇಹವು ಒಂದಕ್ಕೊಂದು ಬಿಟ್ಟರಲಾರಂತಹ ಸಹವಾಸವಾಗಿಬಿಟ್ಟಿತ್ತು. ಆಹಾರ ಹುಡುಕ್ಕುತಾ ಒಮ್ಮ ಇಲಿ ದೂರವಾಯಿತು ಹೇಗೋ ಮತ್ತೆ ಸೇರಿಕೊಂಡಂವು ಕಪ್ಪೆ–ಇಲಿ ಇಬ್ಬರು ಯೋಚಿಸಿದರು. ಅವುಗಳು "ನಾನು ನೀನು ಸದಾ ಜೊತೆಯಲ್ಲಿಯೇ ಇರಬೇಕು ಆದರೆ ಹೇಗೆ ತಟ್ಟನೆ ಕಪ್ಪೆಯು ಹೇಳಿತು ನೋಡು ನಾವಿಬ್ಬರೂ ಸದಾ ಒಟ್ಟಿಗೆ ಇರಲು ಇಬ್ಬರ ಕಾಲಿಗೂ ಒಂದು ದಾರವನ್ನು ಕಟ್ಟಿಕೊಳ್ಳೊಣ ಯಾವಾಗಲೂ ಒಟ್ಟಿಗೆ ಇರುತ್ತೇವೆ. ಎಂದು ಇಬ್ಬರ ಕಾಲಿಗೆ ದಾರ ಕಟ್ಟಿಕೊಂಡವು. ಪ್ರತಿ ದಿನ ಆಹಾರ ಹುಡುಕಲು ಹತ್ತಿರದಲ್ಲಿಯೇ ಇದ್ದವು ಸುತ್ತಮುತ್ತಲಿನಲ್ಲಿ ಕಪ್ಪೆಗೆ ಆಹಾರ ಕಾಣಿಸಲಿಲ್ಲ ನದಿಯ ಕಡೆಗೆ ಒಮ್ಮೆ ಕಣ್ಣುಹಾಯಿಸಿತು ನೋಡುತ್ತಿದ್ದಂತೆಯೇ ಒಂದು ಮಿಡತೆ ಇರುವುದನ್ನು ನೋಡಿ ಆಹಾ! ಒಳ್ಳೆಯ ಊಟ ನನಗೆ ಎಂದು ಇಲಿಯ ಬಗ್ಗೆ ಯೋಚಿಸದೇ ನೀರಿನೊಳಗೆ ಇಳಿಯಿತು ಹಾಗೇಯೇ ಕಾಲಿಗೆ ದಾರ ಕಟ್ಟಿಕೊಂಡಿದ್ದ ಇಲಿಯು ಸಹ ನೀರಿನಲ್ಲಿ ಹೋಗಬೇಕಾಯಿತು. ಆದರೆ ಇಲಿ ಜಲಚರವಲ್ಲದಾಗಿರುವುದರಿಂದ ಸತ್ತೆ ಹೋಯಿತು. ಸತ್ತ ಇಲಿ ನೀರಿನ ಮೇಲೆ ಬಂದಾಗ ಒಂದು ಕಾಗೆ ನೋಡಿ ಓಹೋ ! ಇಂದು ಭರ್ಜರಿ ಊಟ ಎನಗೆ ಎಂದು ಬಂದು ಇಲಿಯನ್ನು ಕಚ್ಚಿಕೊಂಡು ಹಾರಿತು ಅದರೊಂದಿಗೆ ದಾರ ಕಟ್ಟಿಕೊಂಡ ಕಪ್ಪೆಯು ಸಹ ಮೇಲಕ್ಕೆ ಹೋಗಿ ಪ್ರಾಣ ಬಿಟ್ಟಿತು.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ. ವಿಜಯಪುರ
ಪ್ರವಚನ ಸಂಗ್ರಹ : ಶ್ರೀಮತಿ ಸವಿತ ಎನ್. ಇ.

ತಿಳುವಳಿಕೆ ಎನ್ನುವುದು ಜ್ಞಾನಕ್ಕಿಂತ ಹೆಚ್ಚು ಆಳವಾಗಿದೆ. ನಮ್ಮನ್ನು ಗೊತ್ತಿರುವವರು ಬಹಳ ಮಂದಿ ಇದ್ದಾರೆ ಆದರೆ ನಮ್ಮನ್ನು ಅರ್ಥ ಮಾಡಿಕೊಳ್ಳುವವರು ಬಹಳ ಕಡಿಮೆ. ಅದೇ ಕಪ್ಪೆ ನೀರಿಗೆ ಇಳಿಯುವ ಮುನ್ನ ಒಮ್ಮೆ ಇಲಿಯ ಬಗ್ಗೆ ಯೋಚಿಸಬೇಕಿತ್ತು ಅಲ್ಲವೇ? ನಮ್ಮ ಸಮಸ್ಯೆಗಳು, ಒತ್ತಡ ಮತ್ತು ಒಂಟಿತನವನ್ನು ಜಯಿಸಲು ಒಬ್ಬ ಸ್ನೇಹಿತ ಮಾತ್ರ ಸಹಾಯ ಮಾಡುತ್ತಾನೆ. ಆದರೆ ನಮ್ಮ ಆಯ್ಕೆ ಸಹವಾಸವನ್ನು ಮಾಡುವ ಮೊದಲು ಇವರ ಸಹವಾಸ ನಮಗೆ ಸರಿಯೇ ಎಂದು ಒಮ್ಮೆ ಯೋಚಿಸುವುದು ಸೂಕ್ತ. ಆದರೆ ಸ್ನೇಹ/ಗೆಳೆತನ/ಸಹವಾಸ ಮಾನವರ ಭಾಗವಾಗಿರುವುದರಿಂದ, ನಮ್ಮ ಎಲ್ಲಾ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಜೀವನಕ್ಕೆ ಉತ್ತಮ ಸ್ನೇಹಿತರು ಇರಬೇಕು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 26107 ಆಗಿರುತ್ತದೆ. ಇವುಗಳ ಪೈಕಿ 14,533 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 11,533

**ಜನವರಿ ತಿಂಗಳ ಪ್ರಕರಣಗಳು :** ದಾವಾಪ್ರಕರಣ 837 ಇತ್ಯರ್ಥಗೊಂಡ ಪ್ರಕರಣಗಳು 297.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 5,438ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1028 ಪ್ರಕರಣಗಳು ಇತ್ಯರ್ಥಗೊಂಡಿದ್ದು. 4410 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಜನವರಿ ತಿಂಗಳಿನಲ್ಲಿ 87 ಅಮಲ್ಜಾರಿ ಪ್ರಕರಣ ದಾಖಲಾಗಿರುತ್ತವೆ.

## ಸಂಯುಕ್ತ ಸಹಕಾರಿಯ ನಿರ್ದೇಶಕರಿಗೆ ತರಬೇತಿ



**ಬೆಂಗಳೂರು :** ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗಾಗಿ ತರಬೇತಿ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ತರಬೇತಿ ಸಭಾಂಗಣವನ್ನು ಏರ್ಪಡಿಸಲಾಗಿತ್ತು. ಸಂಯುಕ್ತ ಸಹಕಾರಿಯ ನಿರ್ದೇಶಕರಿಗೆ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುವುದು ಅವಶ್ಯಕವಾಗಿರುವುದರಿಂದ ಸಂಯುಕ್ತ ಸಹಕಾರಿ ಪ್ರತಿವರ್ಷ ನಿರ್ದೇಶಕರುಗಳಿಗೆ ತರಬೇತಿಯನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ಶಾಸನಾತ್ಮಕ ಕಾರ್ಯನಿರ್ವಹಣೆಗಾಗಿ ಈ ತರಬೇತಿಗಳು ಅಗತ್ಯವಾಗುತ್ತವೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಶ್ರೀಮತಿ ವಿಜಯಾರವರಿಂದ ಪ್ರಾರ್ಥನೆ. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಜಿ.ಎನ್ ಪಾಟೀಲರವರು ಸ್ವಾಗತ ಕೋರಿದರು. ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲರವರಿಂದ ಪ್ರಾಸ್ತಾವಿಕ ಭಾಷಣ ಮಾಡುತ್ತ ಸಂಯುಕ್ತ ಸಹಕಾರಿಯ ವತಿಯಿಂದ ಸಂಯುಕ್ತ ಸಹಕಾರಿಯ ನಿರ್ದೇಶಕರಿಗೆ ನಿರಂತರ ತರಬೇತಿ ನೀಡುತ್ತ ಬಂದಿದೆ ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗೆ, ಸಿಬ್ಬಂದಿಯವರಿಗಾಗಿ ವಿವಿಧ-ರೀತಿಯ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಉತ್ತಮ ವಿಷಯಗಳನ್ನು ಉತ್ತಮ ನುರಿತ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆಮಾಡಿ ಉತ್ತಮ ಗುಣಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದರು. ಸಹಕಾರಿ ಕ್ಷೇತ್ರದ ಸವಾಲುಗಳು ಹಾಗೂ ಅವಕಾಶಗಳು ಮತ್ತು ಸುಸ್ಥಿರ ಅಭಿವೃದ್ಧಿಯಲ್ಲಿ ಸಹಕಾರಿ ಕ್ಷೇತ್ರದ ಪಾತ್ರ ಎಂಬ ವಿಷಯಗಳ ಬಗ್ಗೆ ವಿವರವಾದ ಉಪನ್ಯಾಸವನ್ನು ಚಾಣಕ್ಯ ವಿಶ್ವವಿದ್ಯಾಲಯದ ಕುಲಪತಿಗಳು ಶ್ರೀ ಯಶವಂತ ಡೋಂಗ್ರೆಯವರು ಉಪನ್ಯಾಸ ನೀಡಿದರು.

ನಂತರ 2ನೇ ಅವಧಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ 1997ರ ಸೌಹಾರ್ದ ಸಹಕಾರ ಕಾಯ್ದೆ ಹಾಗೂ 1959 ರ ಸಹಕಾರ ಸಂಘಗಳ ಕಾಯ್ದೆಗಳ ವ್ಯತ್ಯಾಸಗಳು, ನಿರ್ದೇಶಕರುಗಳ ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ನಿವೃತ್ತ ಅಪರ ನಿಬಂಧಕರಾದ ಶ್ರೀ ಸಿ.ಎನ್ ಪರಶಿವಮೂರ್ತಿಯವರು ಉಪನ್ಯಾಸ ನೀಡುವುದರ ಜೊತೆಗೆ ಸಂಯುಕ್ತ ಸಹಕಾರಿಯ ಮುಂದಿನ ನಡೆ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಸಂಯುಕ್ತ ಸಹಕಾರಿಯು ನಿರ್ವಹಿಸಬೇಕಾದ ಕಾರ್ಯಚಟುವಟಿಕೆಗಳ ಬಗ್ಗೆ ಸುದೀರ್ಘ ಸಮಾಲೋಚನೆ ಮಾಡಿದರು.

ಕಾರ್ಯಕ್ರಮ ಅತ್ಯಂತ ಪರಿಣಾಮಕಾರಿಯಾಗಿತ್ತು. ಈ ತರಹದ ತರಬೇತಿ ಕಾರ್ಯಕ್ರಮಗಳನ್ನು ವಿವಿಧ ರೀತಿಯ ವಿಷಯಗಳ ಆಯ್ಕೆ ಮಾಡಿ ಪ್ರತಿ ಆಡಳಿತ ಮಂಡಳಿ ಸಭೆಯ ನಂತರದಲ್ಲಿ ಏರ್ಪಡಿಸಬೇಕೆಂದು ನಿರ್ದೇಶಕರುಗಳು ಅಭಿಪ್ರಾಯ ತಿಳಿಸಿದರು. ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನಕುಮಾರರವರು ವಂದನಾರ್ಪಣೆ ಸಲ್ಲಿಸಿದರು.

## ಶ್ರೀ ಸಿ. ಎನ್. ಪರಶಿವಮೂರ್ತಿಯವರಿಂದ ಸಿಬ್ಬಂದಿಗಳಿಗೆ ಮಾರ್ಗದರ್ಶನ

### ಸಿಬ್ಬಂದಿಗಳು ಸಂಸ್ಥೆಯ ಆಸ್ತಿ, ಶಿಸ್ತು ಮತ್ತು ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿ – ಶ್ರೀ ಸಿ.ಎಸ್ ಪರಶಿವಮೂರ್ತಿ



**ಬೆಂಗಳೂರು :** ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರಾಗಿ ಕಳೆದ ಆರು ವರ್ಷಗಳಿಂದ ಕಾರ್ಯನಿರ್ವಹಿಸಿರುವ ಶ್ರೀ ಸಿ. ಎನ್. ಪರಶಿವಮೂರ್ತಿಯವರು ದಿನಾಂಕ 23.01.2023 ರಂದು ಸ್ವ-ಇಚ್ಛೆಯಿಂದ ಸಮಿತಿಯ ಸದಸ್ಯತ್ವದಿಂದ ಬಿಡುಗಡೆ ಅಪೇಕ್ಷಿಸಿ ಬಿಡುಗಡೆಯಾದ ನಂತರ ಅವರನ್ನು ಬೀಳ್ಕೋಡಲಾಯಿತು. ಈ ಸಂದರ್ಭದಲ್ಲಿ ಶ್ರೀ ಸಿ. ಎನ್. ಪರಶಿವಮೂರ್ತಿ ಇವರಿಗೆ ಆಡಳಿತ ಮಂಡಳಿಯ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಎಲ್ಲ ಸಿಬ್ಬಂದಿಗಳ ಪರವಾಗಿ ಸನ್ಮಾನಿಸಲಾಯಿತು. ಅಧಿಕಾರಿಗಳು/ ಸಿಬ್ಬಂದಿಗಳು ಸಂಸ್ಥೆಯ ಆಸ್ತಿ, ಕೆಲಸದಲ್ಲಿ ಶಿಸ್ತು ಹಾಗೂ ಪ್ರಾಮಾಣಿಕತೆ ಬಹಳ ಮುಖ್ಯವಾಗಿರುತ್ತದೆ. ನಾವು ಸಂಸ್ಥೆಗಾಗಿಯೇ ಹೊರತು ಸಂಸ್ಥೆ ನಮಗಾಗಿ ಅಲ್ಲ ಸಂಸ್ಥೆಯಲ್ಲಿ ನಾವು ಉತ್ತಮವಾಗಿ ನಮ್ಮನ್ನು ನಾವು ತೊಡಗಿಸಿಕೊಂಡು ಕಾರ್ಯನಿರ್ವಹಿಸಬೇಕು ಸಂಯುಕ್ತ ಸಹಕಾರಿಯನ್ನು ಮಾಹಿತಿ ನೀಡುವಂತಹ ಸಂಸ್ಥೆಯನ್ನಾಗಿ ಮಾಡುವುದು ಸಿಬ್ಬಂದಿಗಳ ಕೈಯಲ್ಲಿ ಇರುತ್ತದೆ ಎಂದು ಸಿಬ್ಬಂದಿಗಳಿಗೆ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು, ಆರ್‌ಐಸಿಎಂನ ಮಾನ್ಯ ಪ್ರಾದೇಶಿಕ ನಿರ್ದೇಶಕರಾದ ಶ್ರೀ ಇಳಂಗೋವನ್, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು, ಸಂಯುಕ್ತ ಸಹಕಾರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಗೆ ಶ್ರೀ ಸ್ವಾಮಿ ವಿಗ್ಯಾನಾನಂದಜಿ ರವರ ಭೇಟಿ - ರೈತರ ಆರ್ಥಿಕ ಸಬಲತೆಗೆ ಕರೆ




**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಬೆಂಗಳೂರಿಗೆ ವಿಶ್ವ ಹಿಂದೂ ಆರ್ಥಿಕ ವೇದಿಕೆ ಸ್ಥಾಪಕರು ಮತ್ತು ಸ್ಥಾಪಕ ಅಧ್ಯಕ್ಷರು ಹಾಗೂ ವಿಶ್ವ ಹಿಂದೂ ಪರಿಷತ್‌ನ ಜಂಟಿ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಸ್ವಾಮಿ ವಿಗ್ಯಾನಾನಂದಜಿರವರು ದಿನಾಂಕ 23.01.2023ರಂದು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಕುರಿತು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಪ್ರಾಸ್ತಾವಿಕ ನುಡಿಯಲ್ಲಿ ತಿಳಿಸಿದರು. ಭಾರತದಲ್ಲಿ ಬಡತನ ನಿರ್ಮೂಲನೆಯಾಗುವುದು ಕೇವಲ ರೈತರು ಆರ್ಥಿಕವಾಗಿ ಸಬಲರಾದಗ ಮಾತ್ರ ಸಾಧ್ಯ ಎಂದು ಶ್ರೀಗಳು ತಿಳಿಸಿದರು ಹಾಗೂ ಆರ್ಥಿಕ ಸಬಲತೆ ಕುರಿತು ಚರ್ಚಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದಶ್ರೀ ಜಿ. ನಂಜನಗೌಡರವರು, ಮಾನ್ಯ ಸಹಕಾರಿಗಳ ಅಪರ ನಿಬಂಧಕರಾದ(ನಿ) ಶ್ರೀ ಸಿ. ಎನ್. ಪರಶಿವಮೂರ್ತಿರವರು ಹಾಗೂ ಹಿರಿಯ ಸಹಕಾರಿಗಳು ಮತ್ತು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ದಾವಣಗೆರೆ ನೂತನ ಕಛೇರಿಯ ಉದ್ಘಾಟನೆ ಮತ್ತು ಪೂಜಾ ಕಾರ್ಯಕ್ರಮ




**ದಾವಣಗೆರೆ :** ದಿನಾಂಕ 30.01.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ದಾವಣಗೆರೆ ಜಿಲ್ಲಾ ಸಂಪರ್ಕ ಕಚೇರಿ ಹಾಗೂ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ದಾವಣಗೆರೆ. ಇವುಗಳ ನೂತನ ಕಚೇರಿಯ ಉದ್ಘಾಟನೆ ಮತ್ತು ಪೂಜಾ ಕಾರ್ಯಕ್ರಮವನ್ನು ದಾವಣಗೆರೆಯ ನೂತನ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ನೂತನ ಕಚೇರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು, ಬಳಿಕ ಪೂಜಾ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ದಾವಣಗೆರೆ ಜಿಲ್ಲೆಯ ಮಾನ್ಯ ನಿರ್ದೇಶಕರಾದ ಶ್ರೀ ಎಂ. ಆರ್. ಪ್ರಭುದೇವ್ ರವರು, ದಾವಣಗೆರೆ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್. ಎಂ. ನಾಗರಾಜ್ ರವರು, ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಉಮೇಶ್ ಶೆಟ್ಟಿ ರವರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ್ ಕೊರಟಕರ್ ರವರು, ಸೌಹಾರ್ದ ಜಿಲ್ಲಾ ಸಂಯೋಜ–ಕರಾದ ಶ್ರೀ ನಟರಾಜ ರವರು, ಒಕ್ಕೂಟದ ನಿರ್ದೇಶಕರುಗಳು, ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳು, ನಿರ್ದೇಶಕರುಗಳು, ಮುಖ್ಯ ಕಾರ್ಯನಿರ್ವಾಹಕರುಗಳು ಉಪಸ್ಥಿತರಿದ್ದರು. ಪೂಜಾ ಕಾರ್ಯಕ್ರಮದ ನಂತರ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ನಂತರ ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಜಿಲ್ಲಾ ಸಂಯೋಜಕರು ಕೆಲವು ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಚುನಾವಣೆ ಪ್ರಕ್ರಿಯೆಗಳ ಬಗ್ಗೆ ಮಾಹಿತಿ ನೀಡಿದರು.

### ದಾವಣಗೆರೆ ಜಿಲ್ಲಾ ಸಂಪರ್ಕ ಕಛೇರಿಯ ನೂತನ ವಿಳಾಸ

ದಾವಣಗೆರೆ ಜಿಲ್ಲಾ ಸಂಪರ್ಕ ಕಚೇರಿ, ನಂ.4068/84, 1ನೇ ಮಹಡಿ, ಡಿ.ಎ.ಕೆ ಬಡಾವಣೆ, ಹೋಟೆಲ್ ಸವಣೂರು ಪ್ಲಾಜಾ ಎದುರು, ನೀರಿನ ಟ್ಯಾಂಕ್ ಹತ್ತಿರ, ದಾವಣಗೆರೆ–577006

## ಭೇಟಿ



**ಬೆಳಗಾವಿ :** ದಿನಾಂಕ 20 ಜನವರಿ 2023ರಂದು ಸಂಯುಕ್ತ ಸಹಕಾರಿಯ ವಿಜಯಪುರ ಜಿಲ್ಲೆಯ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ, ಇವರು ಬೆಳಗಾವಿ ಪ್ರಾಂತೀಯ ಕಛೇರಿಗೆ ಭೇಟಿ ನೀಡಿದರು. ಬೆಳಗಾವಿ ಪ್ರಾಂತೀಯ ಕಛೇರಿ ಹಾಗೂ ಟಾಸ್ಕ್ ಫೋರ್ಸ್ ವಿಭಾಗದ ಕಾರ್ಯಚಟುವಟಿಕೆಯ ಬಗ್ಗೆ ವಿಚಾರಿಸಿದರು ಹಾಗೂ ಸಲಹೆ ಸೂಚನೆಗಳು ನೀಡಿದರು.

## ಸಂಭ್ರಮದ ಗಣರಾಜ್ಯೋತ್ಸವ ಆಚರಣೆ

## ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 74ನೇ ಗಣರಾಜ್ಯೋತ್ಸವ ದಿನಾಚರಣೆ.



**ಬೆಂಗಳೂರು** : ದಿನಾಂಕ 26.01.2023 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ 74ನೇಯ ಗಣರಾಜ್ಯೋತ್ಸವಾದ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರು, ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮೈಸೂರು** : ದಿನಾಂಕ 26.01.2023 ರಂದು ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಕಛೇರಿಯಲ್ಲಿ 74ನೇ ಗಣರಾಜ್ಯೋತ್ಸವದ ಪ್ರಯುಕ್ತ ಧ್ವಜಾರೋಹಣವನ್ನು ಸರಸ್ವತಿ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಇಂದ್ರೇಶ್ ರವರು ನೆರವೇರಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ಸ್ಥಳೀಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು, ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೆಳಗಾವಿ** : ದಿನಾಂಕ 26.01.2023 ರಂದು ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ 74ನೇ ಗಣರಾಜ್ಯೋತ್ಸವದ ಪ್ರಯುಕ್ತ ಧ್ವಜಾರೋಹಣವನ್ನು ಮಾನ್ಯ ಸಹಕಾರಿ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ರವೀಂದ್ರ ಪಾಟೀಲ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರುಗಳು ಕೆನರಾ ಬ್ಯಾಂಕ ಗ್ರಾಮೀಣ ಸ್ವ–ಉದ್ಯೋಗ ತರಬೇತಿ ಸಂಸ್ಥೆಯ ಮುಖ್ಯಸ್ಥರು ಹಾಗೂ ಸಿಬ್ಬಂದಿಗಳು, ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಕಛೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಕಲಬುರಗಿ** : ದಿನಾಂಕ 26.01.2023 ರಂದು ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಚೇರಿಯಲ್ಲಿ 74ನೇ ಗಣರಾಜ್ಯೋತ್ಸವ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಸ್ಥಳೀಯ ಸಹಕಾರಿಯ ಪ್ರತಿನಿಧಿಗಳು ಹಾಗೂ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.



### ಸಂವಿಧಾನ ಆಶಯಗಳನ್ನು ಅನುಷ್ಠಾನಗೊಳ್ಳಲಿ – ಜ್ಯಾಂತೀಕರ್

**ಬೀದರ** : ಭಾರತ ಸಂವಿಧಾನವು ವಿಶ್ವದಲ್ಲಿಯ ಮಾದರಿ ಸಂವಿಧಾನವಾಗಿದೆ ಭಾರತೀಯರಾದ ನಾವು ಅದರ ಅರ್ಥ ಮತ್ತು ಆಶಯಗಳನ್ನು ಕಾರ್ಯಗತಗೊಳ್ಳಿಸಬೇಕು ಪ್ರತಿಯೊಬ್ಬರು ಸಂವಿಧಾನವನ್ನು ತಿಳಿದುಕೊಂಡು ನಡೆಯಬೇಕು ಎಂದು ಗುರುನಾಥ ಜ್ಯಾಂತಿಕರ್ ತಿಳಿಸಿದರು. ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಕಛೇರಿಯಲ್ಲಿ 74ನೇ ಗಣರಾಜೋತ್ಸವದ ನಿಮಿತ್ಯ ಧ್ವಜಾರೋಹಣ ನೇರವೆರಿಸಿ ಮಾತನಾಡಿದರು.

ಧ್ವಜಾರೋಹಣ ಕಾರ್ಯಕ್ರಮದಲ್ಲಿ ಒಕ್ಕೂಟ ಉಪಾಧ್ಯಕ್ಷರಾದ ಸಂಜೀವಕುಮಾರ, ಸಂಜಯ ಕ್ಯಾಸಾ, ಶಿವಬಸಪ್ಪ ಚನ್ನಮಲೆ, ಶ್ರೀಕಾಂತ ಸ್ವಾಮಿ ಸೋಲಪೂರ, ಸಹಕಾರಿಗಳಾದ ಶ್ರೀಕಾಂತ ಮೊದಿ, ನಾಗಶೆಟ್ಟಿ ಪಾಟೀಲ್, ಶಿವರಾಜ ಹೂಗಾರ, ಮಾನಶೆಟ್ಟಿ ಬೆಳಕೆರೆ, ನಿವೃತ ಅಭಿಯೋಜಕರಾದ ರಾಮಸಿಂಗ ರಾಠೋಡ, ನ್ಯಾಯವಾದಿಗಳಾದ ಮಲ್ಲಿಕಾರ್ಜುನ ಮೈಲಾರೆ, ಮಹ್ಮದ ಸೈಫ್, ವಿಜಕುಮಾರ ಗಾಜರೆ, ಅಂಬಿಕಾ, ಅಮೃತ ಹೊಸಮನಿ ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ ವಿಶೇಷ ಪ್ರಕಟಣೆ

### "ಸೌಹಾರ್ದ ಸಹಕಾರಿಗಳ ಹೂಡಿಕೆ – ಸೌಹಾರ್ದ ಸಹಕಾರಿಗಳ ಅಧಿನಿಯಮ ಕಲಂ 18 ಪಾಲಿಸುವುದು ಅವಶ್ಯಕ.

**ವಿಶೇಷ ಸೂಚನೆ:**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ–1997ರ ಕಾಯ್ದೆ ಕಲಂ 18ರಲ್ಲಿ ತಿಳಿಸಿರುವಂತೆ ಮಾತ್ರ ಹೂಡಿಕೆ ಮಾಡಲು ಅವಕಾಶವಿರುತ್ತದೆ. ಆದರೆ ಕೆಲವೊಂದು ಸೌಹಾರ್ದ ಸಹಕಾರಿಗಳು ಕಾಯ್ದೆ ಕಲಂ 18ರಲ್ಲಿ ತಿಳಿಸಿರುವಂತೆ ಹೂಡಿಕೆಯನ್ನು ಮಾಡದೆ ಕಾಯ್ದೆಯನ್ನು ಉಲ್ಲಂಘಿಸಿರುವುದನ್ನು ಸಂಯುಕ್ತ ಸಹಕಾರಿಯು ಗಮನಿಸಿರುತ್ತದೆ. ಈ ಹಿಂದೆ ದಿನಾಂಕ 01.01.2021ರಂದು ಸಂಯುಕ್ತ ಸಹಕಾರಿಯಿಂದ ಆರ್ಥಿಕ ಸಬಲತೆ ಮಾನದಂಡಗಳ ಸುತ್ತೋಲೆಯನ್ನು ನೀಡಲಾಗಿದ್ದು ಅದರಲ್ಲಿ "ಎಫ್" ವಿಭಾಗದಲ್ಲಿ ಹೂಡಿಕೆ ಕುರಿತು ಈ ಕೆಳಗಿನಂತೆ ಮಾರ್ಗಸೂಚಿಯನ್ನು ನೀಡಲಾಗಿದೆ.

1. ಸೌಹಾರ್ದ ಸಹಕಾರಿಗಳು ತಕ್ಷಣದ ಬಳಕೆಗೆ ಅಗತ್ಯವಿರದ ನಿಧಿಗಳನ್ನು ಹಾಗೂ ಮೀಸಲು ನಿಧಿಯನ್ನು ಸೌಹಾರ್ದ ಸಹಕಾರಿ ಕಾಯ್ದೆ ಕಲಂ.18 ರಂತೆ, ಸರ್ಕಾರದಿಂದ ಅನುಮೋದಿತವಾದ ಭದ್ರತೆಗಳಲ್ಲಿ ಅಥವಾ ಸಹಕಾರಿ ಬ್ಯಾಂಕು ಅಥವಾ ಅನುಸೂಚಿತ ಬ್ಯಾಂಕ್‌ನಲ್ಲಿ ಮಾತ್ರ ಹೂಡಿಕೆ ಮಾಡತಕ್ಕದ್ದು.
2. ಸಹಕಾರಿಗಳು ಹೆಚ್ಚಿನ ಮೊತ್ತವನ್ನು ಒಂದೇ ಬ್ಯಾಂಕ್/ಸರ್ಕಾರಿ ಭದ್ರತೆಯಲ್ಲಿ ಹೂಡಿಕೆ ಮಾಡುವ ಬದಲು ಬೇರೆ ಬೇರೆ ಬ್ಯಾಂಕ್/ಸರ್ಕಾರಿ ಭದ್ರತೆಗಳಲ್ಲಿ ಒಟ್ಟೂ ಹೂಡಿಕೆಯ ಶೇ.20 ಕ್ಕಿಂತ ಕಡಿಮೆ ಮೊತ್ತವನ್ನು ಪ್ರತ್ಯೇಕವಾಗಿ ಹೂಡಿಕೆ ಮಾಡುವುದು ಸೂಕ್ತವಾಗಿರುತ್ತದೆ. ಹೂಡಿಕೆಯ ಬಗ್ಗೆ ಸೂಕ್ತ ನಿಯಮಗಳನ್ನು ಆಡಳಿತ ಮಂಡಳಿಯು ರಚಿಸಿಕೊಂಡು ಸಾಮಾನ್ಯ ಸಭೆಯ ಅನುಮೋದನೆ ಪಡೆದುಕೊಳ್ಳತಕ್ಕದ್ದು.
3. ಸೌಹಾರ್ದ ಸಹಕಾರಿಗಳು ಪ್ರಾಥಮಿಕ ಸಹಕಾರಿ/ಸಹಕಾರ ಸಂಘ/ಸಕ್ಕರೆ ಕಾರ್ಖಾನೆ ಸೇರಿದಂತೆ ಅಂತಹ ಯಾವುದೇ ಸಂಸ್ಥೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.
4. ಸೌಹಾರ್ದ ಸಹಕಾರಿಗಳು ಶೇರು ಮಾರುಕಟ್ಟೆ/ಮ್ಯೂಚುವಲ್ ಫಂಡ್/ಬಿಟ್ ಕಾಯಿನ್/ಕ್ರಿಪ್ಟೊ ಕರೆನ್ಸ್/ಯುಲಿಫ್ ಲಿಂಕ್‌ಡ್ ಸೇರಿದಂತೆ, ಅಸಲು ಮತ್ತು ನಿಶ್ಚಿತ ಬಡ್ಡಿಗೆ ಖಾತರಿ ಇಲ್ಲದ ಯೋಜನೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.
5. ಸೌಹಾರ್ದ ಸಹಕಾರಿಗಳ ಹೂಡಿಕೆಯಿಂದ ಆದಾಯ ಅಥವಾ ನಷ್ಟ ಉಂಟಾದಲ್ಲಿ ಅದನ್ನು ಆದಾಯ/ವೆಚ್ಚ ತಃಖ್ತೆಯಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.

ಈ ಮೇಲ್ಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ತಿಳಿಸಿದೆ. ಒಂದು ವೇಳೆ ಮುಂದಿನ ದಿನಗಳಲ್ಲಿ ಸೌಹಾರ್ದ ಕಾಯ್ದೆ ಕಲಂ 18ನ್ನು ಹಾಗೂ ಸಂಯುಕ್ತ ಸಹಕಾರಿಯ ಸುತ್ತೋಲೆಯನ್ನು ಉಲ್ಲಂಘಿಸಿ ಹೂಡಿಕೆ ಮಾಡಿರುವುದು ಕಂಡುಬಂದರೆ ಕಾಯ್ದೆಯನುಸಾರ ಕ್ರಮವಿಡುವುದು ಅನಿವಾರ್ಯವಾಗಿರುತ್ತದೆ ಎನ್ನುವುದನ್ನು ಸೌಹಾರ್ದ ಸಹಕಾರಿಗಳ ಗಮನಕ್ಕಾಗಿ ಈ ಮೂಲಕ ತಿಳಿಸಿದೆ.

– ಕಾನೂನು ವಿಭಾಗ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

## ಆಡಳಿತ ಮಂಡಳಿ ಸದಸ್ಯರ ವಿಶೇಷ ಸಭೆ

**ತುಮಕೂರು :** ದಿನಾಂಕ 25–01–2023ರಂದು ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್ ರವರ ಅಧ್ಯಕ್ಷತೆಯಲ್ಲಿ ಹಸಿರು ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ನಿ., ಚಿಕ್ಕನಾಯಕನಹಳ್ಳಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರ ವಿಶೇಷ ಸಭೆ ನಡೆಸಲಾಯಿತು. ಸಹಕಾರಿಯ ಆಡಳಿತ ಮಂಡಳಿ ಸದಸ್ಯರಲ್ಲಿ ಉಂಟಾಗಿರುವ ಸಮಸ್ಯೆಗಳ ಕುರಿತು ಹಾಗೂ ಸಂಯುಕ್ತ ಸಹಕಾರಿಗೆ ನಿರ್ದೇಶಕರ ಅನರ್ಹತೆಗೆ ಶಿಫಾರಸ್ಸು ಮಾಡಿರುವ ಕುರಿತು ಹಾಗೂ ಪರಿವೀಕ್ಷಣಾ ವರದಿ ಪ್ರಮುಖ ಅಂಶಗಳ ಕುರಿತು ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ್ ಕೊರಟಕರ್ ರವರು ಆಡಳಿತ ಮಂಡಳಿ ನಿರ್ದೇಶಕರಿಗೆ ಸೌಹಾರ್ದ ಕಾಯ್ದೆ ಮತ್ತು ನಿಯಮಾನುಸಾರ ಕಾರ್ಯನಿರ್ವಹಿಸಲು ಸೂಚಿಸಿದರು. ಹಾಗೂ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಿಗೆ ಕಾಯ್ದೆಯನುಸಾರ ಆಡಳಿತ ಮಂಡಳಿ ಹಾಗೂ ಸಾಮಾನ್ಯ ಸಭೆಗಳನ್ನು ನಡೆಸುವುದರ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.

ದಿನಾಂಕ 25.01.2023 ರಂದು ತುಮಕೂರು ಜಿಲ್ಲಾ ಸಂಪರ್ಕ ಕಚೇ–ರಿಯಲ್ಲಿ ಹಸಿರು ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯ ವಿಶೇಷ ಸಭೆಯು ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ಇವರು ವಹಿಸಿದ್ದರು. ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ, ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ಇವರು ಉಪಸ್ಥಿತರಿದ್ದರು. ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಮುಖ್ಯಕಾರ್ಯನಿವಾಹಕರು ಭಾಗವಹಿಸಿದ್ದರು.

# ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ವಿವರಗಳು

- ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಸಹಯೋಗದಲ್ಲಿ ಡಿಸಿಬಿಎಂ ಕೋರ್ಸ್ ನ್ನು ಪ್ರಾರಂಭಿಸಲಾಗಿದೆ.
- ಕೋರ್ಸ್‌ನ ವಿಷಯಗಳು – 08
- 4 ತಿಂಗಳ ಅವಧಿಗೆ ಒಂದು ಸೆಮಿಸ್ಟರ್‌ನಂತೆ 2 ಸೆಮಿಸ್ಟರ್‌ಗಳಿರುತ್ತವೆ.
- ಪ್ರತಿ ಶನಿವಾರ ಮತ್ತು ಭಾನುವಾರ ಆನ್‌ಲೈನ್ ಕ್ಲಾಸ್‌ಗಳು ಇರುತ್ತವೆ.
- ಕಾಂಟ್ಯಾಂಕ್ಟ್ (ಸಂಪರ್ಕ ವರ್ಗ) (ಆಫ್‌ಲೈನ್) ಕ್ಲಾಸ್‌ಗಳುನ್ನು ಎರಡನೇ ಶನಿವಾರ ಹಾಗೂ ಭಾನುವಾರ ನಡೆಸಲಾಗುವುದು.
- ವಿಶ್ವವಿದ್ಯಾಲಯದವರಿಂದ ಪರೀಕ್ಷೆ ನಡೆಸಿ ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.
- ಪ್ರೋಗ್ರಾಮ್ ಫೀ ರೂ.8600/– (ಅರ್ಜಿ ಶುಲ್ಕ ರೂ.100/– ಹಾಗೂ ಪ್ರೋಗ್ರಾಮ್ ಶುಲ್ಕ 8500/–) "ಹಣಕಾಸು ಅಧಿಕಾರಿಗಳು, ಕೆ.ಎಸ್. ಆರ್.ಡಿ.ಪಿ.ಆರ್.ಯು. ಡಿಪ್ಲೋಮಾ ಇನ್ ಕೋ–ಆಪರೇಟಿವ ಆಂಡ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್, ಗದಗ," ಇವರ ಹೆಸರಿಗೆ ಡಿ.ಡಿ. ಪಡೆದು, ಡಿ.ಡಿ ಹಿಂಭಾಗದಲ್ಲಿ ಅಭ್ಯರ್ಥಿಯ ಹೆಸರು, ಹಾಗೂ ಮೊಬೈಲ್ ನಂ. ನಮೂದಿಸಿ, ಭರ್ತಿ ಮಾಡಿ ಅಥವಾ ಅರ್ಜಿ ಶುಲ್ಕವನ್ನು ಆನ್–ಲೈನ್‌ಲ್ಲಿ ಸಹ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ SB Account Number: 110095611771, Canara Bank, IFSC Code: CNRB0000511 ಗೆ, NEFT / RTGS / UPI ಮುಖಾಂತರ ಪಾವತಿಸುವುದು. Transaction ID Screen Shot Print-Out ಪಡೆದು "ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 ಮತ್ತು 18ನೇ ಅಡ್ಡ ರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055." ಇವರಿಗೆ ಸೂಕ್ತ ದಾಖಲೆಗಳು ಹಾಗೂ ಸಂದಾಯ ಮಾಡಿದ ಮೂಲ ಶುಲ್ಕದ ರಶೀದಿ / Transaction ID Screen Shot Print-Out ನ 2 ಪ್ರತಿಗಳನ್ನು ಲಗತ್ತಿಸಿ, ಖುದ್ದಾಗಿ / ತ್ವರಿತ ಅಂಚೆ / ಕೋರಿಯರ್ ಮೂಲಕ ದಿನಾಂಕ 10.02.2023 ರ ಒಳಗಾಗಿ ಸಲ್ಲಿಸುವುದು.
- **ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಉದ್ಘಾಟನೆಯನ್ನು ದಿನಾಂಕ 11.02.2023 ರಂದು** ಆನ್‌ಲೈನ್ ಮೂಲಕ ಕರ್ನಾಟಕ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯಿತ್ ರಾಜ್ ವಿಶ್ವವಿದ್ಯಾಲಯ (KSRDPRU) ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಸಹಯೋಗದಿಂದ ನೆರವೇರಿಸಲು ತೀರ್ಮಾನಿಸಲಾಗಿದೆ. ಉದ್ಘಾಟನೆಯನ್ನು ಚಾಣುಕ್ಯ ವಿಶ್ವವಿದ್ಯಾಲಯದ ಕುಲಪತಿಗಳಾದ **ಪ್ರೋ. ಯಶ್ವಂತ್ ಡೋಂಗ್ರೆಯವರು** ನೆರವೇರಿಸಲಿದ್ದಾರೆ. **ಪ್ರೋ. ವಿಷ್ಣುಕಾಂತ ಎಸ್. ಚಟಪಲ್ಲಿ,** ಮಾನ್ಯ ಕುಲಪತಿಗಳು, ಕ.ರಾ.ಗ್ರಾ. ಮತ್ತು ಪಂ.ರಾ.ವಿ.ವಿ. ಗದಗ ಸಂಯುಕ್ತ ಸಹಕಾರಿ ಅಧ್ಯಕ್ಷರಾದ **ಶ್ರೀ ಜಿ. ನಂಜನಗೌಡ** ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ **ಶ್ರೀ ಶರಣಗೌಡ ಜಿ. ಪಾಟೀಲ** ಇವರು ಉಪಸ್ಥಿತರಿರುತ್ತಾರೆ.
- ದಿನಾಂಕ 12.02.2023ರಂದು ಆನ್‌ಲೈನ್ ಕಾಂಟ್ಯಾಂಕ್ಟ್ ಕ್ಲಾಸ್ (ಸಂಪರ್ಕ ವರ್ಗ) ವನ್ನು ಮಧ್ಯಾಹ್ನ 3:00 ರಿಂದ ಸಂಜೆ 5:00 ರವರೆಗೆ ಆಯೋಜಿಸಲಾಗಿದೆ. ಕೋರ್ಸ್‌ಗೆ ನೊಂದಣಿಯಾದ ಎಲ್ಲ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಭಾಗವಹಿಸಲು ಕೋರಿದೆ. (ಲಿಂಕ್ ಕಳುಹಿಸಲಾಗುವುದು.)

## ಯುವಕರು ಹಾಗೂ ಸಹಕಾರ ಸಂವಾದ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಇವರು ಸಹಭಾಗಿತ್ವದಲ್ಲಿ "ಯುವಜನ ಮತ್ತು ಸಹಕಾರ ಸಂವಾದ ಕಾರ್ಯಕ್ರಮವನ್ನು ದಿನಾಂಕ 23.02.2023 ಗುರುವಾರ ಬೆಳಿಗ್ಗೆ : 10:30 ಗಂಟೆಗೆ **ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಕೌಶಲ್ಯ ವಿಕಾಸ ಭವನ ಸಭಾಂಗಣದಲ್ಲಿ** ನಡೆಸಲು ತೀರ್ಮಾನಿಸಲಾಗಿದೆ.

**ಕಾರ್ಯಕ್ರಮ ಉದ್ಘಾಟನೆಯನ್ನು ಪ್ರೋ. ವಿಷ್ಣುಕಾಂತ ಎಸ್. ಚಟಪಲ್ಲಿ, ಮಾನ್ಯ ಕುಲಪತಿಗಳು,** ಕ.ರಾ.ಗ್ರಾ. ಮತ್ತು ಪಂ.ರಾ.ವಿ.ವಿ. ಗದಗ **ಅಧ್ಯಕ್ಷತೆಯನ್ನು ಶ್ರೀ ಜಿ. ನಂಜನಗೌಡ,** ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ವಹಿಸಲಿದ್ದಾರೆ. **"ಸಹಕಾರ ಕ್ಷೇತ್ರದ ಸಾಧನೆಗಳು, ವೈಫಲ್ಯಗಳು ಅವಕಾಶಗಳು ಹಾಗೂ ಯುವಜನರ ಪಾತ್ರ"** ವಿಷಯ ಕುರಿತು **ಡಾ. ಎಸ್. ಎ. ಸಿದ್ಧಾಂತಿ** ಮಾನ್ಯ ಸಹಕಾರಿ ತಜ್ಞರು, ಬೆಂಗಳೂರು ಇವರು ಉಪನ್ಯಾಸ ನೀಡಲಿದ್ದಾರೆ.

**ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರೋ. ಬಸವರಾಜ, ಎಲ್. ಲಕ್ಕಣ್ಣವರ, ಮಾನ್ಯ ಕುಲಸಚಿವರು,** ಕ.ರಾ.ಗ್ರಾ. ಮತ್ತು ಪಂ.ರಾ.ವಿ.ವಿ. ಗದಗ ಇವರು ಅಧ್ಯಕ್ಷತೆ ವಹಿಸಲಿದ್ದಾರೆ. ಸಂವಾದ ತಂಡದ ಸಂಪನ್ಮೂಲ ಗಣ್ಯರಾಗಿ **ಪ್ರೋ. ಎಸ್. ಎಸ್. ಹೂಗಾರ, ಮಾನ್ಯ ಪ್ರಾಧ್ಯಾಪಕರು(ನಿ)ಕ.ರಾ.ಗ್ರಾ.** ಮತ್ತು ಪಂ.ರಾ.ವಿ.ವಿ. ಗದಗ **ಶ್ರೀ ಮುನಿಯಪ್ಪ ಕೊಲೂರು** ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಧಾರವಾಡ, **ಶ್ರೀ ಎಸ್. ಎಸ್. ಕಬಾಡೆ** ಮಾನ್ಯ ಸಹಕಾರಿಗಳ ಉಪನಿಬಂಧಕರು ಗದಗ, **ಶ್ರೀ ಲೋಹಿತೇಶ್ವರ್** ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ಧಾರವಾಡ, **ಶ್ರೀ ಆರ್. ಸಿ ಎಕ್ಕುಂಡಿ,** ಮಾನ್ಯ ಉಪನಿರ್ದೇಶಕರು, ಸಹಕಾರಿ ಲೆಕ್ಕಪರಿಶೋಧನಾ ಇಲಾಖೆ, ಗದಗ, **ಎ. ಆರ್. ಪ್ರಸನ್ನಕುಮಾರ್** ಮಾನ್ಯ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು, **ಶ್ರೀ ಶರಣಗೌಡ ಜಿ. ಪಾಟೀಲ,** ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಅಧ್ಯಕ್ಷರು, ಗದಗ ಜಿಲ್ಲಾ ಪ್ರೆಸ್ ಕ್ಲಬ್ ಗದಗ ಇವರು ಉಪಸ್ಥಿತರಿರುತ್ತಾರೆ.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿಗಳ ಕ್ರೀಡಾಕೂಟ "ಸ್ಫೂರ್ತಿ" 2023



**ಪುತ್ತೂರು :** ಪುತ್ತೂರಿನಲ್ಲಿ ಕೇಂದ್ರ ಕಛೇರಿಯನ್ನು ರಾಜ್ಯಾದ್ಯಂತ 17 ಶಾಖೆಗಳನ್ನು ಹೊಂದಿ ಕಾರ್ಯಾಚರಿಸುತ್ತಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಆಡಳಿತ ಮಂಡಲಿ ಸದಸ್ಯರ ಹಾಗೂ ಸಿಬ್ಬಂದಿಗಳ ಕ್ರೀಡಾಕೂಟ ಸ್ಫೂರ್ತಿ 2023 ವು ದಿನಾಂಕ 28-01-2023ನೇ ಶನಿವಾರ ಪುತ್ತೂರಿನ ಕೊಂಬೆಟ್ಟು ತಾಲ್ಲೂಕು ಕ್ರೀಡಾಂಗಣದಲ್ಲಿ ಜರುಗಿತು. ಕ್ರೀಡಾಕೂಟವನ್ನು ಸಹಕಾರಿ ಧ್ವಜಾ ಹಸ್ತಾಂತರಿಸಿ ಉದ್ಘಾಟಿಸಿದ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರರವರು ಮಾತಾನಾಡುತ್ತಾ ಎಲ್ಲರೂ ಕ್ರೀಡಾ ಸ್ಫೂರ್ತಿಯಿಂದ ಭಾಗವಹಿಸಿ ಯಶಸ್ವಿಗೊಳಿಸುವಂತೆ ಕರೆ ನೀಡಿದರು.

ಉದ್ಘಾಟನಾ ಸಮಾರಂಭದ ಬಳಿಕ ಪ್ರದರ್ಶನ ಪಂದ್ಯದ ಸಲುವಾಗಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಮತ್ತು ವ್ಯವಸ್ಥಾಪಕರುಗಳಿಗೆ ಕ್ರಿಕೆಟ್ ಮತ್ತು ಹಗ್ಗ ಜಗ್ಗಾಟ ಸ್ಪರ್ಧೆಗಳು ನಡೆದವು. ಕ್ರಿಕೆಟ್, ಹಗ್ಗಜಗ್ಗಾಟ, ಬಾಂಬ್ ಇನ್ ದ ಸಿಟಿ ಮುಂತಾದ ಸ್ಪರ್ಧೆಗಳು ನಡೆದವು.ಸಹಕಾರಿಯ ಎಲ್ಲಾ ಸಿಬ್ಬಂದಿಗಳು ಹಾಗೂ ಆಡಳಿತ ಮಂಡಲಿ ಸದಸ್ಯರು ಉತ್ಸಾಹದಿಂದ ಭಾಗವಹಿಸಿದರು. ಸಾಯಂಕಾಲದ ಸಮಾರೋಪ ಸಮಾರಂಭದಲ್ಲಿ ಸಹಕಾರಿಯ ಅಧ್ಯಕ್ಷರು ಬಹುಮಾನ ವಿತರಿಸಿ ವಿಜೇತರನ್ನು ಅಭಿನಂದಿಸಿದರು. ಉಪಾಧ್ಯಕ್ಷರಾದ ಶ್ರೀ ಉಮೇಶ್ ಪ್ರಭು, ಆಡಳಿತ ಮಂಡಲಿ ಸದಸ್ಯರು, ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ನಾಯಕ್ ಎ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶಾಂತಿ ಮಂತ್ರದೊಂದಿಗೆ ಕ್ರೀಡಾಕೂಟವು ಕೊನೆಗೊಂಡಿತು.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ನಿರ್ದೇಶಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರ ಸೌಹಾರ್ದ ಸಹಕಾರಿಗಳ ಭೇಟಿ ವಿವರ



**ಕಲಬುರಗಿ :** ಮೈಲಾರ ಮಲ್ಲಣ್ಣ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ಮಾಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಉಪಸ್ಥಿತರಿದ್ದರು.



**ಕಲಬುರಗಿ :** ಅಣ್ಣ ಬಸವಣ್ಣ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ಮಾಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಹಾಗೂ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.



**ಕಲಬುರಗಿ :** ಕಲಬುರಗಿ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ಮಾಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ್, ಶ್ರೀಮತಿ ಶೈಲಜಾ ತಪಲಿ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಹಾಗೂ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.




**ಕಲಬುರಗಿ :** ಡಿ.ಕೆ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ಮಾಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಹಾಗೂ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

ದಿನಾಂಕ 17.01.2023 ರಂದು ಬೆಂಗಳೂರು ಪ್ರಾಂತದ ಚುನಾವಣೆ ಜರುಗಬೇಕಾದ ಸೌಹಾರ್ದ ಸಹಕಾರಿಗಳಿಗಾಗಿ "ಸಹಕಾರಿಗಳ ಚುನಾವಣೆ" ಕುರಿತು ಆನ್‌ಲೈನ್ ಮೂಲಕ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ಇವರು ನಡೆಸಿಕೊಟ್ಟರು. ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು, ಮಾನ್ಯ ನಿರ್ದೇಶಕರುಗಳಾದ ಶ್ರೀ ಸಿ.ಪಿ. ವಿಜಯ್, ಶ್ರೀ ರಘುರಾಮರೆಡ್ಡಿ, ಶ್ರೀ ಎಮ್.ಆರ್. ಪ್ರಭುದೇವ್ ರವರು ಭಾಗವಹಿಸಿ ಸಹಕಾರಿಗಳಿಗೆ ಅಗತ್ಯ ಸಲಹೆ ಮಾರ್ಗದರ್ಶನಗಳನ್ನು ನೀಡಿದರು. ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ರಘುನಂದನ್ ಕೆ. ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಇವರು ಭಾಗವಹಿಸಿ ಸಹಕಾರಿಗಳ ಚುನಾವಣೆ ಜರುಗುವ ಕುರಿತು ಮಾಹಿತಿ ನೀಡಿದರು. ಬೆಂಗಳೂರು ಪ್ರಾಂತದ ಎಲ್ಲಾ ಜಿಲ್ಲಾ ಸಂಯೋಜಕರು ಭಾಗವಹಿಸಿದ್ದರು. ತರಬೇತಿಯಲ್ಲಿ 90 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

## 2022-23ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಗಳನ್ನು ಜಾರಿಗೊಳಿಸಲು ಹಾಗೂ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು ವಿಸ್ತರಿಸುವ ಬಗ್ಗೆ - ಸರ್ಕಾರದ ಸುತ್ತೋಲೆ

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** 2022-23ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಸಿಒ 154(1) ಸಿಎಲ್‌ಎಸ್ 2022, ಬೆಂಗಳೂರು, ದಿನಾಂಕ:12-10-2022 ಹಾಗೂ ದಿನಾಂಕ: 31-12-2022
2. ಮುಖ್ಯಕಾರ್ಯನಿರ್ವಹಣಾಧಿಕಾರಿ, ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್ ಇವರ ಟಿಪ್ಪಣಿ ಸಂಖ್ಯೆ: ಯಶಸ್ವಿನಿ/024/ಸಿಡಬ್ಲ್ಯೂ-2/2022-23, ದಿ:30-01-2023.

***

**ಪ್ರಸ್ತಾವನೆ :**

2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 67 ರಲ್ಲಿ ಮಾನ್ಯ ಮುಖ್ಯಮಂತ್ರಿಯವರು ಯಶಸ್ವಿನಿ ಯೋಜನೆಯನ್ನು ರಾಜ್ಯದಲ್ಲಿ ಮರು ಜಾರಿಗೊಳಿಸಲು ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರ. ಸಂ. (1)ರ ಸರ್ಕಾರದ ಆದೇಶದಲ್ಲಿ 2022-23ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು ದಿನಾಂಕ:01-11-2022 ರಿಂದ ದಿ:31-12-2022 ರವರೆಗೆ ನಿಗದಿಗೊಳಿಸಿ ಆದೇಶಿಸಲಾಗಿತ್ತು ಹಾಗೂ ದಿನಾಂಕ: 31-01-2023 ರವರೆಗೆ ಅವಧಿಯನ್ನು ವಿಸ್ತರಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. (2) ರ ಮುಖ್ಯಕಾರ್ಯನಿರ್ವಹಣಾಧಿಕಾರಿ, ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್ ಇವರ ಟಿಪ್ಪಣಿ ದಿನಾಂಕ:30-01-2023 ರಲ್ಲಿ, ಸರ್ಕಾರವು ಯಶಸ್ವಿನಿ ಯೋಜನೆಯ ಸದಸ್ಯತ್ವ ನೋಂದಣಿ ದಿನಾಂಕದ ಅವಧಿಯನ್ನು ದಿ:31-01-2023 ರವರೆಗೆ ನಿಗದಿಪಡಿಸಿದ್ದು, ಈ ಅವಧಿಯಲ್ಲಿ ಅರ್ಹವಿರುವ ಎಲ್ಲಾ ಸದಸ್ಯರನ್ನು ನೋಂದಾಯಿಸಲು ಸಾಧ್ಯವಾಗಿರುವುದಿಲ್ಲವೆಂದು ಹಾಗೂ ಈ ಮಧ್ಯೆ ವಿವಿಧ ಜಿಲ್ಲೆಗಳಿಂದ ರೈತರು ಮತ್ತು ಸಹಕಾರ ಸಂಸ್ಥೆಗಳು ಸರ್ಕಾರಕ್ಕೆ ಮನವಿ ಮಾಡಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚೆಚ್ಚು ಜನರು ಯಶಸ್ವಿನಿ ಯೋಜನೆಯಲ್ಲಿ ನೋಂದಾಯಿಸಿಕೊಳ್ಳಲು ಇತ್ತೀಚಿಗೆ ಮುಂದೆ ಬರುತ್ತಿರುವುದಾಗಿ ತಿಳಿಸಿ ಇನ್ನು ಅನೇಕ ಸದಸ್ಯರು ಸದಸ್ಯತ್ವ ಪಡೆಯದೆ ಇರುವುದರಿಂದ ಸದಸ್ಯತ್ವ ನೋಂದಣಿ ಅವಧಿಯನ್ನು ಮಾರ್ಚ್ ಅಂತ್ಯದವರೆಗೆ ವಿಸ್ತರಿಸಲು ಕೋರಿರುವುದಾಗಿ ತಿಳಿಸಿರುತ್ತಾರೆ. ಮುಂದುವರೆದು, ಯೋಜನೆಗೆ ನಿಗಧಿಪಡಿಸಿರುವ 30 ಲಕ್ಷಗಳ ನೋಂದಣಿ ಗುರಿಯನ್ನು ಸಾಧಿಸಲು ನೋಂದಣಿ ದಿನಾಂಕದ ಅವಧಿಯನ್ನು ವಿಸ್ತರಿಸುವುದು ಸಮಂಜಸವೆಂದು ತಿಳಿಸುತ್ತಾ, ಸದಸ್ಯತ್ವ

-2-

ನೋಂದಣಿ ಅವಧಿಯನ್ನು ದಿ:01-02-2023 ರಿಂದ ದಿ:28-02-2023 ರವರೆಗೆ ವಿಸ್ತರಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 154 (1) ಸಿಎಲ್ಎಸ್ 2022, ದಿನಾಂಕ: 31-01-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2022-23ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು **ದಿನಾಂಕ:01-02-2023 ರಿಂದ ದಿನಾಂಕ:28-02-2023 ರವರೆಗೆ** ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

31/1/23

**(ಎ.ಸಿ. ದಿವಾಕರ್)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

31/1

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು:**

1. ಸರ್ಕಾರದ ಮುಖ್ಯಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.

## ಬಾಗಲಕೋಟೆ ಜಿಲ್ಲಾ ಸಂಪರ್ಕ ಕಛೇರಿಯ ನೂತನ ವಿಳಾಸ :

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬಾಗಲಕೋಟೆ ಜಿಲ್ಲಾ ಸಂಪರ್ಕ ಕಛೇರಿ, ಪ್ಲಾಟ್ ನಂ–126/ಎ ಸೆಕ್ಟರ್ ನಂ–10 ಜಿಲ್ಲಾ ಆಸ್ಪತ್ರೆ ಹತ್ತಿರ ನವನಗರ ಬಾಗಲಕೋಟೆ–587103

## ಕ್ಯಾಲೆಂಡರ್ ಬಿಡುಗಡೆ

**ಮೈಸೂರು :** ದಿನಾಂಕ 06.01.2023 ರಂದು ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರಿಯಲ್ಲಿ 2023ರ ದಿನಚರಿ ಹಾಗೂ ಕ್ಯಾಲೆಂಡರ ಬಿಡುಗಡೆಯನ್ನು ಶ್ರೀ ಸೋಮಶೇಖರ, ಮಾಜಿ ಶಾಸಕರು, ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿ ಅಧ್ಯಕ್ಷರಾದ ಶ್ರೀ ರಾಜೇಂದ್ರ ಕುಮಾರ, ಶ್ರೀ ಹರೀಶಗೌಡರು, ಕಾಂಗ್ರೇಸ್ ಮುಖಂಡರು, ಶ್ರೀ ನವೀನಕುಮಾರ, ಯುವ ಕಾಂಗ್ರೇಸ್ ಮುಖಂಡರು, ಶ್ರೀ ಶಿವಕುಮಾರ ಬಿರಾದರ, ಪ್ರಾಂತೀಯ ವ್ಯವಸ್ಥಾಪಕರು, ಶ್ರೀ ನಾಗೇಶ, ಜೆ.ಜೆ.ಆನಂದ, ಶ್ರೀ ನವೀನ ಇತತರು ಉಪಸ್ಥಿತರಿದ್ದರು.

## ದಶಮಾನೋತ್ಸವ ಕಾರ್ಯಕ್ರಮ




**ಬೀದರ :** ದುರ್ಗಾ ಮಾತಾ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಇದರ ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಇವರು ಉದ್ಘಾಟಿಸಿ ಮಾತನಾಡಿದರು. ಸಹಕಾರ ಸಂಘ ಕಟ್ಟುವುದು ಸುಲಭ ಆದರೆ ಅದನ್ನು ಮುನ್ನಡೆಸಿಕೊಂಡು ಹೊಗುವುದು ತುಂಬಾ ಕಷ್ಟದ ಕೆಲಸ ಎಂದು ತಿಳಿಸಿದರು. ಸಹಕಾರಿಯ ಎಲ್ಲಾ ಸದಸ್ಯರು ವ್ಯವಹಾರ ಮಾಡುವುದರಿಂದ ಸಹಕಾರಿ ಅಭಿವೃದ್ಧಿ ಸಾಧ್ಯವೆಂದು ತಿಳಿಸಿದರು. ದಶಮಾನೋತ್ಸವ ಆಚರಿಸಿಕೊಳ್ಳುತ್ತಿರುವ ಸಹಕಾರಿಯ ಆಡಳಿತ ಮಂಡಳಿಗೆ ಶುಭ ಕೋರಿದರು.

ಕಾರ್ಯಕ್ರಮದ ಮುಖ್ಯ ಅತಿಥಿ ಸ್ಥಾನವನ್ನು ವಹಿಸಿಕೊಂಡಿದ ಸಂಯುಕ್ತ ಸಹಕಾರಿ ನಿರ್ದೇಶಕರಾದ ಗುರುನಾಥ ಜ್ಯಾಂತಿಕರ ಇವರು ಮಾತನಾಡಿ ಮಾನವ ಜೀವನವೆ ಒಂದು ಸಹಕಾರ ತತ್ವದಿಂದ ಕೂಡಿದೆ ಪ್ರತಿಯೊಬ್ಬರು ಸಹಕರಿಸಿದಾಗ ಮಾತ್ರ ಜೀವನ ಸುಗಮವಾಗಿ ಸಾಗಲು ಸಾಧ್ಯವೆಂದು ತಿಳಿಸಿದರು.

## ಉದ್ಘಾಟನೆ



**ಬೆಂಗಳೂರು :** ದಿನಾಂಕ 23.01.2023 ರಂದು ಕರ್ನಾಟಕ ಧರ್ಮದೃಷ್ಠಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು ಇದರ ನೂತನ ಸಹಕಾರಿಯ ಉದ್ಘಾಟನಾ ಸಮಾರಂಭವನ್ನು ನೆರವೇರಿಸಲಾಯಿತು. ಉದ್ಘಾಟನೆಯನ್ನು ಶ್ರೀ ಸ್ವಾಮಿ ವಿಗ್ಯಾನಾನಂದಜಿ, ಸಂಸ್ಥಾಪಕರು ಹಾಗೂ ಜಾಗತಿಕ ಜಂಟಿ ನಿರ್ದೇಶಕರು, ವಿಶ್ವ ಹಿಂದೂ ಪರಿಷತ್, ಇವರು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಬಿ.ವಿ. ಗೋಪಾಲ ರೆಡ್ಡಿ, ಮಾನ್ಯ ಅಧ್ಯಕ್ಷರು, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಶ್ರೀ ಎಸ್.ವಿ. ಸುಬ್ರಮಣ್ಯ, ಮಾಜಿ ಉಪಾಧ್ಯಕ್ಷರು, ಇನ್ಫೋಸಿಸ್, ಶ್ರೀ ಪ್ರತಾಪ್ ಸಿಂಹ, ಮಾನ್ಯ ಲೋಕಸಭಾ ಸದಸ್ಯರು, ಮೈಸೂರು, ಶ್ರೀ ರಮಾಕಾಂತ ದೇಸಾಯಿ, ಮಾನ್ಯ ಉಪಾಧ್ಯಕ್ಷರು, ವಿಪ್ರೋ, ಶ್ರೀ ಡಾ. ಬಿ.ಎಸ್. ವಿಶ್ವ ಕರಿಯಪ್ಪ, ಮಾನ್ಯ ಅಧ್ಯಕ್ಷರು, ಕರ್ನಾಟಕ ಧರ್ಮದೃಷ್ಠಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು, ಶ್ರೀ ಸಂಜಯ ಕೋರಟಕರ, ಪ್ರಾಂತೀಯ ವ್ಯವಸ್ಥಾಪಕರು, ಬೆಂಗಳೂರು ಪ್ರಾಂತ ಇವರು ಉಪಸ್ಥಿತರಿದ್ದರು.



**ಚಿತ್ರದುರ್ಗ :** ದಿನಾಂಕ 23.01.2023 ರಂದು ಚಳ್ಳಕೆರೆ ಶಿವಶಕ್ತಿ ಸೌಹಾರ್ದ ಸಹಕಾರಿ ಸಂಘ ನಿ., ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ. ಸಹಕಾರಿಯ ಉದ್ಘಾಟನೆಯನ್ನು ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಟಿ. ರಘುಮೂರ್ತಿ ರವರು ನೆರವೇರಿಸಿದರು. ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು, ಸಹಕಾರಿಯ ಅಧ್ಯಕ್ಷರಾದ ಶ್ರೀ ವೀರೇಶ್ ರವರು, ಉಪಾಧ್ಯಕ್ಷರು, ನಿರ್ದೇಶಕರು, ಶ್ರೀ ರಾಗವೇಂದ್ರ, ಸ್ಥಾಯಿ ಸಮಿತಿ ಅಧ್ಯಕ್ಷರು, ಚಳ್ಳಕೆರೆ ನಗರಸಭೆ, ಸಹಕಾರಿಯ ಸದಸ್ಯರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಭೇಟಿ

ದಿನಾಂಕ 16.01.2023 ರಂದು ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ಇವರು ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯ ಸ್ಥಳ ಪರಿಶೀಲನೆಗಾಗಿ ಭೇಟಿ ನೀಡಿದರು. ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್ ರವರು, ತುಮಕೂರು ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಸುರೇಶ್ ರಾವ್ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ಉಪಸ್ಥಿತರಿದ್ದರು.

# ವಿಜಯ ಪತ್ತಿನ ಸೌಹಾರ್ದ ಸಹಕಾರಿಯ ರಜತ ಮಹೋತ್ಸವ



ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತವು 25 ವರ್ಷಗಳ ಸಾರ್ಥಕ ಪಯಣವನ್ನು ಪೂರೈಸಿದ ನೆನಪಿಗಾಗಿ ದಿನಾಂಕ 07.01.2023 ರಂದು ಸಂಸ್ಥೆಯ "ಬೆಳ್ಳಿ ಹಬ್ಬ"ದ ಸಮಾರಂಭವನ್ನು ವಿಜಯನಗರದ ಬಂಟರ ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾ ಭವನದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ಕುಮಾರಿ ಸಂಹಿತ ಎಸ್ ಶೆಟ್ಟಿಯವರ ಸುಶ್ರಾವ್ಯವಾದ ಪ್ರಾರ್ಥನೆಯ ಬಳಿಕ ಆರಂಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ.ಹೆಚ್.ಶ್ರೀಧರ್ ಹೆಗ್ಡೆಯವರು ಎಲ್ಲರನ್ನೂ ಸ್ವಾಗತಿಸಿ ಸಹಕಾರಿಯು ಇದುವರೆಗೂ ನಡೆದು ಬಂದ ದಾರಿಯ ಕುರಿತು ಪ್ರಸ್ತಾವನೆಗಳೊಂದಿಗೆ ಸಂಕ್ಷಿಪ್ತವಾಗಿ ಬೆಳಕು ಚೆಲ್ಲಿದರು. ನಿರ್ದೇಶಕರಾದ ಶ್ರೀ.ಡಿ.ಚಂದ್ರಹಾಸ್ ರೈ ಯವರು ಸಹಕಾರಿಯ 25 ವರ್ಷಗಳ ಪಯಣದ ಕುರಿತು ವಿಸ್ತೃತವಾದ ವರದಿಯನ್ನು ವಾಚಿಸಿದರು.

ಬೆಳ್ಳಿ ಹಬ್ಬದ ಕಾರ್ಯಕ್ರಮವನ್ನು ಉದ್ಘಾಟಿಸಿದ ಕರ್ನಾಟಕ ಸರ್ಕಾರದ ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಐಟಿಬಿಟಿ, ಕೌಶಲ್ಯಾಭಿವೃದ್ಧಿ ಮತ್ತು ವಿದ್ಯುನ್ಮಾನ ಸಚಿವರಾದ ಶ್ರೀಯುತ ಡಾ|| ಸಿ ಎನ್ ಅಶ್ವಥ್‌ನಾರಾಯಣ ಅವರು ಮಾತನಾಡಿ ಶೇಕಡಾ 4 ರಿಂದ 15 ರವರೆಗೆ ಲಾಭಾಂಶ ನೀಡುವ ಸಂಸ್ಥೆಯಾಗಿ ಬೆಳೆದು ಬಂದಿರುವುದಕ್ಕೆ ಸಹಕಾರಿಯನ್ನು ಅಭಿನಂದಿಸಿದರು. ನಿಜವಾಗಿಯೂ ಹಣದ ಅವಶ್ಯಕತೆ ಇರುವವರಿಗೆ ಸಾಲವನ್ನು ನೀಡುವುದರ ಮೂಲಕ ಹಣದ ಸದ್ಬಳಕೆ ಆಗುತ್ತಿರುವುದರ ಕುರಿತು ಶ್ಲಾಘಿಸಿದರು. ಬ್ಯಾಂಕಿಂಗ್ ತವರೂರಾದ ದಕ್ಷಿಣ ಕನ್ನಡ ಜಿಲ್ಲೆಯವರು ರಾಜಧಾನಿಯಲ್ಲಿ ಬಂದು ಸ್ಥಾಪಿಸಿದ ಸಹಕಾರಿಯ ಹೆಮ್ಮೆಯ ಸಾಧನೆಯನ್ನು ಮೆಚ್ಚಿ ಮುಂದೆಯೂ ಕೂಡಾ ಎಲ್ಲಾ ರೀತಿಯ ಸಹಕಾರವನ್ನು ನೀಡುವ ಭರವಸೆಯನ್ನು ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿಜಯನಗರ ಕ್ಷೇತ್ರದ ಶಾಸಕರಾದ ಶ್ರೀಯುತ ಎಂ ಕೃಷ್ಣಪ್ಪನವರು ರಜತ ಮಹೋತ್ಸವ ಸಮಾರಂಭದ ಅಂಗವಾಗಿ ಹೊರ ತಂದಿರುವ ಸ್ಮರಣ ಸಂಚಿಕೆ "ರಜತ ವಿಜಯ"ವನ್ನು ಬಿಡುಗಡೆಗೊಳಿಸಿ ಸಹಕಾರಿಯ ಎಲ್ಲಾ ನಿರ್ದೇಶಕರುಗಳು ಧರ್ಮದರ್ಶಿಗಳ ತರಹ ಕೆಲಸ ನಿರ್ವಹಿಸುತ್ತಿರುವ ಕುರಿತು ಮೆಚ್ಚುಗೆ ವ್ಯಕ್ತ ಪಡಿಸಿದರು. ನಾಲ್ಕು ಕೋಟಿ ಷೇರು ಬಂಡವಾಳವನ್ನು ಹೊಂದಿರುವ ಸಂಸ್ಥೆಯು ಶೀಘ್ರದಲ್ಲಿಯೇ ಸೌಹಾರ್ದ ಸಹಕಾರಿ ಬ್ಯಾಂಕ್ ಆಗಿ ಪರಿವರ್ತನೆಗೊಳ್ಳಲಿ ಎಂದು ಹಾರೈಸಿದರು.

ಇನ್ನೋರ್ವ ಮುಖ್ಯ ಅತಿಥಿಗಳಾದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಮಾತನಾಡಿ ಮೂರು ಸಾವಿರಕ್ಕೂ ಅಧಿಕ ಸದಸ್ಯರು ಹಾಗೂ 4 ಕೋಟಿಗೂ ಅಧಿಕ ಷೇರು ಬಂಡವಾಳವನ್ನು ಹೊಂದಿರುವ ಸಂಸ್ಥೆಯನ್ನು "ಸಹಕಾರದಿಂದ ಸಮೃದ್ಧಿ" ಮತ್ತು "ಸುಸ್ಥಿರವಾಗಿ ಬೆಳೆಯಿರಿ" ಎನ್ನುವ ತತ್ವದಡಿಯಲ್ಲಿ ಪಾರದರ್ಶಕ ಮತ್ತು ಪ್ರಾಮಾಣಿಕತೆಯಿಂದ ಮುನ್ನಡೆಸುತ್ತಿರುವ ಎಲ್ಲಾ ನಿರ್ದೇಶಕರುಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಇರ್ಮಾಡಿ ಜಯಪ್ರಸಾದ್ ಶೆಟ್ಟಿಯವರು ಮಾತನಾಡಿ ಸದಸ್ಯರು, ಷೇರುದಾರರು ಮತ್ತು ಠೇವಣಿದಾರರು ಸಂಸ್ಥೆಯ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಸಂತಸ ವ್ಯಕ್ತ ಪಡಿಸಿ ಮುಂದೆಯೂ ಸಹಾ ಇದೇ ರೀತಿಯ ಸಹಕಾರವನ್ನು ಅಪೇಕ್ಷಿಸಿದರು.

# ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ದಾವಣಗೆರೆ :** ಶ್ರೀ ಸೂಪಾರ್ಶ್ವನಾಥ ಜೈನ್ ಮೈನಾರಿಟಿ ಸೌಹಾರ್ದ ಸಹಕಾರಿ ನಿಯಮಿತ, ವಸಂತ ಟಾಕೀಸ್ ರಸ್ತೆ, ದಾವಣಗೆರೆ. ಇದರ ಆಡಳಿತ ಮಂಡಳಿಯ ಮುಂದಿನ ಐದು ವರ್ಷದ ಆಡಳಿತ ನಡೆಸಲು ಎರಡನೇ ಬಾರಿಗೆ ಶ್ರೀಯುತ ಸಂಘವಿ ಮಹಾವೀರ್ ಜೈನ್ ರವರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ, ಸದರಿ ಆಡಳಿತ ಮಂಡಳಿಗೆ ಶ್ರೀಯುತ ಅಶೋಕ್ ಕುಮಾರ್ ಜೈನ್ ರವರು ಉಪಾಧ್ಯಕ್ಷರಾಗಿ ಹಾಗೂ ನಿರ್ದೇಶಕರಾಗಿ ಶ್ರೀಯುತ ಪ್ರಕಾಶ್ ಎ, ಶ್ರೀಯುತ ದೀಪೇಶ್ ಜೈನ್, ಶ್ರೀಯುತ ಗೌತಮ್ ಕುಮಾರ್ ಜೈನ್, ಶ್ರೀಯುತ ಸನ್ನಿ ಬಿ ಜೈನ, ಶ್ರೀಯುತ ಪೋಲ್ ಚಂದ್ ಅಂಬಾಲಾಲ್, ಶ್ರೀಯುತ ಕುಂದನ್ ಮಲ್, ಶ್ರೀಯುತ ವಿಜಯಕುಮಾರ್ ನಹತ, ಶ್ರೀಮತಿ ಗುಣವತಿ ಅನಿಲ್ ಕುಮಾರ್, ಶ್ರೀಮತಿ ಏಕ್ತಾ ಕಲ್ಪೇಶ್, ಕುಮಾರಿ ಅಂಬಿಕಾ ಜೈನ್, ಇವರೆಲ್ಲರೂ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

**ಅನುಗ್ರಹ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು**



ಶ್ರೀ ಲಕ್ಷ್ಮೀನಾರಾಯಣ
ಅಧ್ಯಕ್ಷರು



ಶ್ರೀ ಚೇತನ್ ಬಾಬು ಕೆ.ಎಂ.
ಉಪಾಧ್ಯಕ್ಷರು

# ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕೋಡಿ ಸಹಕಾರಿಯ 10ನೇ ವಾರ್ಷಿಕೋತ್ಸವ



ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿರುವ ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಇದರ 10ನೇ ವರ್ಷದ ವಾರ್ಷಿಕೋತ್ಸವ ಸಮಾರಂಭವು ಸೋಮವಾರ ದಿನಾಂಕ 16.01.2023 ರಂದು ಮುಂಜಾನೆ 9.00 ಗಂಟೆಗೆ ಸಹಕಾರಿಯ ಮಾರ್ಗದರ್ಶಕರಾದ ಮಾನ್ಯ ಶ್ರೀ ಮಹಾಂತೇಶ ಮ ಕವಟಗಿಮಠ, ಮಾಜಿ ಸರ್ಕಾರಿ ಮುಖ್ಯ ಸಚೇತಕರು, ಕರ್ನಾಟಕ ವಿಧಾನ ಪರಿಷತ್, ಬೆಂಗಳೂರು, ಇವರು ಪೂಜಾ ಕಾರ್ಯಕ್ರಮ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಜಗದೀಶ ಎಮ್ ಕವಟಗಿಮಠ ಹಾಗೂ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಬಿ ಮೂಗೇರಿ, ನಿರ್ದೇಶಕರುಗಳಾದ ಶ್ರೀ ಸಂಜಯ ಗಿಡವೀರ, ಶ್ರೀ ಲೋಕಪ್ಪಾ ದುಂಬಾಳಿ, ಶ್ರೀ ಹೇಮಂತ ಹಂಪಣ್ಣವರ, ಶ್ರೀ ಪ್ರವೀಣ ಕಾಂಬಳೆ, ಶ್ರೀ ಶ್ರೀಧರ ದಿಕ್ಷೀತ, ಶ್ರೀ ರಾಜಕುಮಾರ ಹಿರೇಮಠ, ಶ್ರೀ ಚಂದ್ರಕಾಂತ ಬುರಡ, ಶ್ರೀ ರಮೇಶ ಕುಡತರಕರ, ಶ್ರೀ ಮನೋಜಕುಮಾರ ಸಮ್ಮತಶೆಟ್ಟಿ, ಶ್ರೀ ಸಂಜಯ ಶಿಂತ್ರೆ, ಶ್ರೀ ಯರ್ರಿಸ್ವಾಮಿ ಗೌಡ ಇಟಗೌನಿ ಹಾಗೂ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ನಾಗರಾಜ ಎಡಳ್ಳಿ ಹಾಗೂ ಸಹಕಾರಿಯ ಎಲ್ಲಾ ಶಾಖಾ ಸಲಹಾ ಸಮಿತಿ ಸದಸ್ಯರು ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರ ಉಪಸ್ಥಿತಿಯಲ್ಲಿ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಿತು.



**ಮಂಡ್ಯ :** ಶ್ರೀ ಶಿವಜ್ಯೋತಿ ಗಾಣಿಗರ ಸೌಹಾರ್ದ ಸಹಕಾರಿ ನಿ., ಕೆ.ಆರ್ ಪೇಟೆ ಇದರ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲಾಯಿತು. ಅಧ್ಯಕ್ಷರಾದ ಶ್ರೀ ಸಾರಂಗಿ ನಾಗರಾಜು ರವರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು, ಸಿಇಓ ಮತ್ತು ಪಿಗ್ಮಿ ಸಂಗ್ರಹಕಾರರು ಉಪಸ್ಥಿತರಿದ್ದರು.




**ಮಂಡ್ಯ :** ನುಡಿ ಭಾರತಿ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ರಂಜಿತ್ ರವರು ಕೇರಳ ದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದರು.



## ಕ್ಯಾಲೆಂಡರ್ ಬಿಡುಗಡೆ

**ಹಾಸನ :** ಶ್ರೀ ಸಾಯಿ ಸಕಲೇಶ್ವರಿ ಸೌಹಾರ್ದ ಸಹಕಾರಿ ನಿ., ಚನ್ನರಾಯಪಟ್ಟಣ ಇದರ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಯನ್ನು ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ನೆರವೇರಿಸಿದರು.



**ಮಂಡ್ಯ :** ಸಮೃದ್ಧಿ ಭಾರತಿ ಸೌಹಾರ್ದ ಸಹಕಾರಿ ನಿ., ಭಾರತೀನಗರ ಕಛೇರಿಯಲ್ಲಿ ಗಣರಾಜೋತ್ಸವ ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯ, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀಮತಿ ಪೂರ್ಣಿಮಾ ಸಿಬ್ಬಂದಿ ಹಾಜರಿದ್ದರು.




**ಮಂಡ್ಯ :** ಸಮೃದ್ಧಿ ಭಾರತಿ ಸೌಹಾರ್ದ ಸಹಕಾರಿ ನಿ., ಭಾರತೀನಗರ ಕಛೇರಿಯಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯ, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀಮತಿ ಪೂರ್ಣಿಮಾ ಸಿಬ್ಬಂದಿ ಹಾಜರಿದ್ದರು.

## SWABHIMANI SAHAKARI

### Form IV (See Rule-8)

| | | |
|---|---|---|
| 1. Place of Publication | : | **Bangalore, Karnataka** |
| 2. Periodicity of its Publications | : | **Monthly** |
| 3. Printer's Name | : | Omkar offset printers, 3/4, 1st Main Rd, New Tharagupet, Bengaluru Karnataka - 560021 |
| Whether Citizen of India | : | Yes |
| If foreigner, State the country of origin | | |
| 4. Editor's Name | : | **Sharangouda G. Patil** |
| Whether Citizen of India | : | Yes |
| If foreigner, State the country of origin | | |
| Address | : | Karnataka State Souharada Federal Co operative Ltd., "Souharda Sahakari Soudha", 1st Floor, Between 17th & 18th Cross, Margosa Road, Malleswaram, Bengaluru-560 055. |
| Name and Address of individuals who own the Newspaper and partners or share holders holding more than percent of the total capital | : | Managing Director Karnataka State Souharada Federal Co operative Ltd., "Souharda Sahakari Soudha", 1st Floor, Between 17th & 18th Cross, Margosa Road, Malleswaram, Bengaluru-560 055. |

I, Sharangouda G. Patil here by declare that the particulars given above are true to the best of my knowledge and belief.

**Date : 28/02/2023** **Sd/-**

**Place : Bengaluru.** **Signature of the Publisher / Editor**

# ಪ್ರಥಮ ಸಾಮಾನ್ಯ ಸಭೆ



**ಶಿವಮೊಗ್ಗ :** ದಿನಾಂಕ 25.12.2022 ರಂದು ಮಡಿಲು ಮಹಿಳಾ ಸೌಹಾರ್ದ ಸಹಕಾರಿ ಸಂಘ, ಶಿಕಾರಿಪುರ ಸಹಕಾರಿಯ ಪ್ರಥಮ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಹಕಾರಿಯ ಸದಸ್ಯರ ಹಕ್ಕುಗಳು ಹಾಗೂ ಆಡಳಿತ ಮಂಡಳಿ ಜವಬ್ದಾರಿಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು.



**ಕೊಡಗು :** ಸೋಮವಾರಪೇಟೆ ಒಕ್ಕಲಿಗರ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ಪ್ರಥಮ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

**ತುಮಕೂರು ಜಿಲ್ಲೆಯ ಮಧು ಸೌಹಾರ್ದ ಪತ್ತಿನ ಸಹಕಾರಿಯ ಉಪಾಧ್ಯಕ್ಷರಾಗಿ ಶ್ರೀ ಶಿವಕುಮಾರ ಎ. ಆಯ್ಕೆ**





**ಕೊಡಗು :** ದಿನಾಂಕ 01.01.2023 ರಂದು ನಂ. 566ನೇ, ವಿರಾಜಪೇಟೆ ಕೊಡವ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಮಂಡ್ಯ :** ಶ್ರೀ ವೀರ ಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿಯಮಿತ. ಮಂಡ್ಯ ಇದರ 2023ರ ನೂತನ ವರ್ಷದ ಕ್ಯಾಲೆಂಡರನ್ನು ಮಂಡ್ಯ ನಗರದ ಪ್ರೆಸ್ ಕ್ಲಬ್ ನಲ್ಲಿ ದಿನಾಂಕ 12–01–2023ರಂದು ಮಾಜಿ ಸಚಿವರು, ಹಿರಿಯರಾದ ಎಂ. ಎಸ್. ಆತ್ಮಾನಂದ ರವರು, ಮಂಡ್ಯ ಬಿಡುಗಡೆ ಮಾಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಟಿ.ಗುರುರಾಜ್, ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.



ದಿನಾಂಕ 16.01.2023 ರಂದು ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ಇವರು ಶ್ರೀ ವಿಠ್ಠಲ ಸೌಹಾರ್ದ ಪತ್ತಿನ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್ ರವರು, ತುಮಕೂರು ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಸುರೇಶ್ ರಾವ್, ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಹಾಗೂ ಸದರಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 22ನೇ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ



ದಿನಾಂಕ 01.01.2023 ರಂದು ಪ್ರಗತಿ ಕೃಷ್ಣ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಚಾಮರಾಜನಗರ :** ದಿನಾಂಕ: 1/1/2023 ರಂದು ಶ್ರೀ ಸಿದ್ದಮಲ್ಲೇಶ್ವರ ಸೌಹಾರ್ದ ಸಹಕಾರಿ ನಿ., ವಿರಕ್ತಮಠ, ಚಾಮರಾಜನಗರ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ವಿರಕ್ತ ಮಠಾಧ್ಯಕ್ಷರಾದ ಶ್ರೀ ಶ್ರೀಚನ್ನಬಸವ ಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ಆಚರಿಸಲಾಯಿತು. ಅಖಿಲ ಭಾರತ ವೀರಶೈವ ಮಹಾಸಭೆಯ ಜಿಲ್ಲಾಧ್ಯಕ್ಷರಾದ ಮೂಡಲುಪುರ ನಂದೀಶ್ ಹೊಸದಾಗಿ ಷೇರು ಸದಸ್ಯತ್ವವನ್ನು ಪಡೆಯುವ ಮೂಲಕ ಚಾಲನೆ ನೀಡಿದರು.

ಸೌಹಾರ್ದ ದಿನಾಚರಣೆಯ ಅಂಗವಾಗಿ ಸಹಕಾರಿಯಲ್ಲಿ ಸಾಲ ಪಡೆದು ಅವಧಿಗೂ ಮುನ್ನ ಸಕಾಲಕ್ಕೆ ಮರು ಪಾವತಿಸಿರುವ ಒ.ಲಿಂಗಪ್ಪ & ರೇವಣ್ಣ ರವರನ್ನು ಶ್ರೀಗಳಿಂದ ಸನ್ಮಾನಿಸಲಾಯಿತು. ಸಹಕಾರಿಯ ಷೇರು ಸದಸ್ಯರಾದ ರೋಟರಿ ಅಧ್ಯಕ್ಷರಾದ ಕೆ.ಎಂ ಮಹದೇವಸ್ವಾಮಿ ಮತ್ತು ಇನ್ನಿತರ ಸದಸ್ಯರು ಮತ್ತು ಸಹಕಾರಿ ಬಂಧುಗಳಿಗೆ ಹೊಸ ವರ್ಷದ ಕ್ಯಾಲೆಂಡರ್ ಅನ್ನು ವಿತರಿಸಲಾಯಿತು. ಆಚರಣೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಬಾಬು ರಾಮಸಮುದ್ರ ಉಪಾಧ್ಯಕ್ಷರಾದ ಎ.ಕೆ ದೊರೆಸ್ವಾಮಿ ನಿರ್ದೇಶಕರಾದ ಕಾಡಳ್ಳಿ ಶಿವಣ್ಣ ಚಾರ್ ಕೈಗಾರಿಕಾ ಸಹಕಾರ ಸಂಘದ ನಿರ್ದೇಶಕರಾದ ವೀರಭದ್ರ ಸ್ವಾಮಿ ಕೋಟಂಬಳ್ಳಿ ಇನ್ನಿತರ ಸದಸ್ಯರುಗಳು ಭಾಗವಹಿಸಿದ್ದರು.



**ರಾಯಚೂರು :** ದಿನಾಂಕ 01-01-2023 ರಂದು ಅಲೈಯನ್ಸ್ ಸೌಹಾರ್ದ ಸಹಕಾರಿಯಲ್ಲಿ ನೂತನ ವರ್ಷದ 2023ನೇ ಸಾಲಿನ ಸಹಕಾ-ರಿಯ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮನ್ನು ಅತಿಥಿಗಳಾಗಿ ಆಗಮಿಸಿದ ಹಂಪನಗೌಡ ಬಾದರ್ಲಿ ಮಾಜಿ ಅಧ್ಯಕ್ಷರು ಎಂ.ಎಸ್.ಐ.ಲ್ ಬೆಂಗಳೂರು, ಹಾಗೂ ಮಾಜಿ ಶಾಸಕರು ಇವರು ಸಹಕಾರಿ ಆಡಳಿತ ಮಂಡಳಿ ನಿರ್ದೇಸಕರ ಮತ್ತು ಸಿಬ್ಬಂದಿ ವರ್ಗದವರ ಸಮ್ಮುಕದಲ್ಲಿ ನೇರವೇರಿಸಲಾಯಿತು.

ದಿನಾಂಕ 01-01-2023 ರಂದು ಸೌಹಾರ್ದ ಸಹಕಾರಿಯ ಜಿನಾಚರಣೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ವೀರಭದ್ರಗೌಡ ಬನ್ನಿಗನೂರು ಮತ್ತು ಅಡಳಿತ ಮಂಡಳಿ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದೂಂದಿಗೆ ಧ್ವಜೋರೋಹಣ ಕಾರ್ಯಕ್ರಮನ್ನು ನೇರವೇರಿಸಲಾಯಿತು.




**ಮಂಡ್ಯ ;** ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಕಛೇರಿಯಲ್ಲಿ ನಡೆದ "ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಅಧ್ಯಕ್ಷರಾದ ಶರಣ ಶ್ರೀ ನಾಗರಾಜು .ಎಸ್ ರವರು ನೆರವೇರಿಸಿದರು. ಉಪಾಧ್ಯಕ್ಷರಾದ ಶರಣ ಶ್ರೀ ದ್ಯಾವಣ ರವರು ಮತ್ತು ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸಿಇಓ ಶ್ರೀ ಮಹೇಶ್ ರವರು ಹಾಗೂ ಸಿಬ್ಬಂದಿಗಳು ಹಾಜರಿದ್ದರು.

# ಸಹಕಾರ ಅಭಿವೃದ್ಧಿಗೆ ವರದಾನ (ಸಹಕಾರದಿಂದ ಸಮೃದ್ಧಿ)

## ಕೇಂದ್ರ ಸಹಕಾರ ಸಚಿವಾಲಯದ ಪ್ರಮುಖ ನಿರ್ಣಯ ರಾಷ್ಟ್ರ ಮಟ್ಟದ ಬಹು ರಾಜ್ಯ ಬೀಜಗಳ ಸಹಕಾರ ಸೊಸೈಟಿ, ರಾಷ್ಟ್ರೀಯ ಬಹು ರಾಜ್ಯ ಸಾವಯವ ಸಹಕಾರ ಸಂಘ, ರಾಷ್ಟ್ರೀಯ ಮಟ್ಟದ ಬಹು ರಾಜ್ಯ ಸಹಕಾರ ರಫ್ತು ಸೊಸೈಟಿಗಳ ರಚನೆ.

– ಡಾ|| ಎಸ್. ಎ. ಸಿದ್ಧಾಂತಿ, ನಿವೃತ್ತ ನಿರ್ದೇಶಕರು, ಆರ್.ಐ.ಸಿ.ಎಮ್, ಬೆಂಗಳೂರು

ಭಾರತದಲ್ಲಿ ಕೆಳಮಟ್ಟದಿಂದ ಹಿಡಿದು ಸಹಕಾರಿ ಕ್ಷೇತ್ರದಲ್ಲಿ ವ್ಯಾಪಕವಾದ ಸಂಪರ್ಕ ಮತ್ತು ಚಟುವಟಿಕೆಗಳನ್ನು ಹೊಂದಿದೆ, ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿ ಸಂಸ್ಥೆಗಳು ಸುವ್ಯವಸ್ಥಿತವಾಗಿ ತನ್ನ ಎಲ್ಲ ಚಟುವಟಿಕೆಗಳನ್ನು ಸುಲಲಿತವಾಗಿ ನಡೆಸಿಕೊಂಡು ಹೋಗುವುದು ಮುಖ್ಯ ಉದ್ದೇಶವಾಗಿರುತ್ತದೆ. ಪ್ರಾಥಮಿಕ ಕೃಷಿ ಕ್ರೆಡಿಟ್ ಸೊಸೈಟಿಗಳ (ಪಿಎಸಿಎಸ್) ಬಲವರ್ಧನೆಗಾಗಿ ಭಾರತ ಸರ್ಕಾರದ ಸಹಕಾರ ಸಚಿವಾಲಯ, ನವದೆಹಲಿ ಇವರು ಪ್ರಾಯೋಗಿವಾಗಿ ಬಹು ರಾಜ್ಯ ಸಹಕಾರ ಸಂಘಗಳ ಆಕ್ಟ್ (ಎಮ್.ಎಸ್ ಸಿ.ಎಸ್.ಎ) 2002ರ ಅನ್ವಯ ರಾಷ್ಟ್ರೀಯ ಮಟ್ಟದ ಸಹಕಾರ ಸಂಘಗಳೊಂದಿಗೆ ಕಾರ್ಯಕ್ರಮವನ್ನು/ಚಟುವಟಿಕೆಗಳನ್ನು ಮಾಡಲು ನಿರ್ಧರಿಸಿರುತ್ತಾರೆ. ಇದರಲ್ಲಿ ಪ್ರತ್ಯೇಕವಾಗಿ ಬೀಜಗಳು, ಸಾವಯವ ಪದಾರ್ಥಗಳ ಮತ್ತು ಕೃಷಿ ಉತ್ಪನ್ನಗಳ ಆಮದು, ಇಲ್ಲಿ ಪ್ರಾಥಮಿಕ ಸೊಸೈಟಿಗಳು, ಜಿಲ್ಲಾ , ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಫೆಡರೇಷನ್‌ಗಳು ಮತ್ತು ಬಹು ರಾಜ್ಯ ಸಹಕಾರ ಸೊಸೈಟಿಗಳು ಮತ್ತು ಕೃಷಿ ಉತ್ಪನ್ನಗಳ ಸಂಸ್ಥೆಗಳು (ಎಫ್‌ಪಿಒ) ಇದರ ಸದಸ್ಯರಾಗ ಬಹುದಾಗಿದೆ. ಈ ಎಲ್ಲ ಸಹಕಾರಿ ಸಂಸ್ಥೆಗಳ ಸದಸ್ಯರು ತಮ್ಮ ಚುನಾಯಿತ ಪ್ರತಿನಿಧಿಗಳನ್ನು ರಾಷ್ಟ್ರೀಯ ಮಟ್ಟದ ಕೋ ಆಪರೇಟಿವ್ ಸೊಸೈಟಿಗಳ ಮಂಡಳಿಗೆ ತಮ್ಮ ಪ್ರತಿನಿಧಿಗಳನ್ನು ತಮ್ಮ ಬೈಲಾ (ಕಾನೂನಾತ್ಮಕವಾಗಿ) ಆರಿಸಿ ಕಳುಹಿಸಿರುತ್ತಾರೆ. ಇಲ್ಲಿ ಮುಖ್ಯ ಉದ್ದೇಶ ಜಾಗತಿಕವಾಗಿ ಯೋಚಿಸು, ಸ್ಥಾನೀಕವಾಗಿ ನಡೆದು ಕೋ ಎಂಬ ದೃಷ್ಟಿಕೋನದ ಪ್ರಕಾರ ಸಹಕಾರದಿಂದ ಸಮೃದ್ಧಿ ಮತ್ತು ಸ್ವಾವಲಂಬಿ (ಆತ್ಮ ನಿರ್ಭರ)ಮುನ್ನಡೆಸುವುದಾಗಿದೆ.

### 1) ರಾಷ್ಟ್ರ ಮಟ್ಟದ ಬಹು ರಾಜ್ಯ ಬೀಜಗಳ ಸಹಕಾರ ಸೊಸೈಟಿ :

ಈ ಸಂಸ್ಥೆಯು ಉತ್ಪನ್ನಗಳಿಗೆ ಆಪೆಕ್ಸ್ ಸಂಸ್ಥೆಯ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತದೆ, ಇಲ್ಲಿ ಉತ್ತಮ ಗುಣ ಮಟ್ಟದ ಉತ್ಪನ್ನಗಳು, ಸಂಗ್ರಹಣೆ, ಶ್ರೇಣೀಕರಣ, ಗುರುತಿಸುವುದು, ಪ್ಯಾಂಕಿಂಗ್, ಶೇಖರಣೆ, ಮಾರುಕಟ್ಟೆ ಮತ್ತು ವಿತರಣೆ ಮೊದಲಾದವುಗಳನ್ನು ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಕಾರ್ಯತಂತ್ರದ ಆಧಾರದ ಮೇಲೆ ಸಂಶೋಧನೆ ಮತ್ತು ಅಭಿವೃದ್ಧಿ ನಡೆಯಬೇಕಾಗಿದೆ, ಮತ್ತು ಶೇಖರಿಸುವ ಒಂದು ಪದ್ಧತಿಯನ್ನು ಅಭಿವೃದ್ಧಿ ಪಡಿಸಬೇಕಾಗಿದೆ ಮತ್ತು ಸ್ಥಾನೀಯ ಪ್ರಾಕೃತಿಕ ಬೀಜಗಳ ಪ್ರಚಾರವನ್ನು ಕೂಡ ಮಾಡಬೇಕಾಗಿದೆ. ಇಲ್ಲಿ ಬೀಜಗಳ ಬದಲಿ ದರ (ಎಸ್‌ಆರ್‌ಆರ್) ಮತ್ತು ವಿವಿಧ ಬದಲಿ ದರ (ವಿಆರ್‌ಆರ್) ಮತ್ತು ಇಳುವರಿಯ ಅಂತರವನ್ನು ಕಡಿಮೆಮಾಡಲು ಸಹಾಯಕವಾಗುತ್ತದೆ ಜೊತೆಗೆ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಬೀಜಗಳ ಸೊಸೈಟಿಯು ತನ್ನ ಗುರಿಯನ್ನು ತಲುಪುವ ಸಲುವಾಗಿ ದೇಶದ ವಿವಿಧ ಕೋ ಆಪರೇಟಿವ್ ಸೊಸೈಟಿಗಳ ಜೊತೆಗೂಡಿ ಅದರೊಂದಿಗೆ ಕೇಂದ್ರದ ಸಚಿವಾಲಯಗಳ ಸಹಾಯದೊಂದಿಗೆ ವಿಶೇಷವಾಗಿ ರೈತ ಮತ್ತು ಕೃಷಿ ಕಲ್ಯಾಣ ಅಭಿವೃದ್ಧಿ ಸಚಿವಾಲಯ , ಭಾರತೀಯ ಕೃಷಿ ಸಂಶೋಧನೆಗ ಕೌನ್ಸಿಲ್ (ಐಸಿಎಆರ್) ಮತ್ತು ರಾಷ್ಟ್ರೀಯ ಬೀಜ ಕಾರ್ಪೋರೇಷನ್ (ಎನ್‌ಎಸ್‌ಸಿ) ಇವರ ಸಹಯೋಗದಿಂದ ಸಾಧಿಸುವ ಗುರಿಯನ್ನು ಹೊಂದಿದೆ. ಸದಸ್ಯರುಗಳಿಗೆ ಎರಡು ರೀತಿಯಲ್ಲಿ ಗುಣಮಟ್ಟ ಹಾಗೂ ದರದ ವಿಷಯಕ ಲಾಭವನ್ನು ಪಡೆಯುತ್ತಾರೆ. ಉತ್ತಮಗುಣ ಮಟ್ಟದ ಬೀಜಗಳು, ಹೆಚ್ಚು ಇಳುವರಿಯಮನ್ನು ಹೆಚ್ಚು ಇಳುವರಿ ಪಡೆಯುವ ವಿಧಾನಗಳನ್ನು ಅನುಸರಿಸಿ (ಎಚ್‌ವೈವಿ)ಯನ್ನು ಪಡೆಯುವ ಬೀಜಗಳನ್ನು ಯೋಗ್ಯದ ದರದಲ್ಲಿ ಪಡೆಯಬಹುದಾಗಿದೆ. ಇದರೊಂದಿಗೆ ಹೆಚ್ಚಿನ ಸೊಸೈಟಿಯ ಉತ್ಪನ್ನಗಳಿಂದ ಬಂದ ಲಾಭಾಂಶವನ್ನು ಕೂಡ ಪಡೆಯಬಹುದಾಗಿದೆ.

ಅಂತಿಮವಾಗಿ, ಉತ್ತಮಗುಣಮಟ್ಟದ ಬೀಜಗಳ ಉತ್ಪಾದನೆಯನ್ನು ರಾಷ್ಟ್ರೀಯ ಮಟ್ಟದ ಬೀಜಗಳ ಸಹಕಾರ ಸೊಸೈಟಿಯ ಮೂಲಕ ಕೃಷಿ ಉತ್ಪನ್ನಗಳ ಉತ್ಪಾದನೆಯಲ್ಲಿ ಹೆಚ್ಚಳವಾಗಿ ಇದರಿಂದ ದೇಶದಲ್ಲಿ ಇನ್ನು ಹೆಚ್ಚಿನ ಉದ್ಯೋಗಾವಕಾಶವನ್ನು ಕೃಷಿ ಮತ್ತು ಸಹಕಾರ ವಲಯದಲ್ಲಿ ; ಬೀಜಗಳನ್ನು ಬೇರೆ ಕಡೆಗಳಿಂದ ಆಮದು ಮಾಡಿಕೊಳ್ಳುವ ಅವಲಂಬನೆಯನ್ನು ಕಡಿಮೆ ಮಾಡುವುದು ಮತ್ತು ಗ್ರಾಮೀಣ ಆರ್ಥಿಕತೆಗೆ ಒತ್ತು ನೀಡಿ "ಮೇಕ್ ಇನ್ ಇಂಡಿಯಾ"ಗೆ ಪ್ರೋತ್ಸಾಹ ನೀಡುವುದರ ಜೊತೆಗೆ ಭಾರತವನ್ನು ಸ್ವಾವಲಂಬಿಯಾಗುವತ್ತ ಮುನ್ನಡೆಸುವುದಾಗಿದೆ (ಆತ್ಮ ನಿರ್ಭರ ಭಾರತ)

### 2) ರಾಷ್ಟ್ರೀಯ ಬಹು ರಾಜ್ಯ ಸಾವಯವ ಸಹಕಾರ ಸಂಘ :

ಈ ಸಂಸ್ಥೆಯು ಒಂದೇ ಸ್ಥಳದ ಅಡಿ ರಕ್ಷಣೆ ನೀಡುವ ಕೊಡೆಯಂತೆ ಕಾರ್ಯ ನಿರ್ವಹಿಸುತ್ತದೆ, ಸಂಗ್ರಹಣೆ ಮತ್ತು ಪ್ರಮಾಣೀಕರಣ, ಪರಿವೀಕ್ಷಣೆ, ಮುದ್ರೆಹಾಕುವುದು ಮತ್ತು ಸಾವಯವ ಉತ್ಪನ್ನಗಳ ಮಾರುಕಟ್ಟೆ ಸಂಬಂಧಿಸಿದ ಕೇಂದ್ರ ಸಚಿವಾಲಯಗಳ ಸಹಾಯದಿಂದ ಮಾಡಿಕೊಡುತ್ತದೆ. ಕೋಆಪರೇಟಿವ್ ಸೊಸೈಟಿಗಳು ವಿವಿಧ ಚಟುವಟಿಕೆಗಳನ್ನು ನಡೆಸಿ ಸಾವಯವ ವಲಯದ ಉತ್ಪನ್ನಗಳ ಪ್ರಮಾಣೀಕೃತ ಮತ್ತು ಸರಿಯಾದ ಸಾವಯವ ಪದಾರ್ಥಗಳನ್ನು ಗುರುತಿಸಿ ಅವುಗಳ ಮಾರಾಟದವರೆಗಿನ ಸಹಾಯವನ್ನು ಮಾಡುತ್ತದೆ. ಈ ಸೊಸೈಟಿಯು ಸಾವಯವ ಉತ್ಪನ್ನಗಳ

ಬೇಡಿಕೆ ಮತ್ತು ಪೂರೈಕೆಯ ಸಂಭಾವ್ಯತೆಯನ್ನು ಆಧರಿಸಿ ಸ್ಥಾನೀಯ ಮತ್ತು ಜಾಗತಿಕ ಮಾರುಕಟ್ಟೆಯ ಅವಶ್ಯಕತೆಯನ್ನು ಪೂರೈಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತದೆ, ಈ ಸೊಸೈಟಿಯು ತಮ್ಮ ಸದಸ್ಯರುಗಳಿಗೆ ಹೆಚ್ಚು ದರದಲ್ಲಿ ಉತ್ಪನ್ನಗಳ ಮಾರಾಟವಾಗುವಂತೆ ಒಟ್ಟಾರೆ ಒಟ್ಟುಗೂಡುವಿಕೆ, ಮುದ್ರೆಯನ್ನು ಗುರುತಿಸುವುದು ಮತ್ತು ಮಾರುಕಟ್ಟೆಯನ್ನು ಅತೀ ದೊಡ್ಡ ಪ್ರಮಾಣದಲ್ಲಿ ನೀಡುವುದು ಜೊತೆಗೆ ಪರಿವೀಕ್ಷಣೆ ಮತ್ತು ಪ್ರಮಾಣೀಕರಣವನ್ನು ಕೈಗೆಟಕುವ ದರದಲ್ಲಿ ದೊರಕಿಸಿಕೊಡುತ್ತದೆ. ಇದಲ್ಲದೇ ಸಂಘವು ಸಾಂಸ್ಥಿಕ ಸಹಾಯದ ರೂಪದಲ್ಲಿ ಉತ್ಪನ್ನಗಳನ್ನು ಒಟ್ಟುಗೂಡಿಸಲು, ಪ್ರಮಾಣೀಕರಿಸಲು, ಪರೀಕ್ಷಿಸಲು, ಸಂಗ್ರಹಿಸಲು, ಶೇಖರಿಸಲು, ಸಂಸ್ಕರಿಸಲು, ಮುದ್ರೆಯನ್ನು ಗುರುತಿಸಲು, ಹೆಸರನ್ನು ಹಾಕಲು, ಪ್ಯಾಕಿಂಗ್ ಮಾಡಲು ಮತ್ತು ರವಾನಿಸಲು ಸಾರಿಗೆ ವ್ಯವಸ್ಥೆಯನ್ನು ಕೂಡ ಮಾಡಿಕೊಡುತ್ತದೆ. ಇಷ್ಟೇ ಅಲ್ಲದೇ ಸಾವಯವ ಪದಾರ್ಥಗಳ ಮಾರುಕಟ್ಟೆ ಮತ್ತು ಸಾವಯವ ಕೃಷಿ ಉತ್ಪನ್ನಗಳನ್ನು ಉತ್ಪಾದಿಸುವ ಕೃಷಿಕರಿಗೆ ಆರ್ಥಿಕ ಸಹಾಯವನ್ನು ಕೂಡ ತನ್ನ ಸದಸ್ಯ ಕೋ ಆಪರೇಟಿವ್‌ಗಳ ಮೂಲಕ ಮಾಡಿಸುತ್ತದೆ. ಇದರಲ್ಲಿ ಪಿಎಸಿಎಸ್ ಮತ್ತು ಎಫ್‌ಪಿಒಗಳು ಸಹಾಯವನ್ನು ಮಾಡುತ್ತವೆ. ಈ ಸಂಸ್ಥೆಯು ಸಾವಯವ ಉತ್ಪನ್ನಗಳ ಪ್ರಚಾರ ಮತ್ತು ಅಭಿವೃದ್ಧಿಯನ್ನು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ನಡೆಸುವ ಮೂಲಕ ಮಾಡುತ್ತದೆ, ಸರಕಾರದ ಏಜೆನ್ಸಿಗಳು ಹಾಗೂ ಅನೇಕ ಸ್ಕೀಮ್‌ಗಳ ಮೂಲಕ ಸಹಾಯ ಮಾಡುತ್ತದೆ.. ಈ ಸಂಸ್ಥೆಯು ರಾಷ್ಟ್ರೀಯ ಕೋ ಆಪರೇಟಿವ್ ಎಕ್ಸ್‌ಪೋರ್ಟ್ ಸೊಸೈಟಿಯ ಸಹಾಯವನ್ನು ಕೂಡ ಪಡೆದು ಸಾವಯವ ಉತ್ಪನ್ನಗಳನ್ನು ರಫ್ತು ಮಾಡುವಲ್ಲಿ ಸಂಸ್ಥೆಯ ಸೇವೆಗಳನ್ನು ಉಪಯೋಗ ಪಡಿಸಿಕೊಳ್ಳುತ್ತದೆ. ಈ ರೀತಿಯ ಸಂಸ್ಕರಣಾ ವಿಧಾನದಲ್ಲಿ ಸಾಮಾನ್ಯವಾದ ಕೃಷಿ ಉತ್ಪನ್ನಗಳು ಮತ್ತು ಸಾವಯವ ಕೃಷಿ ಉತ್ಪನ್ನಗಳ ನಡುವಿನ ವ್ಯತ್ಯಾಸವನ್ನು ಸಮತೋಲನತೆ ಅನುಸಂಧಾನವನ್ನು ಕಾಪಾಡಿಕೊಳ್ಳುತ್ತದೆ.

**3) ರಾಷ್ಟ್ರೀಯ ಮಟ್ಟದ ಬಹು ರಾಜ್ಯ ಸಹಕಾರ ರಫ್ತು ಸೊಸೈಟಿ :**

ಈ ಸಂಸ್ಥೆಯು ಒಂದೇ ಸ್ಥಳದ ಅಡಿ ರಕ್ಷಣೆ ನೀಡುವ ಕೊಡೆಯಂತೆ ಕಾರ್ಯ ನಿರ್ವಹಿಸುತ್ತದೆ, ಇಲ್ಲಿ ಅವಶ್ಯಕತೆಗಿಂತ ಹೆಚ್ಚಾಗಿ ಉಳಿದಿರುವ ಉತ್ಪನ್ನಗಳನ್ನು ಹಾಗೂ ಸೇವೆಗಳನ್ನು ದೇಶದ ಬೇರೆ ಬೇರೆ ರಾಜ್ಯಗಳ ಸಹಕಾರ ಸೊಸೈಟಿಗಳಿಗೆ ತಲುಪುವಂತೆ ಸಂಬಂಧಿಸಿದ ಕೇಂದ್ರಿಯ ಸಚಿವಾಲಯಗಳ ಮೂಲಕ ಸಹಾಯಪಡೆದು ಮಾಡುತ್ತದೆ, ಸಹಕಾರ ವಲಯದ ಒತ್ತಡದಿಂದ ಈ ಸಂಸ್ಥೆಯು ಒಂದೇ ಸ್ಥಳದ ಅಡಿ ರಕ್ಷಣೆ ನೀಡುವ ಕೊಡೆಯಂತೆ ಕಾರ್ಯ ನಿರ್ವಹಿಸುತ್ತದೆ ಮತ್ತು ರಫ್ತನ್ನು ಮಾಡಲು ಪ್ರಚಾರವನ್ನು ಮಾಡುತ್ತದೆ. ಇದರಿಂದ ಭಾರತೀಯ ಸಹಕಾರ ಸಂಘಗಳ ಋಫ್ತಿನ ಸಂಭಾವ್ಯತೆಯನ್ನು ಜಾಗತಿಕಮಟ್ಟದಲ್ಲಿ ತೆರೆಯಲು ಸಹಾಯ ಮಾಡಿದಂತಾಗುತ್ತದೆ. ಇದರಿಂದ ಸರಕಾರದ ವಿವಿಧ ಸಚಿವಾಲಯಗಳಲ್ಲಿ ರಫ್ತಿನ ಮೂಲಕ ದೊರೆಯ ಬಹುದಾದ ಸೌಲಭ್ಯಗಳ ಲಾಭವನ್ನು ಮತ್ತು ಅನೇಕ ನೀತಿಗಳಿಂದ ದೊರೆಯಬಹುದಾದ ಲಾಭಗಳನ್ನು ಪಡೆಯಲು ಸಹಕರಿಸುತ್ತದೆ. ಈ ಮೂಲಕ ಸಹಕಾರ ವಲಯದಲ್ಲಿ ಇನ್ನು ಹೆಚ್ಚು ಉದ್ಯೋಗಾವಕಾಶವನ್ನು ಕಲ್ಪಿಸಿಕೊಡಲಾಗುತ್ತದೆ. ಉತ್ಪನ್ನಗಳ ಸಂಸ್ಕರಣೆ ಮತ್ತು ಸೌಲಭ್ಯಗಳ ಗುಣಮಟ್ಟವನ್ನು ಹೆಚ್ಚಿಸಿ ಜಾಗತಿಕ ಮಟ್ಟದಲ್ಲಿ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳಲು ಬೇಕಾಗುವ ಕೆಲಸಗಾರರಿಂದ ಇನ್ನು ಹೆಚ್ಚಿನ ಉದ್ಯೋಗ ಸೃಷ್ಟಿಯಾಗುತ್ತದೆ ಇದರೊಂದಿಗೆ "ಮೇಕ್ ಇನ್ ಇಂಡಿಯಾ" ಯೋಜನೆಯನ್ನು ಕೂಡ ಪ್ರಸಾರ ಮಾಡಿದಂತೆ ಆಗುತ್ತದೆ ಈ ಮೂಲಕ ಆತ್ಮ ನಿರ್ಭರ ಭಾರತದ ಗುರಿಯನ್ನು ತಲುಪಲು ಸಹಾಯಕವಾಗುತ್ತದೆ.


ಸಮಗ್ರ ಸಹಕಾರ ಕ್ಷೇತ್ರದ ಅಭಿವೃದ್ಧಿಯನ್ನು ಸೃಷ್ಟಿಸಲು ಏಕೀಕರಣ ಮತ್ತು ಸಹಕಾರ ತತ್ವವನ್ನು ಸಹಕಾರಿ ಸಂಸ್ಥೆಗಳ ನಡುವೆ ಅಳವಡಿಸಿಕೊಳ್ಳುವುದರ ಮೂಲಕ (6ನೇ ತತ್ವ), ಭಾರತ ಸರಕಾರವು ಎಲ್ಲ ಪ್ರಾಥಮಿಕ ಕೃಷಿ ಕ್ರೆಡಿಟ್ ಸೊಸೈಟಿಗಳ (ಪಿಎಸಿಎಸ್‌ಗಳು)ಗಣಕೀಕರಣವನ್ನು ಮಾಡಲು ಅನುಮೋದನೆಯನ್ನು ನೀಡಿದೆ, ಇಲ್ಲಿ 63000 ಕಾರ್ಯ ನಿರ್ವಹಿಸುತ್ತಿರುವ ಪಿಎಸಿಎಸ್‌ಗಳನ್ನು ಗಣಕೀಕರಣ ಮಾಡಲಾಗುವುದು ಇದರ ಅಂದಾಜು ಮೊತ್ತ 2516 ಕೋಟಿ ರೂಪಾಯಿಗಳಾಗಿದ್ದು ಇದರಿಂದ ಸರಿ ಸುಮಾರು 13 ಕೋಟಿ ರೈತರಿಗೆ ಲಾಭವಾಗಲಿದೆ, ಈ ಯೋಜನೆಯಿಂದ ಸಣ್ಣ ಮತ್ತು ಅತೀ ಸಣ್ಣ ರೈತರೂ ಕೂಡ ಸೌಲಭ್ಯವನ್ನು ಪಡೆಯಬಹುದಾಗಿದೆ.

ಈ ಯೋಜನೆಯಲ್ಲಿ ಅಭಿವೃದ್ಧಿಯನ್ನು ಒಳಗೊಂಡಿರುವ, ಸಾಮಾನ್ಯವಾದ ಒಂದು ಸಾಫ್ಟ್‌ವೇರ್ ಜೊತೆಗೆ ಸೈಬರ್ ಸುರಕ್ಷೆ ಮತ್ತು ಮಾಹಿತಿ ಸಂಗ್ರಹಣೆ, ಅದರೊಂದಿಗೆ ಪಿಎಸಿಎಸ್‌ಗಳಿಗೆ ಹಾರ್ಡ್‌ವೇರ್ ಸಹಾಯವನ್ನು ಕೂಡ ಕೊಡಲಾಗುವುದು. ಪ್ರಸ್ತುತ ಇರುವ ದಾಖಲಾತಿಗಳ ಡಿಜಿಟಲೀಕರಣ ಅದರೊಂದಿಗೆ ಸಹಾಯ ಮತ್ತು ತರಬೇತಿಯನ್ನು ಕೊಡಲಾಗುವುದು. ಈ ಸಾಫ್ಟ್‌ವೇರ್‌ನಲ್ಲಿ ಸ್ಥಳೀಯ ಭಾಷೆಯೊಂದಿಗೆ ಗ್ರಾಹಕೀಕರಣದ ನಮ್ಯತೆಯು ರಾಜ್ಯಗಳ ಅವಶ್ಯಕತೆಗೆ ತಕ್ಕಂತೆ ಮಾಡಿಕೊಡಲಾಗುವುದು. ಈ ಯೋಜನಯ ನಿರ್ವಹಣೆಯ ಘಟಕಗಳನ್ನು ಕೇಂದ್ರೀಯ ಮತ್ತು ರಾಜ್ಯ ಮಟ್ಟದ ಸಮಿತಿಗಳನ್ನು ಮಾಡಲಾಗುವುದು. 200 ಪಿಎಸಿಎಸ್‌ಗಳಿಗೆ ಕ್ಲಸ್ಟರ್ ಗಳನ್ನು ಜಿಲ್ಲಾ ಮಟ್ಟದಲ್ಲಿ ನೀಡಲಾಗುವುದು.

ಸಹಕಾರ ವಲಯದ ಯಶಸ್ಸು ಅದರ ಆರೋಗ್ಯಯುತ ಪ್ರಾಥಮಿಕ ಕೃಷಿ ಕ್ರೆಡಿಟ್ ಸೊಸೈಟಿಗಳ ಮೇಲೆ ಆಧರಿತವಾಗಿರುತ್ತದೆ ಮತ್ತು ಸ್ಪಂದಿಸುವ ಹಾಗೂ ಸಕಾರಾತ್ಮಕ ಚಟುವಟಿಕೆಗಳನ್ನು ಭಾರತ ಸರಕಾರವು ತನ್ನ ಸಹಕಾರ ಸಚಿವಾಲಯದ ಮೂಲಕ ಆರಂಭಿಸಿದೆ ಮತ್ತು ನವದೆಹಲಿಯಲ್ಲಿ ರಾಷ್ಟ್ರೀಯ ಮಟ್ಟದ ಕೋ ಆಪರೇಟಿವ್ ಸೊಸೈಟಿಯನ್ನು ಆರಂಭಿಸುವುದರ ಮೂಲಕ ಆರಂಭಿಸಿದೆ, ಇದರಿಂದ ಬಹು ದೂರದ ದಾರಿಯನ್ನು ಕ್ರಮಿಸಲು ವಿಶೇಷವಾಗಿ ರೈತರಿಗೆ ಲಾಭವಾದರೆ ಇದರೊಂದಿಗೆ ಗ್ರಾಮೀಣ ಅಭಿವೃದ್ಧಿ ಮತ್ತು ಕೃಷಿ ವಲಯದ ಅಭಿವೃದ್ಧಿಯೂ ಆಗುತ್ತದೆ.

# ಅಮೃತ ಭಾರತ ಸಪ್ತ ಸೂತ್ರದ ಕೇಂದ್ರ ಬಜೆಟ್ - ಒಂದು ಅವಲೋಕನ
# ಸಹಕಾರ ಕ್ಷೇತ್ರ ಪರಿಗಣನೆಯ ಅಂಶಗಳು

– ಶ್ರೀ ರಘುನಂದನ ಕೆ, ಉಪಪ್ರಧಾನ ವ್ಯವಸ್ಥಾಪಕ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.




ಕೇಂದ್ರ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ರವರು 01 ಫೆಬ್ರವರಿ 2023ರಂದು ನಮ್ಮ ದೇಶದ 2023–24ನೇ ಸಾಲಿನ ಬಜೆಟ್‌ನ್ನು ಸಂಸತ್ತಿನಲ್ಲಿ ಮಂಡಿಸಿದ್ದಾರೆ. ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಮಂಡನೆಯಾಗುತ್ತಿರುವ, 76ನೇ ವರ್ಷದಿಂದ 100 ವರ್ಷದವರೆಗಿನ 'ಅಮೃತ ಕಾಲ'ವನ್ನು ಗಮನದಲ್ಲಿರಿಸಿಕೊಂಡು ಮಂಡಿಸಲಾಗುತ್ತಿರುವ ಮೊದಲ ಬಜೆಟ್ ಇದಾಗಿರುವುದರಿಂದ ಈ ಸಲದ ಬಜೆಟ್‌ನ್ನು 'ಅಮೃತ ಕಾಲ'ದ ಬಜೆಟ್ ಎಂದಿದ್ದಾರೆ. ಬಜೆಟ್ ಅಂಶಗಳ ಬಗ್ಗೆ ಸಾಕಷ್ಟು ಅಭಿಪ್ರಾಯಗಳು, ಚರ್ಚೆಗಳು, ವಿಶ್ಲೇಷಣೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ, ಬಜೆಟ್ ಕುರಿತು ಒಂದಷ್ಟು ಮಾಹಿತಿ ಹಾಗೂ ಈಗ ಮಂಡನೆಯಾಗಿರುವ ಬಜೆಟ್‌ನಲ್ಲಿ ಸಹಕಾರ ಕ್ಷೇತ್ರಕ್ಕೆ ಅನ್ವಯವಾಗುವ ಅಂಶಗಳನ್ನು ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

**ಬಜೆಟ್ ಪರಿಚಯ :** ಬಜೆಟ್ ಎನ್ನುವುದನ್ನು ಮುಂಗಡ ಪತ್ರ ಎಂದೂ, ಆಯವ್ಯಯ ಎಂದೂ ಕರೆಯುತ್ತೇವೆ. ಮುಂಬರುವ ವರ್ಷದಲ್ಲಿ ಸರ್ಕಾರದ ನಿರೀಕ್ಷಿತ ಆದಾಯ ಮತ್ತು ವೆಚ್ಚಗಳ ಕುರಿತು ತಯಾರಿಸಲಾದ ಅಂದಾಜು ಯೋಜನೆಯನ್ನು ಬಜೆಟ್ ಎನ್ನಲಾಗುತ್ತದೆ. ಇದು ರಾಜ್ಯವನ್ನು, ದೇಶವನ್ನು ಮುನ್ನಡೆಸಿಕೊಂಡು ಹೋಗಲು ರಾಜ್ಯ ಅಥವಾ ಕೇಂದ್ರ ಸರ್ಕಾರ ಮಾಡಿಕೊಳ್ಳುವ ಯೋಜನೆ. ಬಜೆಟ್ ಅಧಿವೇಶನದಲ್ಲಿ ಮುಂದಿನ ಹಣಕಾಸು ವರ್ಷದ ನಿರೀಕ್ಷಿತ ಧನ ಸಂಗ್ರಹಣೆ ಹಾಗು ಅತ್ಯಾವಶ್ಯಕ ಕ್ಷೇತ್ರಗಳ ಅಭಿವೃದ್ಧಿಗಾಗಿ ಹಣ ಹೂಡಿಕೆಯ ಕುರಿತ ತನ್ನ ಯೋಜನೆಯನ್ನು ಸರ್ಕಾರ ಮಂಡಿಸುತ್ತದೆ.

ಭಾರತದಲ್ಲಿ ಕೇಂದ್ರ ಹಣಕಾಸು ಸಚಿವರು ಹಣಕಾಸು ಇಲಾಖೆಯ ಸಹಕಾರದೊಂದಿಗೆ ಮುಂಗಡಪತ್ರವನ್ನು ಸಿದ್ಧಪಡಿಸುತ್ತಾರೆ. ಸಾಮಾನ್ಯವಾಗಿ ಫೆಬ್ರವರಿ ಅಥವಾ ಮಾರ್ಚ್ ತಿಂಗಳಿನಲ್ಲಿ ಬಜೆಟ್ ಮಂಡಿಸಿ ಮಾರ್ಚ್ 31ರೊಳಗೆ ಸಂಸತ್ತಿನ ಎರಡೂ ಸದನಗಳಲ್ಲಿ ಒಪ್ಪಿಗೆ ಪಡೆಯಲಾಗುತ್ತದೆ. ಅದೇ ರೀತಿ ರಾಜ್ಯಗಳಲ್ಲಿ ಆ ರಾಜ್ಯದ ಹಣಕಾಸು ಸಚಿವರು ಬಜೆಟ್ ಮಂಡಿಸುತ್ತಾರೆ. ಸ್ವತಂತ್ರ ಭಾರತದ ಮೊದಲ ಬಜೆಟ್‌ನ್ನು 1947, ನವೆಂಬರ್ 26ರಂದು ಅಂದಿನ ಹಣಕಾಸು ಸಚಿವರಾಗಿದ್ದ ಆರ್ ಕೆ ಷಣ್ಮುಖಂ ಚೆಟ್ಟಿ ಮಂಡನೆ ಮಾಡಿದ್ದರು. ಭಾರತದ ಕೇಂದ್ರ ಬಜೆಟ್ ಮಂಡಿಸಿದ ಮೊದಲ ಮಹಿಳೆಯ ಕೀರ್ತಿ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಸಲ್ಲುತ್ತದೆ. ಇವರ ನಂತರ ಭಾರತದ ಬಜೆಟ್ ಮಂಡಿಸಿದ ಎರಡನೇ ಮಹಿಳೆ ಶ್ರೀಮತಿ ನಿರ್ಮಲಾ ಸೀತಾರಾಮನ್. ಇದು ನಿರ್ಮಲಾ ಸೀತಾರಾಮನ್ ಇವರು ಮಂಡಿಸುತ್ತಿರುವ ಐದನೇ ಬಜೆಟ್.

**ಬಜೆಟ್ ಮಹತ್ವ :** ಬಜೆಟ್ ತಯಾರಿಸುವುದರಿಂದ ದೇಶದ ಕಾರ್ಯಾಂಗ ಮಾಡಲೇಬೇಕಾದ ಅಥವಾ ಮಾಡಲು ಬಯಸುವ ಕಾರ್ಯಗಳಿಗೆ ಸಾಕಷ್ಟು ಹಣ ದೊರಕುತ್ತದೆಯೇ ಎಂಬುದನ್ನು ಮುಂಚಿತವಾಗಿ ನಿರ್ಧರಿಸಲು ಸಾಧ್ಯವಾಗುತ್ತದೆ. ಹಿಂದಿನ ವರ್ಷದ ನೈಜ ಆದಾಯ ವೆಚ್ಚಗಳು, ಪ್ರಸ್ತುತ ವರ್ಷದ ನೈಜ ಆದಾಯ ವೆಚ್ಚಗಳು, ಪ್ರಸ್ತುತ ವರ್ಷದ ಪರಿಷ್ಕೃತ ಅಂದಾಜು ಆದಾಯ ವೆಚ್ಚಗಳು, ಮುಂಬರುವ ವರ್ಷದ ಅಂದಾಜು ಆದಾಯ ವೆಚ್ಚಗಳು ಎಂಬ ನಾಲ್ಕು ಭಾಗಗಳನ್ನು ಬಜೆಟ್ ಒಳಗೊಂಡಿದ್ದು ಸರ್ಕಾರದ ಆದಾಯ ವೆಚ್ಚಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವ ಮೂಲಕ ಪಾರದರ್ಶಕ ಆಡಳಿತದ ಖಾತರಿಯನ್ನು ಬಜೆಟ್ ಮೂಲಕ ಸರ್ಕಾರ ನೀಡುತ್ತದೆ.

**ಬಜೆಟ್ ವಿಧಗಳು:** ಬಜೆಟ್‌ನಲ್ಲಿ ಮೂರು ವಿಧಗಳಿವೆ. ಸರಕಾರದ ನಿರೀಕ್ಷಿತ ಆದಾಯವು ನಿರೀಕ್ಷಿತ ವೆಚ್ಚಕ್ಕೆ ಸಮವಾಗಿದ್ದರೆ ಅದು ಸಮತೋಲನ ಬಜೆಟ್, ಸರಕಾರದ ಅಂದಾಜು ಆದಾಯವು ಅಂದಾಜು ವೆಚ್ಚಕ್ಕಿಂತ ಅಧಿಕವಾಗಿದ್ದರೆ ಉಳಿತಾಯ ಬಜೆಟ್, ಸರಕಾರದ ಅಂದಾಜು ಆದಾಯಕ್ಕಿಂತ ಅಂದಾಜು ವೆಚ್ಚವು ಅಧಿಕವಾಗಿದ್ದರೆ ಕೊರತೆ ಬಜೆಟ್ ಎಂದು ವರ್ಗೀಕರಿಸಲಾಗಿದೆ. ಪ್ರಸ್ತುತ ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಮಂಡನೆಯಾಗುತ್ತಿರುವ ಬಜೆಟ್‌ಗಳು ಕೊರತೆ ಮುಂಗಡ ಪತ್ರಗಳಾಗಿವೆ.

### 2023–24ರ ಬಜೆಟ್‌ನ ಪ್ರಮುಖ ಅಂಶಗಳು :

- ಯುವ ಕೇಂದ್ರಿತ ನಾಗರಿಕ ಅವಕಾಶಗಳು, ಉದ್ಯೋಗವಕಾಶ ಮತ್ತು ಅಭಿವೃದ್ಧಿ, ಸಶಕ್ತ ಮತ್ತು ಸುಸ್ಥಿರ ಆರ್ಥಿಕ ಪರಿಸರದ ದೃಷ್ಟಿಯೊಂದಿಗೆ ಈ ಬಜೆಟ್ ಮಂಡಿಸಲಾಗಿದೆ.
- ಸಪ್ತ ಸೂತ್ರಗಳನ್ನು ಆಧಾರವಾಗಿರಿಸಿಕೊಂಡು ಬಜೆಟ್ ರೂಪಿಸಲಾಗಿದ್ದು – ಸರ್ವರನ್ನೊಳಗೊಂಡ ಅಭಿವೃದ್ಧಿ, ಕೊನೆಯ

ಹಂತದವರೆಗೆ ತಲುಪುವುದು, ಮೂಲ ಸೌಕರ್ಯ ಹಾಗೂ ಬಂಡವಾಳ ಹೂಡಿಕೆ, ಯುವ ಶಕ್ತಿ, ಹಣಕಾಸು ವಲಯ, ಹಸಿರು ಪ್ರಗತಿ, ಸಾಮರ್ಥ್ಯ ಅನಾವರಣ ಇವು ಸಪ್ತ ಸೂತ್ರಗಳಾಗಿವೆ.

- ಈ ಬಾರಿಯ ಕೇಂದ್ರ ಬಜೆಟ್‌ನ ಒಟ್ಟೂ ಗಾತ್ರ 47,03,097 ಕೋಟಿ. ಕಳೆದ ಬಾರಿಗೆ ಹೋಲಿಸಿದಲ್ಲಿ ಬಜೆಟ್ ಗಾತ್ರ 5.60 ಲಕ್ಷ ಕೋಟಿಗಳಷ್ಟು ಹೆಚ್ಚಾಗಿದೆ.
- ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಮೂಲಸೌಕರ್ಯದ ಬಂಡವಾಳವನ್ನು ಶೇ.33ರಷ್ಟು ಹೆಚ್ಚಿಸಿ 10 ಲಕ್ಷ ಕೋಟಿಗಳಿಗೆ ಏರಿಸಲಾಗಿದೆ. ಕೃಷಿಗೆ 20 ಲಕ್ಷ ಕೋಟಿ ಮೀಸಲಿರಿಸಲಾಗಿದೆ. ಇತಿ–ಹಾಸದಲ್ಲಿ ಇದೇ ಮೊದಲ ಬಾರಿಗೆ ರೈಲ್ವೆಗೆ 2.40 ಲಕ್ಷ ಕೋಟಿ ಅನುದಾನ ಒದಗಿಸಲಾಗಿದೆ.
- ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಧಿ ಸ್ಥಾಪನೆ, ಯುವ ಶಕ್ತಿಗೆ ಅಮೃತ ಪೀಳಿಗೆ ಯೋಜನೆಯಡಿಯಲ್ಲಿ ತಂತ್ರಜ್ಞಾನಾಧರಿತ ಕೌಶಲ್ಯ ತರಬೇತಿ, ಮಧ್ಯಮ ವರ್ಗದ ಆದಾಯ ತೆರಿಗೆ ಪಾವತಿದಾರರಿಗೆ ರಿಲೀಫ್, ಮಹಿಳೆಯರು, ರೈತರಿಗೆ ಆದ್ಯತೆ, ಸಿರಿಧಾನ್ಯ, ಸಾವಯವ ಕೃಷಿಗೆ ಉತ್ತೇಜನ, ವಿಶ್ವಕರ್ಮರ ಕೌಶಲ್ಯಾಭಿವೃದ್ಧಿಗೆ ಹೊಸ ಯೋಜನೆ ಇವು ಬಜೆಟ್‌ನ ಪ್ರಮುಖ ಅಂಶಗಳಾಗಿವೆ.

**ಬಜೆಟ್‌ನಲ್ಲಿ ಸಹಕಾರ ಕ್ಷೇತ್ರದ ಕುರಿತ ಅಂಶಗಳು :**

- 'ಸಹಕಾರ ಸೆ ಸಮೃದ್ಧಿ' ಎನ್ನುವ ದೃಷ್ಟಿಯೊಂದಿಗೆ ಕೇಂದ್ರ ಸಹಕಾರ ಸಚಿವಾಲಯ ರಚನೆಯಾಗಿದ್ದು, ರೂ.2516 ಕೋಟಿ ಹೂಡಿಕೆಯೊಂದಿಗೆ 63,000 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ (ಕಂಅಖ) ಗಣಕೀಕರಣ ಕಾರ್ಯ ಆರಂಭವಾಗಿರುವುದನ್ನು ಉಲ್ಲೇಖಿಸಿ ಸಹಕಾರ ಕ್ಷೇತ್ರಕ್ಕೆ ಬಜೆಟ್ ಕೊಡುಗೆಯನ್ನು ವಿವ–ರಿಸಲಾಗಿದೆ.
- ಕೃಷಿ ಆದಾಯದ ಮೂಲಕ ಗ್ರಾಮೀಣಾಭಿವೃದ್ಧಿ ಸಾಧಿಸಲು ಮುಂದಿನ ಐದು ವರ್ಷಗಳಲ್ಲಿ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿದೋದ್ದೇಶ ಸಹಕಾರ ಸಂಘಗಳು, ಡೈರಿ ಸಹಕಾರ ಸಂಘಗಳು, ಮೀನುಗಾರಿಕಾ ಸಹಕಾರ ಸಂಘಗಳನ್ನು ತೆರೆಯಲು ಗುರಿ ನಿಗದಿಪಡಿಸಿಕೊಳ್ಳಲಾಗಿದೆ.
- ಸಣ್ಣ ಮತ್ತು ಮಧ್ಯಮ ವರ್ಗದ ರೈತರ ಅಭಿವೃದ್ಧಿಗೆ 'ಸಹಕಾರಿ ಆಧಾರಿತ ಆರ್ಥಿಕ ಅಭಿವೃದ್ಧಿ ಮಾದರಿ'ಯನ್ನು ಉತ್ತೇಜಿಸುವುದಾಗಿ ಹೇಳಲಾಗಿದ್ದು, ರೈತರು ಬೆಳೆದ ಉತ್ಪನ್ನಗಳನ್ನು ಸಂಗ್ರಹಿಸಿ ಸೂಕ್ತ ಸಂದರ್ಭದಲ್ಲಿ ಮಾರಾಟ ವ್ಯವಸ್ಥೆ ಕಲ್ಪಿಸಲು ವಿಕೇಂದ್ರೀಕೃತ ಬೃಹತ್ ಶೇಖರಣಾ ಕೇಂದ್ರಗಳ ನಿರ್ಮಾಣವನ್ನು ಪ್ರಸ್ತಾಪಿಸಲಾಗಿದೆ.
- ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ವಿವಿದೋದ್ದೇಶ ಕಾರ್ಯಚಟುವಟಿಕೆ ನಡೆಸಲು ಸಾಧ್ಯವಾಗುವಂತೆ ಮಾದರಿ ಉಪವಿಧಿಗಳನ್ನು ರಚಿಸುವುದರೊಂದಿಗೆ ಸಹಕಾರ ಸಂಘಗಳ ರಾಷ್ಟ್ರವ್ಯಾಪಿ ಮ್ಯಾಪಿಂಗ್‌ಗಾಗಿ 'ರಾಷ್ಟ್ರೀಯ ಸಹಕಾರಿ ಡಾಟಾಬೇಸ್' ಸಿದ್ಧಪಡಿಸಲಾಗುತ್ತಿದೆ.
- ಪ್ರಸ್ತುತ ಹೊಸ ಉತ್ಪಾದನಾ ಕಂಪನಿಗಳಿಗೆ ಲಭ್ಯವಿರುವ ಶೇ.15ರಷ್ಟು ಕಡಿಮೆ ತೆರಿಗೆ ದರದ ಲಾಭವನ್ನು, 31.03.2024ರವರೆಗೆ ಉತ್ಪಾದನಾ ಚಟುವಟಿಕೆ ಪ್ರಾರಂಭಿಸುವ ಹೊಸ ಸಹಕಾರಿ ಸಂಸ್ಥೆಗಳಿಗೆ ಕೂಡ ನೀಡಲಾಗಿದೆ.
- 2016–17ರ ಮೌಲ್ಯಮಾಪನ ವರ್ಷದ ಹಿಂದಿನ ಅವಧಿಗೆ ಕಬ್ಬು ಬೆಳಗಾರ ರೈತರಿಗೆ ನೀಡಲಾದ ಪಾವತಿಗಳನ್ನು ವೆಚ್ಚವಾಗಿ ಕ್ಲೈಮ್ ಮಾಡಲು ಸಕ್ಕರೆ ಸಹಕಾರಿ ಸಂಘಗಳಿಗೆ ಅವಕಾಶವನ್ನು ಒದಗಿಸಲಾಗಿದೆ. ಇದರಿಂದ ಸುಮಾರು ರೂ.10,000 ಕೋಟಿಯವರೆಗೆ ಪರಿಹಾರ ದೊರೆಯುವ ನಿರೀಕ್ಷೆ ಇದೆ.
- ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳಿಂದ ನಗದು ಠೇವಣಿ ಮತ್ತು ನಗದು ರೂಪದಲ್ಲಿ ಸಾಲ ಹಿಂಪಾವತಿಯ ಮಿತಿಯನ್ನು ರೂ.2 ಲಕ್ಷಕ್ಕೆ ವಿಸ್ತರಿಸಲಾಗಿದೆ. ಆದಾಯ ತೆರಿಗೆ ಕಾಯ್ದೆ ಕಲಂ.269ಎಸ್‌ಎಸ್ ಹಾಗೂ ಕಲಂ.269ಟಿ ಅನ್ವಯ 1984ರಲ್ಲಿ ರೂ.10,000/–ಗಳೊಂದಿಗೆ ಈ ಮಿತಿ ಆರಂಭವಾಗಿತ್ತು, ಈ ಮಿತಿಯನ್ನು 01.04.1989ರಿಂದ ಅನ್ವಯವಾಗುವಂತೆ ರೂ.20,000/–ಕ್ಕೆ ವಿಸ್ತರಿಸಲಾಗಿತ್ತು. ಪ್ರಸ್ತುತ 35 ವರ್ಷಗಳ ನಂತರದಲ್ಲಿ ಈ ಮಿತಿಯನ್ನು ಕಂಅಖ & ಕಅಂಖಆ ಃಚಿಟಿಞ ಗಳಿಗೆ ಸೀಮಿತಗೊಳಿಸಿ ಹೆಚ್ಚಳ ಮಾಡಿದಂತಾಗಿದೆ.
- ಸಹಕಾರಿ ಸಂಘಗಳಿಗೆ ನಗದು ಹಿಂಪಡೆಯುವಿಕೆಯ ಮೇಲಿನ ಟಿಡಿಎಸ್ ಮಿತಿಯನ್ನು ರೂ.3 ಕೋಟಿಗೆ ವಿಸ್ತರಿಸಲಾಗಿದೆ. ಆದಾಯ ತೆರಿಗೆ ರಿಟರ್ನ್ ಸಲ್ಲಿಕೆಯ ಷರತ್ತಿನೊಂದಿಗೆ ಈ ಹಿಂದೆ ರೂ.20 ಲಕ್ಷ ಅಥವಾ ರೂ.1 ಕೋಟಿಯ ಮಿತಿ ನಿಗದಿಪಡಿಸಲಾಗಿತ್ತು.
- ಕೃಷಿ ಆಧಾರಿತ ಸಹಕಾರ ಕ್ಷೇತ್ರದ ಬಲವರ್ಧನೆಗೆ ಒತ್ತು ನೀಡಲಾಗಿದೆ. ಸಿರಿಧಾನ್ಯ ಹಾಗೂ ಸಾವಯವ ಕೃಷಿಗೆ ಹೆಚ್ಚಿನ ಆದ್ಯತೆಯನ್ನು ನೀಡಿರುವುದರಿಂದ ಈ ಕ್ಷೇತ್ರದಲ್ಲಿ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸಲು ಹೆಚ್ಚಿನ ಅವಕಾಶಗಳಿದ್ದು ಸಹಕಾರಿಗಳು ಈ ಬಗ್ಗೆ ಚಿಂತನೆ ನಡೆಸಬಹುದಾಗಿದೆ.

ಕೋವಿಡ್ ನಂತರದ ದಿನಗಳಲ್ಲಿ ದೇಶದ ಅಭಿವೃದ್ಧಿಯ ವೇಗವನ್ನು ನಿರ್ಧರಿಸಲು, ವಿಶ್ವವನ್ನು ಹೆದರಿಸುತ್ತಿರುವ ಜಾಗತಿಕ ಹಿಂಜರಿತದ ಪ್ರತಿಕೂಲ ವಾತಾವರಣವನ್ನು ಸಮರ್ಥವಾಗಿ ಎದುರಿಸಲು, ಹಿಂಜರಿತದ ಅವಕಾಶವನ್ನು ಬಳಸಿಕೊಂಡು ದೇಶದ ಅಭಿವೃದ್ಧಿ ಸಾಧಿಸಲು, ಸ್ವಾವಲಂಬಿ ಭಾರತದ ನಿರ್ಮಾಣದ ಸಂಕಲ್ಪಕ್ಕೆ ಶಕ್ತಿ ನೀಡಲು, ಭವಿಷ್ಯದ ಉದ್ಯೋಗವಕಾಶಗಳ ಬಾಗಿಲು ತೆರೆಯಲು ಹಾಗೂ ಬಹುತೇಕ ಎಲ್ಲ ದೇಶಗಳ ಜಿಡಿಪಿ ಕುಸಿದಿರುವ ಸಂದರ್ಭದಲ್ಲಿ ನಮ್ಮ ದೇಶದ ಜಿಡಿಪಿಯನ್ನು ಉತ್ತಮಗೊಳಿಸುವಂತಹ ಯೋಜನೆಯ ಹೊಳಹುಗಳನ್ನು ಈ ಬಜೆಟ್‌ನಲ್ಲಿ ಗಮನಿಸಬಹುದಾಗಿದೆ.

# ನಂಬಿ ಕರೆದರೆ ಓ ಎನ್ನನೇ ಶಿವನು ಶಿವರಾತ್ರಿಯ ವಿಶೇಷತೆ ಹಾಗೂ ಜಾಗರಣೆಯ ಮಹತ್ವ

– ಶ್ರೀಮತಿ ಮಹಾಲಕ್ಷ್ಮಿ ಎ ಎನ್, ಮೈಸೂರು

ಶಿವರಾತ್ರಿ, ಈ ದಿನದಂದು ಕೈಲಾಸ ವಾಸ ಪರಶಿವನನ್ನು ಕೋಟಿ ಕೋಟಿ ಜನರು ಭಜಿಸಿ ಪೂಜಿಸುತ್ತಾರೆ. ಶಿಶಿರ ಋತುವಿನ ಮಾಘ ಮಾಸದ ಕೃಷ್ಣ ಪಕ್ಷ ಬಹುಳ ಚತುರ್ದಶಿ ಯಂದು ಬರುವ ಶಿವರಾತ್ರಿಯ ದಿನ ಭಕ್ತಾದಿಗಳು ಶಂಭೋ ಶಂಕರನನ್ನು ನೆನೆದು, ಪುನೀತರಾಗುತ್ತಾರೆ.

ತನ್ನ ನಂಬಿ ಬಂದ ಭಕ್ತರ ಇಷ್ಟಾರ್ಥಗಳಿಗೆ ಎಂದಿಗೂ ನಿರಾಸೆ ಮಾಡದ ದಯಾಮಯಿ ಶಿವನಿಗೆ ಶಿವರಾತ್ರಿಯಂದು ದೇಶಾದ್ಯಂತ ವಿಶೇಷ ಪೂಜೆಗಳು ನೆರವೇರುತ್ತವೆ. ಇಡೀ ಭಾರತದಾದ್ಯಂತ ಬಹುತೇಕ ಎಲ್ಲಾ ಭಾಗಗಳಲ್ಲೂ ಆಚರಿಸುವ ಹಬ್ಬ ಇದು. ಈ ಹಬ್ಬದಂದು ದಿನವಿಡೀ ಪೂಜೆ, ಉಪವಾಸ ಮಾಡಿ, ರಾತ್ರಿಯಿಡೀ ಜಾಗರಣೆ ಮಾಡಿ ಶಿವನನ್ನು ಆರಾಧಿಸುವ ಸಂಪ್ರದಾಯವಿದೆ.

ಶಿವಪುರಾಣದಲ್ಲಿ ಶಿವಾರಾತ್ರಿಯ ಆಚರಣೆ ಬಂದಿರುವ ಬಗ್ಗೆ ಒಂದು ಸಣ್ಣ ಕಥೆ ಇದೆ.... ದೇವಲೋಕದಲ್ಲಿ ಒಮ್ಮೆ ಬ್ರಹ್ಮ ಹಾಗೂ ವಿಷ್ಣುವಿನ ನಡುವೆ ಯಾರು ಶ್ರೇಷ್ಠರು ಎಂಬ ವಿಷಯಕ್ಕೆ ವಾಗ್ವಾದಗಳು ನಡೆಯುತ್ತಿದ್ದವು. ಮಹಾ ದೇವತೆಗಳಿಬ್ಬರನ್ನೂ ಸಮಾಧಾನ ಮಾಡುವುದು ದೇವತೆಗಳೆಲ್ಲ ಹೋಗಿ ಪರಶಿವನನ್ನು ಬೇಡಿಕೊಳ್ಳುತ್ತಾರೆ. ವಿಷ್ಣು ಹಾಗೂ ಬ್ರಹ್ಮರ ಜಗಳವನ್ನು ಶಮನ ಮಾಡುವಂತೆ ಕೋರಿಕೊಳ್ಳುತ್ತಾರೆ. ಆಗ ವಿಷ್ಣು ಮತ್ತು ಬ್ರಹ್ಮರ ನಡುವೆ ಶಿವ, ಅಗ್ನಿಕಂಭದ ರೂಪದಲ್ಲಿ ಬಂದು ನಿಂತು ತನ್ನ ಮೂಲವನ್ನು ಕಂಡುಹಿಡಿಯಲು ಸೂಚಿಸುತ್ತಾನೆ.

ಶಿವರಾತ್ರಿಯ ದಿನ ರಾತ್ರಿ ಪೂಜೆಯೇ ವಿಶೇಷ. ಸಾಮಾನ್ಯವಾಗಿ ಎಲ್ಲ ಹಬ್ಬಗಳಲ್ಲಿಯೂ ದೇವರಿಗೆ ಹಗಲು ಪೂಜೆ ನಡೆಯುತ್ತದೆ. ಆದರೆ ಶಿವರಾತ್ರಿ ಮಾತ್ರ ರಾತ್ರಿಯ ಹೊತ್ತು ಪೂಜೆ, ಭಜನೆ ನಡೆಸುವ ವಿಶೇಷ ಆಚರಣೆ. ರಾತ್ರಿ ಎಂದರೆ ಕತ್ತಲು, ಕತ್ತಲು ಎಂದರೆ ಅಜ್ಞಾನ. ಅಜ್ಞಾನವನ್ನು ಕಳೆದು ಸುಜ್ಞಾನ ಬೆಳಗಿಸು ಎಂದು ಆ ಶಿವನನ್ನು ಬೇಡುವ ಶುಭ ದಿನವೇ ಶಿವರಾತ್ರಿ. ಅಜ್ಞಾನ ತುಂಬಿರುವಲ್ಲಿ ಶಿವ ಸಂಚರಿಸಿ ಜ್ಞಾನ ದೀವಿಗೆಯನ್ನು ಬೆಳಗುತ್ತಾನೆ ಎಂಬ ನಂಬಿಕೆ ಇದೆ.

ಶಿವನಿಗೆ ಅತೀ ಶ್ರೇಷ್ಠವಾಗಿರುವ ಬಿಲ್ವ ಪತ್ರೆಯನ್ನು ರೂಪಿಸಿ ತಿಲಗಿ ಪುಷ್ಪ, ತುಳಸಿಯಿಂದ ಶಿವಲಿಂಗವನ್ನು ಅಲಂಕಾರ ಮಾಡಿ ಶಿವನ್ನು ಭಜಿಸಿದರೆ, ಪಾಪಗಳು ಪರಿಹಾರವಾಗುತ್ತವೆ, ಮೋಡಗಳೆ ಇಲ್ಲದ ಶುಭ್ರ ಆಕಾಶದಲ್ಲಿ ಬಂದಿರುವ ಚಂದ್ರನ ಬೆಳಕಿನಲ್ಲಿ ಶಿವನಿಗೆ ಅಭಿಷೇಕ ಮಾಡಿ ಆರಾಧಿಸಿದರೆ ಅತ್ಯಂತ್ರ ಶ್ರೇಷ್ಠ ಎಂಬ ನಂಬಿಕೆಗಳಿವೆ. ಶಿವರಾತ್ರಿಯ ದಿನವಿಡಿ ಉಪವಾಸ ಮಾಡಿ, ಜಾಗರಣೆ ಮಾಡಿ ಶಿವನನ್ನು ಆರಾಧಿಸಿದರೆ ಸಕಲ ಪಾಪಗಳೂ ಕಳೆಯುತ್ತವೆ ಎಂದು ನಂಬಲಾಗಿದೆ.

ಎಲ್ಲಾ ಜೀವರಾಶಿಗಳನ್ನು ಪೊರೆಯುವ ಶಿವ ಎಲ್ಲಾ ಆಡಂಬರಗಳಿಂದ ಮುಕ್ತ. ಆತ ಆಭರಣ ಪ್ರಿಯನಲ್ಲ, ಅಲಂಕಾರ ಪ್ರಿಯನೂ ಅಲ್ಲ. ಭಸ್ಮವನ್ನು ಬಳಿದುಕೊಂಡು, ಹುಲಿಯ ರೋಮವನ್ನು ಉಟ್ಟು, ಸ್ಮಶಾನದಲ್ಲಿರುವ ಸರಳ ಮತ್ತು ಅಮೋಘ ಶಕ್ತಿ.

ಎಲ್ಲ ಆಡಂಬರಗಳಿಂದ ಮುಕ್ತರಾಗಿ, ಸರಳ ಮನಸ್ಸಿನಿಂದ ಪರಶಿವನನ್ನು ನೆನದು, ಭಜಿಸಿ ಶಿವರಾತ್ರಿಯನ್ನು ಆಚರಿಸೋಣ... ಸರಳತೆ, ಪ್ರಾಮಾಣಿಕತೆ, ಸತ್ಯ ಮತ್ತು ಶಕ್ತಿಯ ದೇವತೆ ಈಶ್ವರ ಲೋಕದಲ್ಲಿರುವ ಸಕಲ ಸಂಕಷ್ಟಗಳಿಗೆ ಪರಿಹಾರ ನೀಡಲಿ ಎಂಬುದು ಎಲ್ಲರ ಕೋರಿಕೆ.. ಎಲ್ಲರಿಗೂ ಮಹಾ ಶಿವರಾತ್ರಿ ಹಬ್ಬದ ಹರ್ದಿಕ ಶುಭಾಶಯಗಳು.

**ಶಿವರಾತ್ರಿ ಆಚರಣೆ ಹಿನ್ನೆಲೆ:**

1 ಪ್ರತಿ ಸಂವತ್ಸರದಲ್ಲಿ.. ಶಿಶಿರ ಋತುವಿನ ಮಾಘ ಮಾಸದ ಕೃಷ್ಣಪಕ್ಷ ಚತುರ್ದಶಿಯಂದು... ರಾತ್ರಿ ಸಮಯದಲ್ಲಿ ಶಿವ ಪಾರ್ವತಿ ಜೊತೆಯಲ್ಲಿ ಭೂಮಿಗೆ ಬರುತ್ತಾನೆ.. ಭೂಮಿಯಲ್ಲಿ ಸಂಚರಿಸುತ್ತ ಎಲ್ಲ ಸ್ಥಾವರ ಜಂಗಮ ಲಿಂಗಗಳಲ್ಲಿ ಸಂಕ್ರಮಣ ಗೊಳ್ಳುತ್ತಾನೆ.. ಆ ಸಮಯದಲ್ಲಿ ಅಂದ್ರೆ ಶಿವರಾತ್ರಿ ರಾತ್ರಿ ವೇಳೆಯಲ್ಲಿ ತನ್ನನ್ನು ಯಾರು ಪೂಜಿಸುವರೋ ಅವರ ಪಾಪಗಳು ಪರಿಹಾರವಾಗುತ್ತವೆ ಎಂದು ಸ್ವತಃ ಶಿವನೇ ತಿಳಿಸಿದ್ದಾನೆ ಎಂಬುದರ ಬಗ್ಗೆ ಶಾಸ್ತ್ರೋಕ್ತಿ ಯೂ ಇದೆ.

2. ಸ್ಕಂದ ಪುರಾಣ ದಲ್ಲಿ ಶಿವರಾತ್ರಿ ಹಬ್ಬದ ಬಗ್ಗೆ ಉಲ್ಲೇಖವಿದೆ.. ಶಿವರಾತ್ರಿಯು ಸಮಯ ಪೂಜೆಗೆ ಬಹು ಪ್ರಾಶಸ್ತ್ಯವಾದ ಸಮಯ... ಆ ದಿನ ರಾತ್ರಿಯಲ್ಲಿ ಮೋಡಗಳಿಲ್ಲದ ಶುಭ್ರ ಆಕಾಶ, ಮಂಗಳಕರ ನಾದ ಶುಭ್ರ ಚಂದ್ರ ಸ್ಫೂರ್ತಿ ಹುಟ್ಟಿಸುವ ಸಂವೇದನಾಶೀಲ ವಾತಾವರಣವನ್ನು ಕಾಣಬಹುದು.. ಈ ಕಾಲವು ಪೂಜೆಗೆ ಪ್ರಶಸ್ತವಾದ ಕಾಲವಾಗಿದ್ದು ಶಿವನ ಆರಾಧನೆ ಮಾಡಿದರೆ ಪಾಪ ಕಳೆಯುತ್ತಾನೆ ಎಂಬ ಪ್ರತೀತಿ ಇದೆ.

3. ತ್ರಯೋದಶಿಯು ಶಕ್ತಿರೂಪವಾದರೆ,, ಚತುರ್ದಶಿಯು ಶಿವರೂಪ. ತ್ರಯೋದಶಿಯು ಚತುರ್ದಶಿಯಲ್ಲಿ ಅದು ಶಿವಶಕ್ತಿಯೋಗ ವಾಗುತ್ತದೆ. ಅದೆ ಶಿವರಾತ್ರಿಯ ಸಮಯವೆಂದು ಉಕ್ತಿಯೊಂದರಲ್ಲಿ ಉಲ್ಲೇಖವಿದೆ. ಈ ಶುಭ ಪುಣ್ಯದಿನದಂದು ಬ್ರಹ್ಮ ವಿಷ್ಣು ಆದಿಯಾಗಿ ಶಿವನನ್ನು ಪೂಜಿಸಿದ್ದು ಶಿವನೆ ತನಗೆ ಶಿವರಾತ್ರಿ ಪ್ರಿಯವಾದ ದಿನವೆಂದು ಹೇಳಿರುವನೆಂದು ಪ್ರತೀತಿ ಇದೆ.

4. 'ಶಿವ ಪುರಾಣ ' ದಲ್ಲಿ ಬರುವ ಬೇಡರ ಕಣ್ಣಪ್ಪನ ಕಥೆ....., ಸ್ಕಂದ ಪುರಾಣ 'ದ ಬೇಡ ಚಂದನನ ಕಥೆ...., ' ಗರುಡ ಮತ್ತು ಅಗ್ನಿ ಪುರಾಣಗಳ ಬೇಡ ಸುಂದರ ಸೇನನ ಕಥೆ... ಈ ಎಲ್ಲ ಕಥೆಗಳಲ್ಲೂ ಒಂದು ವಿಶೇಷವಾದ ಸಾಮ್ಯತೆಯನ್ನು ಕಾಣಬಹುದು.. ಮಹಾ ಶಿವರಾತ್ರಿಯಂದು ಉಪವಾಸ ಮಾಡಿ ಶಿವನಿಗೆ ಅಭಿಷೇಕ ಮಾಡಿ ಬಿಲ್ವ ಪತ್ರೆಗಳನ್ನು ಅರ್ಪಿಸಿದ್ದರಿಂದ ಅವರೆಲ್ಲರಿಗೂ ಸದ್ಗತಿ ಪ್ರಾಪ್ತವಾಯಿತು. ಇದು ಶಿವರಾತ್ರಿ ಪೂಜೆಯ ಫಲದ ಮಹಿಮೆಯನ್ನು ಎತ್ತಿ ತೋರಿಸುತ್ತದೆ.

5. ದೇವತೆಗಳು ಮತ್ತು ಅಸುರು ಅಮೃತಕ್ಕಾಗಿ ಸಮುದ್ರ ಮಂಥನ ಮಾಡ್ತಿರಬೇಕಾದ್ರೆ ಮೊದ್ಲು ಮಡಿಕೆ ತುಂಬ ಹಾಲಾಹಲ ಉತ್ಪತ್ತಿಯಾಯಿತು..

ಆದ್ರೆ ದೇವತೆಗಳು... ಅಸುರರು ಯಾರೂ ಆ ಹಾಲಾಹಲವನ್ನು ಕುಡಿಯೋಕೆ ಮುಂದಾಗಲಿಲ್ಲ.. ಆ ಹಾಲಾಹಲ ಇಡೀ ನಭೋಮಂಡಲವನ್ನೇ ನಾಶಮಾಡಬಲ್ಲ ಸಾರ್ಥ್ಯವನ್ನು ಹೊಂದಿತ್ತು.. ಹೀಗಾಗಿ ಲೋಕ ಕಲ್ಯಾಣಕ್ಕಾಗಿ ಪರಶಿವನೇ ಆ ಹಾಲಾಹಲವನ್ನು ಕುಡಿದುಬಿಟ್ಟ.. ಅದೇ ಸಮಯಕ್ಕೆ ಪತ್ನಿ ಪಾರ್ವತಿ ದೇವಿ ಬಂದು ಆ ವಿಷ ಶಿವನ ಹೊಟ್ಟೆ ಸೇರದಂತೆ ಗಂಟಲಲ್ಲೇ ತಡೆ ಹಿಡಿದಳು... ವ್ಯಕ್ತಿಗಳು ನಿದ್ರಿಸುತ್ತಿದ್ದರೆ ವಿಷವು ಬೇಗನೆ ದೇಹದ ತುಂಬ ಹರಡುತ್ತದೆ.. ಹೀಗಾಗಿ ದೇವತೆಗಳೆಲ್ಲರೂ ಶಿವನ ಭಜನೆ ಮಾಡಿ ಶಿವನನ್ನು ಎಚ್ಚರವಿರಿಸಿದರು.. ಹೀಗಾಗಿ ಈ ಪವಿತ್ರ ದಿನವನ್ನು ಶಿವರಾತ್ರಿ ಎಂದು ಆಚರಿಸಲಾಗುತ್ತದೆ.

**ವೇದೋಕ್ತ ಪೂಜೆ ಮತ್ತು ಆಚರಣೆ**

ಬಿಲ್ವದ ಎಲೆ ಹೃದಯವನ್ನು ಹೋಲುತ್ತದೆ ಮತ್ತು ಲಿಂಗ ಪರಮಾತ್ಮನ ಪ್ರತೀಕ. ಆದ್ದರಿಂದ ಇವೆರಡರ ಜೊತೆಗೂಡಿಕೆ ಆತ್ಮ ಪರಮಾತ್ಮಗಳ ಮಿಲನ. ರಾತ್ರಿಯು ಅಜ್ಞಾನದ ಸಂಕೇತ ಮತ್ತು ಆ ವೇಳೆಯಲ್ಲಿ ನಿದ್ರೆ ಮಾಡದೇ ಎಚ್ಚರವಾಗಿರುವುದು ತಿಳುವಳಿಕೆಯ ಕಡೆಗೆ ಹೋಗುತ್ತಿರುವ ಸಂಕೇತ. ಹೀಗೆ ಶಿವರಾತ್ರಿಯ ರಾತ್ರಿ ಜಾಗರಣೆ ಮಾಡುವುದು ಮೋಕ್ಷದ ಕಡೆಗೆ ಹೊಗುವುದು ಎಂದು ತತ್ವಗಳು ತಿಳಿಸುತ್ತವೆ.

ಉಪವಾಸ ಮಾಡುವುದು ಎಂದರೆ, ದೇವರಿಗೆ ಹತ್ತಿರವಾಗಿರುವುದು/ ದೇವರ ಬಗ್ಗೆ ಚಿಂತಿಸುತ್ತಿರುವುದು ಎಂದು ಅರ್ಥ. ಹೀಗೆ ಆತನ ಧ್ಯಾನದಲ್ಲಿ ಇರುವಾಗ ಊಟ/ತಿಂಡಿಯ ಕಡೆ ಗಮನ ಹೋಗುವುದಿಲ್ಲ.

ಜಾಗರಣೆ ಎಂದರೆ, ಜಾಗೃತರಾಗಿರೋದು ಎಂದು. ರಾತ್ರಿಯಲ್ಲಿ ಜಾಗರಣೆ ಮಾಡುವುದರ ಅರ್ಥವೇನು? ರಾತ್ರಿ ಎನ್ನುವುದು ತಮೋ ಗುಣದ ಪ್ರತೀಕ. ಆಲಸ್ಯ, ನಿದ್ರೆ, ಅಹಂಕಾರ, ಅಜ್ಞಾನಗಳ ದ್ಯೋತಕ ನಿಶೆ. ಆ ಸಮಯದಲ್ಲಿ ಜಾಗ್ರತರಾಗಿರಬೆಕು ಎಂದರೆ, ಅವುಗಳಿಂದ ಜಾಗ್ರತರಾಗಿರಬೇಕು ಎಂದರ್ಥ. ಹಾಗೆ ಜಾಗ್ರತರಾಗಿರುವುದಕ್ಕೆ ನಮಗೆ ಸಹಾಯವನ್ನು ಮಾಡುವವನು ದೇವರು. ಆ ದೇವರನ್ನು ಸ್ಮರಿಸುತ್ತ ಈ ತಮೋ ಗುಣಗಳಿಂದ ಜಾಗ್ರತರಾಗಿರಬೇಕು ಎನ್ನುವುದರ ಪ್ರತೀಕ ಶಿವರಾತ್ರಿಯ ಜಾಗರಣೆ.

ಆ ದಿನ ಬೆಳಗ್ಗೆ ಬೇಗ ಎದ್ದು ಅಭ್ಯಂಜನ ಮಾಡಿ ಶಿವನಿಗೆ ಅಭಿಷೇಕ ಮಾಡುವುದು ರೂಢಿ. ಇಲ್ಲಿ ದಿನವನ್ನು ಮೂರು ಭಾಗಗಳನ್ನಾಗಿ ಮಾಡಿ ರುದ್ರಾಭಿಷೇಕಯುಕ್ತ ಪೂಜೆಯನ್ನು ಮಾಡುವುದು ವಾಡಿಕೆ. ರುದ್ರ ನಮಕ ಚಮಕಗಳನ್ನು ಉಚ್ಚರಿಸುವುದರಿಂದ ಉಸಿರಾಟಕ್ಕೂ ಹೆಚ್ಚಿನ ಶಕ್ತಿ ಬರುವುದು ಮತ್ತು ಬಾಯಿಯಿಂದ ಹೊರ ಹೊಮ್ಮುವ ತರಂಗಗಳಿಂದ ಸುತ್ತ ಮುತ್ತಲಿನ ಪರಿಸರ ಶಕ್ತಿಯುತವಾಗುವುದು.

ಮೊದಲಿಗೆ ಶಿವಲಿಂಗಕ್ಕೆ ಪಂಚಾಮೃತ ಅಭಿಷೇಕವನ್ನೂ ಮಾಡುವರು. ಇದಕ್ಕೆಂದೇ ಮಹಾನ್ಯಾಸವೆಂಬ ಪ್ರಕಾರವಿದೆ. ನಂತರ ನೀರಿನ ಅಭಿಷೇಕವನ್ನು ನಿರಂತರವಾಗಿ ಮಾಡುವರು. ಅಭಿಷೇಕ್ಕಾಗಿಯೇ ಪ್ರತ್ಯೇಕವಾದ ಪಾತ್ರೆ ಇರುವುದು. ಅದರ ತಳಭಾಗದಲ್ಲಿ ರಂಧ್ರವಿದ್ದು ಅದನ್ನು ಲಿಂಗದ ಮೇಲೆ ತೂಗು ಬಿಟ್ಟಿರುವರು. ಅದರೊಳಗೆ ನೀರು ತುಂಬಿಸಿದರೆ, ಸಣ್ಣದಾಗಿ ನೀರು ಲಿಂಗದ ಮೇಲೆ ಬೀಳುವುದು. ಕೃಷ್ಣ ಯಜುರ್ವೇದದ ಪ್ರಕಾರವಾದ ರುದ್ರ ನಮಕ ಮತ್ತು ಚಮಕಗಳನ್ನು ಅಭಿಷೇಕದ ಸಂರ್ಭದಲ್ಲಿ ಪಠಿಸುತ್ತಾರೆ. ಹನ್ನೊಂದು ಬಾರಿ ನಮಕ ಚಮಕಗಳನ್ನು ಹನ್ನೊಂದು ಜನ ಋತ್ವಿಕರು ಪಠಣ ಮಾಡುವುದಕ್ಕೆ ಏಕಾದಶವಾರ ರುದ್ರಾಭಿಷೇಕ ಎಂದು ಕರೆಯುವರು. ಮೊದಲಿಗೆ ಚಮಕದ ಮೂರನೆಯ ಭಾಗವನ್ನು ಉಚ್ಚರಿಸಿ, ನಂತರ ಒಂದು ನಮಕದ ಭಾಗವನ್ನೂ ನಂತರ ಹನ್ನೊಂದು ಚಮಕ ಭಾಗಗಳನ್ನೂ ಪಠಿಸುವರು. ತದನಂತರ ಎರಡನೆಯ ನಮಕದ ಭಾಗವನ್ನೂ ಮತ್ತು ಹನ್ನೊಂದು ಚಮಕ ಭಾಗಗಳನ್ನೂ ಪಠಿಸುವರು. ಹೀಗೆ ನಮಕಗಳ ಹನ್ನೊಂದೂ ಭಾಗವನ್ನು ಪಠಿಸಿ ಅಭಿಷೇಕ ಮಾಡುವರು. ಇದಕ್ಕೆ ಒಂದು ರುದ್ರವೆಂದು ಕರೆಯುವರು. ಬೆಳಗ್ಗೆ, ಸಂಜೆ ಮತ್ತು ರಾತ್ರೆ ಹೀಗೆ 24 ಘಂಟೆಗಳು ಭಗವನ್ನಾಮಸ್ಮರಣೆ ಮಾಡುತ್ತಾ ಜಾಗರಣೆ ಮಾಡುವುದು ಪರಿಪಾಠ. ಅಂದು ಊಟ ಮಾಡದೆ ಅಲ್ಪಾಹಾರ ಸೇವನೆ ಮಾಡುವರು.

**ಜಾಗರಣೆ, ಹಬ್ಬದ ವಿಶೇಷ ಆಚರಣೆ:**

ಕಾಶಿ ವಿಶ್ವನಾಥ, ಗೋಕರ್ಣದ ಮಹಾಬಲೇಶ್ವರ, ರಾಮೇಶ್ವರದ ರಾಮೇಶ್ವರ ಸೇರಿದಂತೆ ರಾಜ್ಯ, ದೇಶ, ವಿದೇಶಗಳ ಶಿವದೇವಾಲಯಗಳಲ್ಲಿ ಅಂದು ವಿಶೇಷ ಪೂಜೆ ನಡೆಯುತ್ತದೆ. ಬಿಲ್ವಾರ್ಚನೆ, ರುದ್ರಾಭಿಷೇಕ, ಶಿವನಾಮ ಧ್ಯಾನಗಳ ಮೂಲಕ ಶಿವನನ್ನು ಆರಾಸಲಾಗುತ್ತದೆ. ಇಡೀ ರಾತ್ರಿ ಶಿವದೇವಾಲಯಗಳಲ್ಲಿ ರುದ್ರಪಠಣದ ಜೊತೆ ಜಾಗರಣೆ ನಡೆಯುತ್ತದೆ.


ಶಿವರಾತ್ರಿಯಂದು ಬೆಳಗ್ಗೆ ಬೇಗನೆ ಏಳುವ ಭಕ್ತರು, ಸ್ನಾನ ಮಾಡಿ, ಶುಚೀಬೂತರಾಗಿ ಶಿವದೇವಾಲಯಕ್ಕೆ ತೆರಳುತ್ತಾರೆ. ಕೆಲವರು ಕೈಲಾಸಯಂತ್ರ ರಚಿಸಿ, ಮನೆಯಲ್ಲಿಯೇ ಶಿವನಿಗೆ ವಿಶೇಷ ಪೂಜೆ ನಡೆಸುತ್ತಾರೆ. ಗಂಗಾ, ಬ್ರಹ್ಮಪುತ್ರ, ಕೃಷ್ಣ, ಕಾವೇರಿ, ತ್ರಿವೇಣಿ ಸಂಗಮ ಸೇರಿದಂತೆ ಪುಣ್ಯನದಿಗಳಲ್ಲಿ ಭಕ್ತರು ಸ್ನಾನ ಮಾಡುತ್ತಾರೆ. ಕೆಲವರು ಹಾಲು, ಹಣ್ಣು ಸೇವಿಸಿ ಲಘು ಉಪಹಾರ ಸೇವಿಸಿದರೆ, ಕೆಲವು ಭಕ್ತರು ದಿನವಿಡಿ ಏನನ್ನೂ ತಿನ್ನದೆ, ನೀರನ್ನೂ ಕುಡಿಯದೆ ಉಪವಾಸ ಇರುತ್ತಾರೆ. ಭಸ್ಮ ಲೇಪಿಸಿಕೊಂಡು, ಬಿಲ್ವಾರ್ಚನೆ ಮೂಲಕ ರುದ್ರ ಪಠಣ ಹಬ್ಬದ ಆಚರಣೆಯ ವಿಶೇಷ.

ಅಭಿಷೇಕಪ್ರಿಯ ಎಂದೇ ಖ್ಯಾತನಾದ ಶಿವನಿಗೆ ದಿನವಿಡಿ ಹಾಲು, ಜೇನುತುಪ್ಪ ಹಾಗೂ ನೀರಿನ ಅಭಿಷೇಕ ನಡೆಯುತ್ತದೆ. ಪ್ರತಿ 3 ಗಂಟೆಗೊಮ್ಮೆ ಶಿವಲಿಂಗಕ್ಕೆ ಅಭಿಷೇಕ ಮಾಡಲಾಗುತ್ತದೆ. ಬಿಲ್ವಪತ್ರೆ, ತುಳಸಿ, ಶ್ರೀ ಗಂಧ, ಹಾಲು, ಜೇನುತುಪ್ಪಗಳಿಂದ ಅಭಿಷೇಕ ನಡೆಯುತ್ತದೆ. ಶಿವ ಪಂಚಾಕ್ಷರಿ ಮಂತ್ರ "ಓಂ ನಮ: ಶಿವಾಯ", ಹರ ಹರ ಮಹಾದೇವ, ಶಂಭೋ ಶಂಕರ...ಶಿವದೇವಾಲಯಗಳಲ್ಲಿ ನಾಲ್ಕು ಆಯಾಮಗಳ ರುದ್ರಪಠಣ, ಶಿವರಾತ್ರಿ ಪೂಜೆಯ ವಿಶೇಷ. ಶಿವಪುರಾಣದ ಪ್ರಕಾರ ರುದ್ರ ಹಾಗೂ ಚಮೆಗಳ ಪಠಣ ಶಿವನಿಗೆ ಅಚ್ಚುಮೆಚ್ಚು. ದೇವಾಲಯಗಳಲ್ಲಿ ಸಂಜೆ 6 ಗಂಟೆಯಿಂದ ಮೊದಲ್ಗೊಂಡು ಮುಂಜಾನೆ 6 ಗಂಟೆಯವರೆಗೆ ರುದ್ರಪಠಣದ ಮೂಲಕ ಶಿವ ಸ್ತುತಿ, ಜಾಗರಣೆ ನಡೆಯುತ್ತದೆ.

ಓಂ ನಮ: ಶಿವಾಯ ಶಿವ ಶಿವ ಎಂದರೆ ಭಯವಿಲ್ಲ ಹರ ಶಂಭೋ ಮಹಾದೇವ ಹರ ಹರ ಮಹಾದೇವ ಶಿವನನ್ನು ನಂಬಿದರೆ ಶಿವ ಕೈ ಬಿಡುವುದಿಲ್ಲ ಎಂಬುದು ಸತ್ಯವಾದ ಮಾತು.

# ಸಹಕಾರಿ ಆಡಳಿತ - ನಾಯಕತ್ವದ ನಾಲ್ಕು ಆಧಾರ ಸ್ತಂಭಗಳು

ಮೂಲ : ಮೆರಿಲಿನ್ ಸ್ಕೂಲ ಆರ್ಟ ಶೇರ್‌ವುಡ್ : ಕನ್ನಡಕ್ಕೆ ಅನುವಾದ : ಶ್ರೀಮತಿ ಶೋಭ ಆರ್.




ಮಹಾನ್ ನಾಯಕರು ತಮ್ಮ ಸ್ಥಳೀಯ ಸಮುದಾಯಗಳನ್ನು ಬಲಪಡಿಸಲು ಮತ್ತು ಅಭಿವೃದ್ಧಿಪಡಿಸಲು ಹೇಗೆ ತಮ್ಮ ನಾಯಕತ್ವದ ಗುಣಗಳನ್ನು/ಶಕ್ತಿಯ ಪ್ರದರ್ಶನ ಮಾಡುತ್ತಾರೆ ಎಂಬ ಬಗ್ಗೆ ಎಲ್ಲರಿಗೂ ಅರಿವಿದೆ. ನಮ್ಮ ಸಹಕಾರಿಯ ನಾಯಕರಾದ ರಾಕ್‌ಡೇಲ್ ಪಯೋನಿಯರ್ಸ್– ಅವರು ತಮ್ಮ ತೊಂದರೆಗಳ ನಿವಾರಣೆಗಾಗಿ ಸಂಘಟಿತರಾಗಿ ಮೂಲಕ ನೇಕಾರರಿಗೆ ಗ್ರಾಹಕರ ಸಹಕಾರಿಯನ್ನು 1844 ರಲ್ಲಿ ಇಂಗ್ಲೇಂಡ್‌ನ ರಾಕ್‌ಡೇಲ್ ನಲ್ಲಿ ಪ್ರಾರಂಭಿಸಿದರು. ಇದರಿಂದ ಅವರು ಇತರ ಕಂಪನಿಗಳ ಸಾಲಬಾಧೆಯಿಂದ ಮುಕ್ತವಾಗಲು ಸಾಧ್ಯವಾಯಿತು. .

ಪಯೋನಿಯರ್ಸ್‌ರವರು ಕೆಲವು ಪ್ರಮುಖವಾದ ಪ್ರಶ್ನೆಗಳನ್ನು ಕೇಳುವುದುರ ಜೊತೆಗೆ ಕೆಲವು ಉತ್ತರಗಳನ್ನು ನೀಡಿದರು. ಅದರಲ್ಲಿ ಪ್ರಮುಖವಾಗಿ ಸಹಕಾರಿ ವ್ಯವಸ್ಥೆಯಲ್ಲಿ ಆರ್ಥಿಕತೆಯು ಜನರಿಗೆ ಸೇವೆಯನ್ನು ಒದಗಿಸುವುದಿಲ್ಲ ಬದಲಾಗಿದೆ ಜನರು ಆರ್ಥಿಕತೆಗೆ ಸೇವೆಯನ್ನು ಸಲ್ಲಿಸುತ್ತಾರೆ. ಅದು ಹೇಗೆ ಕಾರ್ಯನಿರ್ವಹಿಸುತ್ತದೆ ಸಾಮೂಹಿಕ ಆರ್ಥಿಕ ಬಂಡವಾಳದ ಕ್ರೂಢೀಕರಣ ವಿಶ್ವಾಸದಿಂದ ಸಾಮೂಹಿಕ ಕಾರ್ಯಾಚರಣೆಗಳಿಂದಾಗಿ ವಿಶ್ವದಾದ್ಯಂತ ಸಹಕಾರ ಚಳುವಳಿಯು ಬೆಳೆಯಲು ಬರಲು ಕಾರಣವಾಯಿತು. ಎಂದು ತಿಳಿಸಿರುವುದು ಗಮನಿಸಬೇಕಾದ ವಿಷಯ.

ರಾಕ್‌ಡೇಲ್ ಪಯೋನಿಯರ್ಸ್‌ರ ದೂರದೃಷ್ಟಿ ಮತ್ತು ಉತ್ತಮವಾಗಿ ವ್ಯಾಖ್ಯಾನಿಸಲಾದ ಪ್ರಸ್ತುತ ಜಾಗತೀಕ ಆರ್ಥಿಕ ಮತ್ತು ಪರಿಸರ ಸ್ಥಿರತೆಯ ಅವಶ್ಯಕತೆಯನ್ನು ಆಧರಿಸಿ ಅಂತರಾಷ್ಟ್ರೀಯ ಸಹಕಾರ ಅಲೈಯನ್ನಸ್ (ಐಸಿಎ) 2012 ರಲ್ಲಿ ಒಂದು ಕಾರ್ಯತಂತ್ರವನ್ನು ವಿವರಿಸಿದ ಕಾರ್ಯಸೂಚಿಯನ್ನು ಸಹಕಾರಿಗಳಿಗೆ ನೀಡಿತು.

ಅದೇ ಸಮಯದಲ್ಲಿ ಪ್ರಸ್ತುತ ಲೇಖಕರು ತಮ್ಮನ್ನು ತಾವೇ ಕೇಳಿಕೊಳ್ಳುತ್ತಾ ಒಂದು ಉತ್ತಮ ಮಾದರಿ ಸಹಕಾರಿ ಆಡಳಿತ ಮತ್ತು ಹಾಗಿದ್ದಲ್ಲಿ, ಅದು ನಮ್ಮ ಸಹಕಾರಿ ಸಂಸ್ಥೆಗಳನ್ನು ಯಶಸ್ವಿಯಾಗಿ ಬೆಂಬಲಿಸಲು ಮತ್ತು ಮುನ್ನಡೆಸಲು ಏನು ಮಾಡಬೇಕು? ಎಂಬ ಆಲೋಚನೆ ಮಾಡಿದರು.

## ಸಹಕಾರಿ ಬೆಳವಣಿಗೆಯ ಸಾಧನಗಳು

ಸಹಕಾರಿಗಳು ಹಲವು ಉತ್ತಮವಾದ ಆಡಳಿತ ಸಾಧನಗಳನ್ನು ಹೊಂದಿವೆ ಮತ್ತು ಅವುಗಳನ್ನು ಉತ್ತಮ ಸೇವೆ ಮಾಡಲು ವಿಲೇವಾರಿಯನ್ನು ಮಾಡಲಾಗಿದೆ. ಉದಾಹರಣೆಗೆ ಆಡಳಿತ ನೀತಿ, ಆಡಳಿತ ಮಂಡಳಿಯನ್ನು ಬಲಪಡಿಸಲು ಆಡಳಿತ ನೀತಿಯು ಅಂತ್ಯಗಳನ್ನು ವ್ಯಾಖ್ಯಾನಿಸುವ ವ್ಯವಸ್ಥೆ ಮತ್ತು ಪಾತ್ರಗಳ ಸ್ಪಷ್ಟೀಕರಣ ಮತ್ತು ಸಂಘಟನೆಯ ರಚನೆಯನ್ನು ತಿಳಿಸುತ್ತದೆ. ಕಳೆದ ದಶಕದಲ್ಲಿ ಸಹಕಾರಿಗಳ ಆಡಳಿತವನ್ನು ಬಲಪಡಿಸುವ ದೃಷ್ಟಿಯಿಂದ ಸಾಧನೆಯ ಕೊನೆಗಳಿಸುವಿಕೆ ಮತ್ತು ಉತ್ತಮ ಪ್ರಕ್ರಿಯೆ ಹಾಗೂ ವ್ಯವಸ್ಥೆಗಳ ಮೇಲೆ ಘನ ಗಮನವನ್ನು ಹರಿಸಲಾಗಿದೆ. ಇದರಿಂದ ವ್ಯವಸ್ಥಾಪಕರ ನಡುವೆ ಉತ್ತಮ ಧನಾತ್ಮಕ ಮತ್ತು ಪರಿಣಾಮಕಾರಿ ಸಂಬಂಧವನ್ನು ಬೆಳೆಯಲು ಸಹಾಯವಾಗಿದೆ. ಇದರ ಫಲಿತಾಂಶವನ್ನು ನಾವು ನೋಡಿದ್ದೇವೆ ನಮ್ಮ ವ್ಯವಹಾರದ ಬೆಳವಣಿಗೆ ಮತ್ತು ಸಾಮಾಜಿಕ ಪ್ರಭಾವ ಎರಡನ್ನೂ ಸಹಕಾರಿ ಚಳುವಳಿಗೆ ಪ್ರೇರಕವಾಗಿವೆ.

ಆದಾಗ್ಯೂ, ಸಹಕಾರಿಯ ಆಡಳಿತ ಮಂಡಳಿಯು ಹೂಡಿಕೆದಾರರ ಮಂಡಳಿ– ಮಾಲೀಕತ್ವದ ನಿಗಮ ಅಥವಾ ಲಾಭರಹಿತ ಸಂಸ್ಥೆಯೊಂದಿಗೆ ಎಲ್ಲಾ ಉದ್ದೇಶಗಳನ್ನು ಹಂಚಿಕೊಳ್ಳುವುದಿಲ್ಲ. ಸಹಕಾರಿಗಳು ಮಾಲಿಕರಿಗೆ ಉತ್ತಮ ಅನುಕೂಲಗಳನ್ನು ನೀಡಲು ಸಂಘಟಿತವಾಗಿವೆ. ಮತ್ತು ಅದು ಹಣಕಾಸಿನ ಹೂಡಿಕೆಗಳ ಲಾಭಕ್ಕಿಂತ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತದೆ. ಸಹಕಾರಿಯ ತಿಳುವಳಿಕೆ ಮತ್ತು ಅದರ ಪುನಃರಚನೆ ಮಾಡಲು ಇದು ಒಳ್ಳೆ ಸಮಯವಾಗಿದೆ.

ಕಳೆದ ವಸಂತದಲ್ಲಿ, ಒಬ್ಬ ಲೇಖಕರಾದ ಆರ್ಟ್ ಶೆರ್‌ವುಡ್, ಅವರು ಸಂದರ್ಶಕ ವಿದ್ವಾಂಸಕರಾಗಲು ಅಹ್ವಾನಿಸಲಾಯಿತು. ನಮ್ಮ ಪ್ರಶ್ನೆಗಳನ್ನು ಪರಿಹರಿಸಲು ಇಂಡಿಯಾನ ವಿಶ್ವವಿದ್ಯಾಲಯವು ರಾಜಕೀಯ ನೀತಿ ಮತ್ತು ನೀತಿ ವಿಶ್ಲೇಷಣೆ ಕುರಿತು ವಿಶ್ವವಿಖ್ಯಾತ ವಿನ್‌ಸೆಂಟ್ ಮತ್ತು ಎಲಿನಾರ್ ಒಸ್ಟ್ರಂಮ್‌ರವರ ಕಾರ್ಯಗಾರವನ್ನು ಆಯೋಜಿಸಲಾಗಿತ್ತು. ನೋಬೆಲ್ ಪ್ರಶಸ್ತಿ ಪುರಸ್ಕೃತ ಎಲಿನೋರ್ ಓಸ್ಟ್ರೋಮ್ ಮತ್ತು ವಿನ್ಸೆಂಟ್ ಓಸ್ಟ್ರೋಮ್ ಅವರ ಕೆಲಸವನ್ನು ಆಧರಿಸಿ, ಶೆರ್‌ವುಡ್ ಅವರ ಸಹಕಾರಿಯ ಆಡಳಿತದ ನಿರೀಕ್ಷೆಗಳನ್ನು ಉದ್ದೇಶಿಸಿ ಸಂಶೋಧನೆಯನ್ನು ನಡೆಸಲಾಯಿತು, ಮತ್ತು ಅವು ಹೇಗೆ ಹೂಡಿಕೆದಾರರು ಮಾಲೀಕತ್ವ ನಿಗಮಗಳಿಂದ ಭಿನ್ನವಾಗಿವೆ ಎಂಬುದರ ಕುರಿತು ತಿಳಿಸಿತು. ಈ ಸಂಶೋಧನೆಯ ಫಲಿತಾಂಶಗಳ ಆಧಾರದ ಮೇಲೆ

ಮತ್ತು ನಮ್ಮ ತಂಡದ ಆಳವಾದ ಅನುಭವ ಮತ್ತು ಸಹಕಾರಿ ನಾಯಕತ್ವದೊಂದಿಗೆ, ನಾವು ಸಹಕಾರಿ ಆಡಳಿತದ ಮಾದರಿ ನಾಲ್ಕು ಆಧಾರ ಸ್ತಂಭಗಳನ್ನು ವಿನ್ಯಾಸಗೊಳಿಸಿದ್ದೇವೆ. ನಾವು ಅದನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಸ್ತುತಪಡಿಸಿದ್ದೇವೆ. ಹ್ಯಾಲಿಫ್ಯಾಕ್ಸ್‌ನಲ್ಲಿ ಸಹಕಾರಿ ಆಡಳಿತ ವಿಚಾರ ಸಂಕೀರಣ, ನೋವಾ ಸ್ಕಾಟಿಯಾ, ಮತ್ತು ನಾವು ಕೆಳಗಿನ ಮಾದರಿಯನ್ನು ವಿವರಿಸಿದ್ದೇವೆ.

## ಸಹಕಾರಿ ಆಡಳಿತ/ನಾಯಕತ್ವದ ನಾಲ್ಕು ಆಧಾರ ಸ್ತಂಭಗಳು

ಸಹಕಾರಿಯ ಆಡಳಿತವು ಸಹಕಾರಿ ಸ್ವಾಮ್ಯದ ಉದ್ಯಮಗಳ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಯಶಸ್ವಿಗೆ ಚುಕ್ಕಾಣಿಯಾಗಿದೆ. ಇದು ಪ್ರಮುಖ ಪ್ರಶ್ನೆಗಳಿಗೆ ಉತ್ತರಿಸಿರುವುದಾಗಿದೆ, ಕರ್ತವ್ಯ ಮತ್ತು ಹೋಣೆಗಾರಿಕೆಗಳನ್ನು ವ್ಯಾಖ್ಯಾನಿಸುವುದು, ಮತ್ತು ನಿರೀಕ್ಷೆಗಳನ್ನು ಹೊಂದಿಸಲು ಮತ್ತು ಖಚಿತಪಡಿಸಿಕೊಳ್ಳಲು ಹೋಣೆಗಾರಿಕೆಗಳನ್ನು ಸ್ಥಾಪಿಸುವ ಪ್ರಕ್ರಿಯೆಯಾಗಿದೆ.ಸಹಕಾರಿ ವ್ಯವಸ್ಥೆಯು ಒಂದು ಉತ್ತಮ ಮಾದರಿ. ಒಂದು ಉತ್ತಮ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುವ ವ್ಯವಸ್ಥೆಯಾಗಿದೆ. ಇದರ ಭಾಗಗಳು ಮತ್ತು ಪ್ರಕ್ರಿಯೆಗಳು ಅರ್ಥಪೂರ್ಣವಾಗಿದೆ. ನಮ್ಮ 4 ಆಧಾರ ಸ್ತಂಭಗಳ ಮಾದರಿಯು ವ್ಯವಸ್ಥೆಯನ್ನು ಹಾಲಿ ವ್ಯವಸ್ಥೆಯನ್ನು ಬದಲಾಯಿಸುವುದಲ್ಲ. ಇದು ಸಹಕಾರಿ ಆಡಳಿತದ ಹೊಸ ಮಾರ್ಗವಾಗಿದೆ. ಇದು ಪ್ರಸ್ತುತವನ್ನು ತಿಳಿಸುತ್ತದೆ ಮಾಲೀಕರ/ಸದಸ್ಯರ ಸಂಬಂಧಗಳನ್ನು ಬಲಪಡಿಸುವಲ್ಲಿ, ಅಂತರಗಳು ಕಡಿಮೆ ಮಾಡುವುದು ಮತ್ತು ಇತರ ವ್ಯವಹಾರ ಅಥವಾ ಅಡಳಿತ ಮಾದರಿಗಳ ಭಾಗವಾಗಿರದ ಪ್ರಜಾಪ್ರಭುತ್ವದ ಆಚರಣೆಗಳು. ಸಹಕಾರಿ ಆಡಳಿತ/ನಾಯಕತ್ವದ ನಾಲ್ಕು ಆಧಾರ ಸ್ತಂಭಗಳು ಯಾವುವೆಂದರೆ,

1. **ತಂಡ** : ಸಾಮಾನ್ಯ ಉದ್ದೇಶವನ್ನು ಸಾಧಸಿಕೊಳ್ಳಲು ಒಟ್ಟಿಗೆ ಕಾರ್ಯನಿರ್ವಹಿಸುವುದು.
2. **ಪ್ರಜಾಪ್ರಭುತ್ವ :** ಜನರಿಂದ ಜನರಿಗಾಗಿ ಜನರೇ ನಿರ್ವಹಿಸುವ ಯಶಸ್ವಿ ಆಡಳಿತ ಚಟುವಟಿಕೆಗಳನ್ನು ಅಭ್ಯಾಸ ಮಾಡುವುದು, ರಕ್ಷಿಸುವುದು, ಪ್ರಚಾರ ಮಾಡುವುದು ಮತ್ತು ಸ್ಥಿರಗೊಳಿಸುವುದು ಉತ್ತಮ ಪ್ರಜಾಪ್ರಭುತ್ವವೆನಿಸುತ್ತದೆ. .
3. **ಕಾರ್ಯತಂತ್ರದ ನಾಯಕತ್ವ:** ಸಹಕಾರಿಯ ನಿರ್ದೇಶನ/ಉದ್ದೇಶವನ್ನು ಯಶಸ್ವಿಯಾಗಿ ನಿರೂಪಿಸುವ ದಿಕ್ಕಿನಲ್ಲಿ ಚಳುವಳಿಗಾಗಿ ಸಂಘಟನೆಯನ್ನು ಸ್ಥಾಪಿಸುವುದು.
4. **ಜವಾಬ್ದಾರಿಯುತ ಸಬಲೀಕರಣ :** ಒಂದೇ ಸಮಯದಲ್ಲಿ ಜನರನ್ನು ಯಶಸ್ವಿಯಾಗಿ ಸಬಲೀಕರಣಗೋಳಿಸಿರುವುದರ ಜೋತೆಗೆ ಅಧಿಕಾರಕ್ಕಾಗಿ ಅರನ್ನು ಹೊಣೆಗಾರರನ್ನಾಗಿ ಮಾಡುವ ಸಮಯವನ್ನು ಮಂಜೂರು ಮಾಡಿದೆ.

ಸಹಕಾರದೊಳಗೆ, ಯಾವುದೇ ಪಾತ್ರವಿರಲಿ, ನಿರೀಕ್ಷೆಯೊಂದಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡಲು ಎಲ್ಲರೂ ಜವಾಬ್ದಾರರಾಗಿರುತ್ತಾರೆ. ಇದರಿಂದ ಜವಾಬ್ದಾರರಾಗಿರಲು ಮತ್ತು ಇತರರಿಗೆ ಅಧಿಕಾರ ನೀಡಲು ಸಾಧ್ಯವಾಗುತ್ತದೆ. ಉತ್ತಮ ಆರೋಗ್ಯ ಪ್ರಜಾಪ್ರಭುತ್ವಕ್ಕಾಗಿ ಉದ್ದೇಶ ಪೂರ್ವಕವಾಗಿ ಮತ್ತು ಖಚಿತಪಡಿಸಿಕೊಳ್ಳಲು ಗಮನಹರಿಸಬೇಕು. ಉದ್ದೇಶಗಳನ್ನು ಸಾಧಿಸಲು ಸಹಕಾರಿಗಳು ಕೆಲಸ ಮಾಡುತ್ತಿದೆ, ಸಹಕಾರಿಯ ಆಡಳಿತ ಮಂಡಲಿಯಲ್ಲಿ ಮಾತ್ರವಲ್ಲದೆ ಕೆಲಸದ ಸ್ಥಳದಲ್ಲಿ ಮತ್ತು ಸದಸ್ಯರೊಂದಿಗೆ ಕೆಲಸ ಮಾಡಬೇಕು. ಆಡಳಿತ ಚುಕ್ಕಾಣಿ ಹಿಡಿಯುವುದು, ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವುದು, ಸಾಮಾನ್ಯ ಗುರಿಗಳಿಗಾಗಿ ಒಟ್ಟಾಗಿ ಕೆಲಸ ಮಾಡುವುದು– ಪ್ರತಿ ಹಂತದಲ್ಲಿ ಸಹಕಾರ ಉದ್ದಕ್ಕೂ ನಡೆಯುತ್ತದೆ.

ಆದ್ದರಿಂದ, ಸಹಕಾರಿ ನಾಲ್ಕು ಆಧಾರ ಸ್ತಂಭಗಳು ಆಳಿತದ ಚಟುವಟಿಕೆಗಳಿಗೆ ಸಹಕಾರದ ಮೌಲ್ಯಗಳ ಮಟ್ಟವನ್ನು ಸಂಪರ್ಕಿಸುವ ಚೌಕಟ್ಟಾಗಿದೆ. ಸಿಬ್ಬಂದಿ, ನಿರ್ವಹಣೆ, ಆಡಳಿತ ಮಂಡಲಿ ಮತ್ತು ಮಾಲೀಕರು. ಪ್ರತಿಯೊಂದು ನಾಲ್ಕು ಆಧಾರ ಸ್ತಂಭಗಳು ತಂಡ, ಜವಾಬ್ದಾರಿಯುತ ಸಬಲೀಕರಣ, ಕಾರ್ಯತಂತ್ರದ ನಾಯಕತ್ವ, ಪ್ರಜಾಪ್ರಭುತ್ವ – ಸಹಕಾರದಲ್ಲಿ ಪ್ರತಿ ಕ್ಷೇತ್ರಕ್ಕೂ ಸಂಬಂಧಿಸಿದೆ. ಮತ್ತೆ, ಸಹಕಾರಿ 4 ಆಧಾರ ಸ್ತಂಭಗಳು ಆಡಳಿತ ವ್ಯವಸ್ಥೆಗಳನ್ನು ಬದಲಾಯಿಸುವ ಬಗ್ಗೆ ಅಲ್ಲ, ಆದರೆ ಸಹಕಾರಲ್ಲಿ ಆಡಳಿತದ ಪಾತ್ರದ ಬಗ್ಗೆ ಹೊಸ ಚಿಂತನೆ ನೀಡುತ್ತದೆ.

## ಆಡಳಿತ ಮಟ್ಟದಲ್ಲಿ 4 ಆಧಾರ ಸ್ತಂಭಗಳು

ಈ ಲೇಖನದ ಉಳಿದ ಭಾಗವು ನಿರ್ದೇಶಕ ಮಂಡಳಿಯ ಮಟ್ಟದಲ್ಲಿ ಸಹಕಾರಿ ಆಡಳಿತವನ್ನು ಅರ್ಥಮಾಡಿಸುವುದನ್ನು ಗಮನಹರಿಸಲಾಗಿದೆ. ಕೆಲಸವನ್ನು ಸಹಕಾರಿ ಆಡಳಿತಕ್ಕೆ ವಿಧಿಸಿವುದರ ಮೂಲಕ ಹೊರಗೆ ಸಾಗಿಸಲಾಗುತ್ತಿದೆ. ಆದರೆ ಇದು ಪ್ರಸ್ತುತ ನಿರ್ದೇಶಕರು ಅದನ್ನು ಸುಲಭವಾಗಿ ವ್ಯಾಖ್ಯಾನಿಸಿಲು ಮತ್ತು ಶಬ್ದಕೋಶವನ್ನು ಹೊಂದಲು ಚೌಕಟ್ಟನ್ನು ಕಳೆದುಕೊಂಡಿದೆ.

ನಾವು ಏನನ್ನು ಕಲಿತಿದ್ದೇವೆಯೋ ಅದನ್ನು ನಿರ್ಮಿಸಲು ಪರಿಣಾಮಕಾರಿಯಾಗಿ ಆಡಳಿತದ ಉದ್ದೇಶದಿಂದ ಮಂಡಳಿಗಳು ಹೇಗೆ ಆಡಳಿತದಲ್ಲಿ ಸಹಕಾರಿ ಮೌಲ್ಯಗಳನ್ನು ವ್ಯಕ್ತಪಡಿಸುತ್ತವೆ. ಯಾವಾಗ ರೋಚ್‌ಡೇಲ್ ಪಯೋನಿಯರ್ಸ್ ತಮ್ಮ ಯೋಜನೆಗಳ ಮೂಲಕ ರೂಪರೇಶೆಗಳನ್ನು ಒಳಗೊಂಡ ಸಹಕಾರಿ ತತ್ವಗಳ ಗುಂಪಿನ ಪರಿಕಲ್ಪನೆಗಳನ್ನು ರಚಿಸಿದರೋ, ಆಗ ಸಹಕಾವು ಒಂದು ಉತ್ತಮ ವ್ಯವಹಾರಕ್ಕೆ ಮಾದರಿಯಾಯಿತು. ಈ ಒಂದು ಗುಂಪು ವಿಶ್ವದಾದ್ಯಂತ ಚಳುವಳಿಯನ್ನು ಬೆಳೆಸಲು ನಾಂದಿಯಾಯಿತು. ಏನು ಪ್ರವರ್ತಕರು ತಮ್ಮ ಮೌಲ್ಯಗಳನ್ನು ಪ್ರಾಯೋಗಿಕ ಅನ್ವಯದ ಆಧಾರದ ಮೇಲೆ ಸಹಕಾರಿಗಳಿಗೆ ಚೌಕಟ್ಟನ್ನು ನೀಡಿದ್ದಾರೋ ಅದು ಸಹಕಾರಿಗಳಿಗೆ ಆರ್ಥಿಕ ನೀತಿ, ಮತ್ತು ವ್ಯವಹಾರ, ಅಭಿವೃದ್ಧಿಗಳಿಗೆ ಅನುಮತಿ ನೀಡಿತು.

ನಾವು ಆಡಳಿತದೊಂದಿಗೆ ಕೆಲಸ ನಿರ್ವಹಿಸಿದಾಗ ಕೆಲವೊಂದು

ಅಂಶಗಳನ್ನು ಗಮನಿಸಲಾಯಿತು. ಒಂದು ದೊಡ್ಡ ಚಿತ್ರಣದ ಅರ್ಥ ಮತು ನಿರ್ವಹಿಸಲು ಬೇಕಾಗದ ನಿರ್ಧಿಷ್ಟ ಕೌಶಲ್ಯಗಳು, ಪ್ರಕ್ರಿಯೆಗಳು, ಅಥವಾ ಯಾವುದೇ ಸಮಯದಲ್ಲಿ ಅವರಿಗೆ ಬೇಕಾದ ಸಾಧನಗಳು. ನಾವು ಸಹಕಾರ ಆಡಳಿತದ 4 ಆಧಾರ ಸ್ತಂಭಗಳು ಒಳ್ಳೆಯ ಎರಡು ವಿಧಾನಗಳನ್ನು ನಿರ್ವಹಿಸುತ್ತದೆ ಉತ್ತಮ ದೃಷ್ಟಿಕೋನ ಹೊಂದವುದು ಮತ್ತು ನಿರ್ಧಿಷ್ಟ ಅಗತ್ಯತೆಗಳ ಕೇಂದ್ರೀಕರಿಸುವುದು. ಈ 4 ಆಧಾರ ಸ್ತಂಭಗಳು ಉತ್ತಮವಾಗಿ ಕಾರ್ಯನಿರ್ವಹಿಸುವ ವಸ್ತುಗಳಾದ ಉತ್ತಮ ಕಾರ್ಯನಿರ್ವಹಿಸುವ ಒಂದು ನಿರ್ಧಿಷ್ಟ ಸಹಕಾರ ಮತ್ತು ಪ್ರಾದೇಶಿಕ ಅಭಿವೃದ್ಧಿ ಪ್ರದರ್ಶಗಳನ್ನು ಗುರುತಿಸಲು ಒಂದು ಮಾರ್ಗವಾಗಿದೆ. (ಮುಂದಿನ ಲೇಖನದಲ್ಲಿ ಈ ಅವಕಾಶಗಳ ಕುರಿತು ವಿಶ್ಲೇಷಿಸುತ್ತದೆ).

**ತಂಡ:**

ಸಹಕಾರಿಯ ಆಡಳಿತ ಶ್ರೇಷ್ಠತೆ ಮತ್ತು ಸಂಘಟನೆ ಮತ್ತು ಸ್ವಂತ ಕೆಲಸ ನಿರ್ವಹಿಸುವುದನ್ನು ಶಾಸ್ವತಗೊಳಿಸುವ ಕೆಲಸ ಆಡಳಿತ ಮಂಡಲಿ ಮೇಲಿದೆ. ಇದನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಮಂಡಲಿಯು ಒಂದು ತಂಡವಾಗಿ ಕೆಲಸ ನಿರ್ವಹಿಸಬೇಕು. ಕೆಲಸ, ವ್ಯಕ್ತಿಗಳ ಸ್ಪಷ್ಟ ನಿರೀಕ್ಷೆಗಳು ಮತ್ತು ಗಂಪುಗಳ , ಆದಾಗ್ಯೂ ಪರಿಣಾಮಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳುವ ವ್ಯವಸ್ಥೆ, ಮತ್ತು ಗುಂಪಿನಲ್ಲಿ ಪರಿಣಾಮಕಾರಿ ನಾಯಕತ್ವ ಇವುಗಳ ಬಗ್ಗೆ ಒಂದು ಸಾಮಾನ್ಯ ಒಪ್ಪಂದವನ್ನು ಹೊಂದಿರುತ್ತದೆ.

ಮಂಡಳಿಯು ಒಂದು ಶಕ್ತಿಯ ಘಟಕವಾಗಿರುತ್ತದೆ. ಒಬ್ಬ ನಿರ್ದೇಶಕನು ಯಾವುದೇ ಮಾಲಿಕನ ಹಿಂದಿನ ಶಕ್ತಿಯಾಗಿರುತ್ತಾನೆ, ಇವರು ಆಡಳಿತ ಗುಂಪಿನ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಅಗತ್ಯ ಅಭಿಪ್ರಾಯ ಮತ್ತು ಮೌಲ್ಯಗಳ ಮೇಲೆ ವೈವಿಧ್ಯತೆಯನ್ನು ನೀಡುತ್ತಾರೆ. ಆದರೂ ಗುಂಪು ಯೋಚಿಸುವ ಮತ್ತು ಒಟ್ಟಿಗೆ ಕಲಿಯುವ ಸಾಮರ್ಥ್ಯವನ್ನು ಹೊಂದಿರಬೇಕು, ಆ ನಿರ್ಧಾರವನ್ನು ತೆಗೆದುಕೊಳ್ಳುವ ಮತ್ತು ನಿರ್ಧಾರವನ್ನು ಬೆಂಬಲಿಸಬೇಕು. ಮಂಡಳಿಯು ಕೆಲಸದಲ್ಲಿ ಗುಂಪು ಸಂಸ್ಕೃತಿಯನ್ನು ರಚಿಸುವುದರ ಮತ್ತು ನಿರ್ವಹಿವುದರ ಮೂಲಕ ಬೆಂಬಲಿಸಬೇಕು. ಸಹಕಾರಿ ಆಡಳಿತದಲ್ಲಿ 4 ಆಧಾರ ಸ್ತಂಭಗಳನ್ನು ತೀಕ್ಷ್ಣದೃಷ್ಟಿಕೋನದಿಂದ ವಿಕ್ಷೀಸಿದಾಗ ಮಂಡಳಿಯ ಪರಿಣಾಮಕಾರಿತ್ವ ಕಾರ್ಯನಿರ್ವಹಣೆಯಲ್ಲಿ ಸವಯಂ ಜವಾಬ್ದಾರಿಯುತ ತಂಡವು ಮೊದಲ ಹೆಜ್ಜೆಯಾಗಿದೆ.

**ಜವಾಬ್ದಾರಿಯುತ ಉತ್ತರದಾಯಿತ್ವ.**

ಸಹಕಾರ ಸಂಸ್ಥೆಗಳ ವ್ಯವಹಾರಗಳೆಲ್ಲ ಮಾಲೀಕರೆನಿಸಿಕೊಂಡಿರುವ ಸದಸ್ಯರ ಪರವಾಗಿ ನಡೆಯಬೇಕು. ಸದಸ್ಯರ ಪರವಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿ ಆಡಳಿತ ಮಂಡಳಿ, ಅಧ್ಯಕ್ಷರು. ಅಧಿಕಾರಿಯವರುಗಳಿಗೆ ಇರುತ್ತದೆ. ಈ 3 ವರ್ಗದವರು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಅವರವರು ನಿರ್ವಹಿಸಿರುವ ಮತ್ತು ಸಾಮೂಹಿಕವಾಗಿ ನಿರ್ವಹಿಸಿರುವ ವ್ಯವಹಾರಗಳ ಉತ್ತರದಾಯಿತ್ವವನ್ನು ಹೊಂದಿರುವುದು ಅವಶ್ಯಕ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಇದು ಮಹತ್ವದ ಆಧಾರ ಸ್ತಂಭವಾಗುತ್ತದೆ.

ಸಹಕಾರಿ ಕ್ಷೇತ್ರದ ಯಶಸ್ಸು ಉತ್ತಮ ಆಡಳಿತ ವ್ಯವಸ್ಥೆಯನ್ನು ಹೊಂದಿರುತ್ತದೆ. ಆಡಳಿತ ವ್ಯವಸ್ಥೆ ಉತ್ತಮವಾಗಿರಬೇಕಾದರೆ ಸಹಕಾರಿಯ ಸದಸ್ಯರು ಉತ್ತಮ ತಂಡಗಳಾಗಿ ಸಾಮೂಹಿಕವಾಗಿ ಒಂದು ಆರ್ಥಿಕ ಗುರಿಯನ್ನು ಸಾಧಿಸಲು ಉತ್ತಮ ಆಡಳಿತ ಪ್ರಜಾಪ್ರಭುತ್ವದ ತಳಹದಿಯನ್ನು ಅವಲಂಬಿಸುವುದು ಅಗತ್ಯ. ಅತಿ ಮುಖ್ಯವಾಗಿ ಜವಾಬ್ದಾರಿಯ ಹಾಗು ಉತ್ತರದಾಯಿತ್ವದ ಪ್ರಜ್ಞೆಯ ಹೊಂದಿರುವುದು ಅವಶ್ಯಕ.

## ರಕ್ತದಾನ ಶಿಬಿರ



**ಬೆಂಗಳೂರು :** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಯಲಹಂಕ ಉಪನಗರ, ಇವರು ಶ್ರೀ.ಶ್ರೀ.ಶ್ರೀ.ಮಹಾಯೋಗಿ ವೇಮನರ 611 ನೇ ಜಯಂತ್ಯೋತ್ಸವದ ಪ್ರಯುಕ್ತ, ರೆಡ್ಡಿಜನ ಸಂಘ, ಬೆಂಗಳೂರು ಉತ್ತರ ವಲಯ ಹಾಗೂ ರೆಡ್ ಕ್ರಾಸ್ ಸಂಸ್ಥೆ, ಬೆಂಗಳೂರು ಇವರ ಸಹಯೋಗದೊಂದಿಗೆ ದಿನಾಂಕ 19.01.2023 ರಂದು, ಕೇಂದ್ರ ಕಛೇರಿ ಅವರಣ, ಯಲಹಂಕ ಉಪನಗರ, ಬೆಂಗಳೂರು ಇಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿರುತ್ತದೆ. ಈ ಮಹತ್ವದ ರಕ್ತದಾನ ಶಿಬಿರದಲ್ಲಿ ಒಟ್ಟು 483 ರಕ್ತದಾನಿಗಳು ರಕ್ತದಾನ ಮಾಡಿರುತ್ತಾರೆ. ಈ ಮಹತ್ವದ ಕಾರ್ಯಕ್ರಮವೂ ಬಹಳ ಯಶಸ್ವಿಯಾಗಿ ಜರುಗಿತು.

## ಆಡಳಿತ ಮಂಡಳಿ ಸಭೆ




ದಿನಾಂಕ 02–02–2023 ರಂದು ಸಂಯುಕ್ತ ಸಹಕಾರಿಯ ದಿನಾಂಕ 23.01.2023ರ ನಿರ್ದೇಶನ ಪತ್ರದಂತೆ ಮಾನ್ಯ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್ ರವರ ಅಧ್ಯಕ್ಷತೆಯಲ್ಲಿ ತುಮಕೂರು ನವನಿಧಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ತುಮಕೂರು ಸಹಕಾ–ರಿಯ ಆಡಳಿತ ಮಂಡಳಿ ಸದಸ್ಯರ ಸಭೆ ನಡೆಸಲಾಯಿತು. ದಿನಾಂಕ 11–11–2022 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ನಡೆದ ವಿಶೇಷ ಸಭೆ ನಿರ್ಣಯಗಳ ಕುರಿತು ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಸಭೆಗೆ ಮಾಹಿತಿ ನೀಡಿದರು.

# ಸಾರ್ವಜನಿಕ ಸಂಬಂಧಗಳ ನಿರ್ವಹಣೆ ಹಾಗೂ ಸಹಕಾರ ಸಂಘಗಳ ಜವಾಬ್ದಾರಿ

– ಶ್ರೀಮತಿ ಆಶ್ವಿನಿ ಆರ್. ಕೆ

**ಸಾರ್ವಜನಿಕ ಸಂಬಂಧಗಳ ನಿರ್ವಹಣೆ ಹಾಗೂ ಸಹಕಾರ ಸಂಘಗಳ ಜವಾಬ್ದಾರಿ.**

ಸಾರ್ವಜನಿಕ ಸಂಬಂಧಗಳು ಒಂದು ಸಂಸ್ಥೆಯ ನಿರ್ದಿಷ್ಟ ಉತ್ಪನ್ನವನ್ನು ಪ್ರಚಾರ ಮಾಡಲು ಸಹಕಾರ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಸಾಧನೆಗಳನ್ನು ವಸ್ತುಗಳನ್ನು ಪ್ರಚಾರಮಾಡಿ ಮಾರಾಟ ಮಾಡಲು ಹಾಗೂ ಇತರ ಸಂಸ್ಥೆಗಳೊಂದಿಗೆ ಉತ್ತಮ ಬಾಂಧವ್ಯವನ್ನು ಬೆಳೆಸುವ ಅತ್ಯಂತ ಪರಿಣಾಮಕಾರಿ ವಿಧಾನವೆಂದು ತಿಳಿಯಬಹುದು.

ಸಾರ್ವಜನಿಕ ಸಂಪರ್ಕ ಸಾಧನಗಳಂತಹ ತಂತ್ರಗಳನ್ನು ಬಳಸುವ ವಾಣಿಜ್ಯ ಪ್ರಯೋಜನಗಳೆಂದರೆ, ಕಂಪನಿಯ ವಾಣಿಜ್ಯ ತ್ರಿಜ್ಯವು ವಿಸ್ತರಿಸುತ್ತದೆ, ಕಂಪನಿಯು ಸಮುದಾಯಕ್ಕೆ ಕೆಲವು ಸಾಮಾಜಿಕ ಕಾರ್ಯಗಳನ್ನು ಒದಗಿಸಲು ಅವಕಾಶವನ್ನು ಹೊಂದಿದೆ, ಅಂದರೆ ಸಾರ್ವಜನಿಕರಿಗೆ ಅತ್ಯುತ್ತಮವಾದ ಚಿತ್ರವನ್ನು ಪ್ರತಿನಿಧಿಸುತ್ತದೆ. ಇತರ ಸ್ಪರ್ಧಿಗಳ ಮೇಲೆ ಪ್ರಯೋಜನ, ಇದು ಉದ್ಯೋಗಿಗಳಿಗೆ ಮತ್ತು ಅಂತಿಮ ಉತ್ಪನ್ನದ ಮರುಕಳಿಸುವ ಗ್ರಾಹಕರಿಗೆ ಪ್ರಯೋಜನಗಳನ್ನು ಹೊಂದಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಾರ್ವಜನಿಕ ಸಂಪರ್ಕ ಸಾಧನಗಳ ಬಳಕೆಯು ಒಂದು ನಿರ್ದಿಷ್ಟ ಉತ್ಪನ್ನ, ವಿಶೇಷ ಸೇವೆ, ನಿರ್ದಿಷ್ಟ ಪಾತ್ರ ಅಥವಾ ಪ್ರಸಿದ್ಧ ವ್ಯಕ್ತಿಗಳು ಮತ್ತು ಕಂಪನಿಗಳ ಪ್ರತಿಕ್ರಿಯೆ ಅಥವಾ ಸ್ವೀಕಾರವನ್ನು ಪ್ರೋತ್ಸಾಹಿಸಲು, ಮಾರ್ಗದರ್ಶನ ಮಾಡಲು ಮತ್ತು ಅಳೆಯಲು ಬಳಸಲಾಗುವ ತಂತ್ರಗಳ ಗುಂಪಾಗಿದೆ ಎಂದು ಹೇಳಬಹುದು. ಮತ್ತು ಸಂಸ್ಥೆಗಳು. ಸಂಸ್ಥೆ ಅಥವಾ ಬ್ರ್ಯಾಂಡ್ ಮತ್ತು ಸಾಮಾನ್ಯ ಜನರ ನಡುವಿನ ಸಂವಹನ ಕೊಂಡಿಯಾಗಿ ಅವುಗಳನ್ನು ಪರಿಗಣಿಸಲಾಗುತ್ತದೆ, ಇದು ಸರಿಯಾಗಿ ಕಾರ್ಯನಿರ್ವಹಿಸಲು ಅನುಕೂಲವೆಂದು ಪರಿಗಣಿಸಲಾಗುತ್ತದೆ. ಸಾರ್ವಜನಿಕ ಸಂಪರ್ಕ ಸಾಧನಗಳ ಬಗ್ಗೆ ನೆನಪಿನಲ್ಲಿಟ್ಟುಕೊಳ್ಳಬೇಕಾದ ಪ್ರಮುಖ ಅಂಶವೆಂದರೆ, ಈ ರೀತಿಯ ಕಾರ್ಯತಂತ್ರವನ್ನು ಉತ್ತೇಜಿಸುವ ಮತ್ತು ಪರಿಣತಿ ಹೊಂದಿರುವ ಇಲಾಖೆಯನ್ನು ಉತ್ತೇಜಿಸಲು ಎಲ್ಲಾ ಕಂಪನಿಗಳು ನಿರ್ದಿಷ್ಟ ಪ್ರಮಾಣದ ಹಣವನ್ನು ನಿಯೋಜಿಸಬೇಕು, ಉತ್ತಮ ಕಂಪನಿಗಳು ಅದರೊಳಗೆ ಯಶಸ್ವಿಯಾಗುವ ಮೂಲಕ ನಿರೂಪಿಸಲ್ಪಡುತ್ತವೆ ಸಾರ್ವಜನಿಕ ಸಂಬಂಧಗಳ ಪ್ರಪಂಚ, ಇದಕ್ಕಾಗಿ ಇದು ಬಹಳ ಮುಖ್ಯವಾದ ಅಂಶವಾಗಿದೆ. ಹೇಗೆ ಎಂದು ಇಲ್ಲಿ ತಿಳಿದುಕೊಂಡು ವ್ಯವಹಾರವನ್ನು ಹೇಗೆ ನಡೆಸುವುದು ಎಂಬುದನ್ನು ತಿಳಿಯಬಹುದಾಗಿದೆ.

**ಸಾಂಪ್ರದಾಯಿಕ ಸಾರ್ವಜನಿಕ ಸಂಬಂಧಗಳ ಸಾಧನಗಳು:**

ಸಾರ್ವಜನಿಕ ಸಂಪರ್ಕ ಸಾಧನಗಳ ಜಗತ್ತಿನಲ್ಲಿ, ಸಾರ್ವಜನಿಕರೊಂದಿಗೆ ಪರಿಣಾಮಕಾರಿಯಾಗಿ ಸಂಪರ್ಕ ಸಾಧಿಸಲು ಸಾಧ್ಯವಾಗುವ ವಿವಿಧ ತಂತ್ರಗಳಿವೆ, ದೂರದರ್ಶನದಿಂದ ವಿವಿಧ ಲಾಭೋದ್ದೇಶವಿಲ್ಲದ ಸಂಸ್ಥೆಗಳೊಂದಿಗೆ ಸಾರ್ವಜನಿಕ ಸಂಬಂಧಗಳನ್ನು ಹೊಂದಲು, ಹೆಚ್ಚು ಬಳಸಿದ ತಂತ್ರಗಳಲ್ಲಿ ಈ ಕೆಳಗಿನವುಗಳಿವೆ:

**ಸಂವಹನ ವೇದಿಕೆಗಳು:**

ಉತ್ತಮ ಸಾರ್ವಜನಿಕ ಸಂಬಂಧಗಳನ್ನು ಸ್ಥಾಪಿಸಲು ಅತ್ಯಂತ ಪರಿಣಾಮಕಾರಿ ವಿಧಾನವೆಂದರೆ ಈ ಉದ್ದೇಶಗಳನ್ನು ಸಾಧಿಸಲು ಸಂವಹನ ವೇದಿಕೆಗಳನ್ನು ಬಳಸುವುದು, ಉದಾಹರಣೆಗೆ, ದೂರದರ್ಶನ ಚಾನೆಲ್ಗಳು, ವೆಬ್ ಪುಟಗಳಂತಹ ಕಂಪ್ಯೂಟರ್ ಉಪಕರಣಗಳು, ರೇಡಿಯೋ ಜಾಹೀರಾತುಗಳು ಮತ್ತು ಜಾಹೀರಾತುಗಳು. ಹೆಚ್ಚು ಸಾಂಪ್ರದಾಯಿಕ ಜಾಹೀರಾತುಗಳು. ಜಾಹೀರಾತು ಫಲಕಗಳು ಮತ್ತು ಚಿಹ್ನೆಗಳು, ಇವುಗಳು ಉತ್ಪಾದಕ ಕಂಪನಿಯ ಉತ್ಪನ್ನವನ್ನು ಸಾರ್ವಜನಿಕರಿಗೆ ತಿಳಿಯಪಡಿಸುವ ಮುಖ್ಯ ಉದ್ದೇಶವನ್ನು ಹೊಂದಿವೆ, ಇದರಿಂದ ಅವರು ಅದನ್ನು ಪ್ರಯತ್ನಿಸಬಹುದು.

ಎಲ್ಲೆಡೆ ನಾವು ಈ ಸಾರ್ವಜನಿಕ ಸಂಪರ್ಕ ಸಾಧನಗಳನ್ನು ಕಾಣಬಹುದು, ಪ್ರತಿ ಬಾರಿ ನಾವು ಒಂದು ನಿರ್ದಿಷ್ಟ ಉತ್ಪನ್ನದ ಕುರಿತು ವ್ಯಾಪಾರದ ಜಾಹೀರಾತನ್ನು ನೋಡಿದಾಗ, ನಾವು ಅದನ್ನು ನೇರವಾಗಿ ಗಮನಿಸುತ್ತೇವೆ, ಆದ್ದರಿಂದ ನಾವು ಅದರ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಬಯಸುತ್ತೇವೆ. ಹಾಗೂ ಪ್ರಾಯಶಃ ನಾವು ಅದನ್ನು ಕೆಲವು ರೀತಿಯಲ್ಲಿ ಪಡೆದುಕೊಳ್ಳಲು ಪ್ರಚೋದಿಸುತ್ತೇವೆ.

**ಸುದ್ದಿಯನ್ನು ರಚಿಸುವುದು:–**

ಇದು ಅಸ್ತಿತ್ವದಲ್ಲಿರುವ ಅತ್ಯಂತ ಪರಿಣಾಮಕಾರಿ ಸಾರ್ವಜನಿಕ ಸಂಪರ್ಕ ಸಾಧನಗಳಲ್ಲಿ ಒಂದಾಗಿದೆ ಎಂದು ಪರಿಗಣಿಸಲಾಗಿದೆ, ಜಾಹೀರಾತು ಮಾಡುವುದಕ್ಕಿಂತ ಸುದ್ದಿಯನ್ನು ರಚಿಸುವುದು ಸಂಪೂರ್ಣವಾಗಿ ವಿಭಿನ್ನವಾಗಿದೆ. ಈ ಕಾರ್ಯತಂತ್ರವನ್ನು ಸಾಧ್ಯವಾದಷ್ಟು ಪರಿಣಾಮಕಾರಿಯಾಗಿ ನಿರ್ವಹಿಸಲು, ನೀವು ಮಾಧ್ಯಮದ ಗಮನವನ್ನು ಮಾತ್ರ ಸೆಳೆಯಬೇಕು, ಈ ಗುರಿಯನ್ನು ಸಾಧಿಸಲು ನೀವು ಕೇವಲ ಪ್ರವೃತ್ತಿಯನ್ನು ರಚಿಸಬೇಕಾಗಿದೆ, ಅದು ಪ್ರಸಕ್ತ ಸಾಲಿನಲ್ಲಿ ಬೇಡಿಕೆಯಲ್ಲಿರುವ ಪ್ರಚಲಿತದಲ್ಲಿರುವ ಕಲಾವಿದರು ಅಥವಾ ಸೆಲೆಬ್ರಿಟಿಗಳು ಭಾಗವಹಿಸುವ ಸಭೆ ಸಮಾರಂಭಗಳನ್ನು ಗಳನ್ನು ನಿರಂತರ ಹಮ್ಮಿಕೊಳ್ಳುವುದು ಅಗತ್ಯ...

ಸಾರ್ವಜನಿಕ ಸಂಪರ್ಕ ಸಾಧನಗಳನ್ನು ಬಳಸಲು ಉತ್ತಮ ಮಾರ್ಗವೆಂದರೆ ಈವೆಂಟ್ಗಳನ್ನು ಹಿಡಿದಿಟ್ಟುಕೊಳ್ಳುವುದು, ಕೆಲವು ಉತ್ಪನ್ನಗಳಿಗೆ ಪ್ರಚಾರದ ಪಕ್ಷಗಳು ಮತ್ತು ಮಾರುಕಟ್ಟೆಯಲ್ಲಿ ಉತ್ಪನ್ನವನ್ನು ಜಾಹೀರಾತು ಮಾಡುವ ಉದ್ದೇಶದಿಂದ ಈವೆಂಟ್ಗಳು, ನೀವು ಉತ್ತಮ ಸಂಸ್ಥೆ ಮತ್ತು ಮಾಧ್ಯಮ ಪ್ರಸಾರವನ್ನು ಹೊಂದಿರಬೇಕು ಉತ್ತಮ ಫಲಿತಾಂಶ ಉತ್ಪಾದಕರಿಗೆ ಸಿಗುತ್ತದೆ ಹಾಗೂ ಯೋಗ್ಯ ದರದಲ್ಲಿ ಕಂಪನಿ ಉತ್ಪಾದಿಸಿದ ಉತ್ಪಾದನೆಗಳು ಮಾರಾಟ ಆಗುತ್ತವೆ.

**ಗ್ರಾಹಕರ ಆಸಕ್ತಿಯನ್ನು ಹೆಚ್ಚಿಸುವುದು.**

ಸಾರ್ವಜನಿಕ ಸಂಪರ್ಕ ಸಾಧನಗಳನ್ನು ಬಳಸುವ ಎಲ್ಲಾ ದೊಡ್ಡ ಕಂಪನಿಗಳು ತಮ್ಮ ನಿಷ್ಠೆ ಮತ್ತು ಉತ್ಪನ್ನದ ಬದ್ಧತೆಗಾಗಿ ವಿವಿಧ ಪ್ರೋತ್ಸಾಹಕಗಳನ್ನು ನೀಡುವ ಸಲುವಾಗಿ ತಮ್ಮ ನೆಚ್ಚಿನ ಗ್ರಾಹಕರ ವಿಶೇಷ ಪಟ್ಟಿಯನ್ನು ಹೊಂದಿವೆ. ಕಂಪನಿಯು ಈ ಎಲ್ಲಾ ಪ್ರಚಾರಗಳನ್ನು ತನ್ನ ಬಳಕೆದಾರರಿಗೆ ಸಾರ್ವಜನಿಕಗೊಳಿಸಿದ ನಂತರ, ಪ್ರತಿಯೊಬ್ಬರೂ ಆ ವಿಶೇಷತೆಯ ಪ್ರಪಂಚಕ್ಕೆ ಸೇರಲು ಬಯಸುತ್ತಾರೆ, ಮಾರಾಟವನ್ನು ಹೆಚ್ಚಿಸುತ್ತಾರೆ.

**ಸರ್ಕಾರೇತರ ಸಂಸ್ಥೆಗಳಿಗೆ ಸಹಾಯ ಮಾಡುವುದು:**

ಯಶಸ್ವಿ ಸಾರ್ವಜನಿಕ ಸಂಬಂಧಗಳನ್ನು ಕೈಗೊಳ್ಳಲು ಉತ್ತಮ ಕಾರ್ಯತಂತ್ರವೆಂದರೆ ಸಾರ್ವಜನಿಕರಿಗೆ ಬಲವಾದ ಮತ್ತು ಜವಾಬ್ದಾರಿಯುತ

ಚಿತ್ರಣವನ್ನು ನೀಡುವುದು, ಅದಕ್ಕಾಗಿಯೇ ವಿವಿಧ ಪ್ರದೇಶಗಳಲ್ಲಿ ಸಾಮಾಜಿಕ ಜವಾಬ್ದಾರಿ ಅಭಿಯಾನಗಳನ್ನು ನಡೆಸುವುದು ಒಂದು ಸರ್ಕಾರೇತರ ಸಂಸ್ಥೆಗೆ (ಉದಾಹರಣೆ, ವೃದ್ಧಾಶ್ರಮ, ವಿಶೇಷ ಚೇತನ ಮಕ್ಕಳ ಶಾಲೆ, ಮಿಡ್‌ಡೇ ಮೀಲ್ ನಡೆಸುವ ಸಂಸ್ಥೆ-ಹಸಿವು ನೀಗಿಸುವ ಒಂದು ಉತ್ತಮ ಕಾರ್ಯ,ವ್ಯಸಾಯಕ್ಕೆ ಸಂಬಂಧಿಸಿದಂತೆ ರೈತರಿಗೆ ಪ್ರೋತ್ಸಾಹ ನೀಡುವುದು ಹಾಗೂ ಇತರೆ) ಸಹಾಯ ಮಾಡುವ ಅತ್ಯುತ್ತಮ ಮಾರ್ಗಗಳಲ್ಲಿ ಒಂದಾಗಿದೆ, ನೀವು ಕಂಪನಿಯಾಗಿದ್ದರೆ ಸಾಕಷ್ಟು ಬಂಡವಾಳವನ್ನು

ಹೊಂದಿದ್ದರೆ, ಸಮಾಜದ ಕೆಲವು ವಲಯಗಳಿಗೆ ಸಾಮಾಜಿಕ ಪ್ರಯೋಜನವನ್ನು ಒದಗಿಸಲು ನಿಮ್ಮ ಸ್ವಂತ ಅಡಿಪಾಯವನ್ನು ನೀವು ಹೊಂದಿಸಬಹುದು. ಇದರಿಂದ ತಮ್ಮ ಸಾಮಾಜಿಕ ಕೊಡುಗೆ ಈ ಸಮಾಜಕ್ಕೆ ನೀಡಿದಂತಾಗುತ್ತದೆ.

**ಸಿಬ್ಬಂದಿಯವರಿಗೆ ತರಬೇತಿ ಹಾಗೂ ಇನಸೆಂಟಿವಗಳು ನೀಡುವುದು.**

ಸಾರ್ವಜನಿಕ ಸಂಪರ್ಕ ಸಾಧನಗಳಿಗೆ ಸಂಬಂಧಿಸಿದ ಎಲ್ಲವನ್ನೂ ನಿರ್ವಹಿಸುವ ಸಾಮರ್ಥ್ಯವನ್ನು ಕಂಪನಿಯು ಪರಿಗಣಿಸಿದರೆ, ಅದರ ಎಲ್ಲಾ ಉದ್ಯೋಗಿಗಳಿಗೆ ಸರಿಯಾಗಿ ತರಬೇತಿ ನೀಡುವುದು ಹೇಗೆ ಎಂದು ತಿಳಿದಿರಬೇಕು, ಇದರಿಂದಾಗಿ ಅವರು ನಂತರ ಈ ಕಾರ್ಯಗಳನ್ನು ನಿರ್ವಹಿಸಬಹುದು. ಉತ್ಪನ್ನಕ್ಕೆ ಅವರು ಹೇಗೆ ಪ್ರತಿಕ್ರಿಯಿಸುತ್ತಾರೆ, ಅದರ ಬಗ್ಗೆ ಅವರು ಹೇಗೆ ಮಾತನಾಡುತ್ತಾರೆ ಮತ್ತು ಅದನ್ನು ಹೇಗೆ ಪ್ರಚಾರ ಮಾಡುತ್ತಾರೆ ಎಂಬುದು ಯಶಸ್ವಿ ಕಂಪನಿಗೆ ತಿಳಿದಿರಬೇಕಾಗಿರುತ್ತದೆ.

ಕಂಪನಿಯ ಕಡೆಗೆ ನೌಕರನ ವರ್ತನೆಗೆ ಸಂಬಂಧಿಸಿದ ಎಲ್ಲವನ್ನೂ ಎಚ್ಚರಿಕೆಯಿಂದ ಮೌಲ್ಯಮಾಪನ ಮಾಡಲು ವ್ಯವಸ್ಥಾಪಕರಿಗೆ ಇದು ಬಹಳ ಮುಖ್ಯ, ಆದ್ದರಿಂದ ಚಾಣಕ್ಷತೆಯುಳ್ಳ ಉದ್ಯೋಗಿಗಳು ಸಂಸ್ಥೆಯ ಉದ್ದೇಶಗಳಿಗೆ ಹೆಚ್ಚು ಬಲ ನೀಡುತ್ತಾರೆ.. ಬ್ರ್ಯಾಂಡ್ ಅಥವಾ ಸಂಸ್ಥೆಯ ಮುಖ್ಯ ರಾಯಭಾರಿಗಳು ಅದರ ಉದ್ಯೋಗಿಗಳು ಎಂದು ಹೇಳಲಾಗುತ್ತದೆ, ಹೀಗಾಗಿ ಅವರನ್ನು ಸಮರ್ಥವಾಗಿ ತರಬೇತಿ ನೀಡಿ ಬಳಸಿಕೊಳ್ಳುವುದು ಬಹಳ ಮುಖ್ಯ ಪಾತ್ರವಾಗುತ್ತದೆ.

**ಉತ್ತಮ ತಂತ್ರಗಾರಿಕೆ ಹಾಗೂ ಅಕರ್ಷಣೆ:-**

ಪ್ರಸ್ತುತ, ಮಾರ್ಕೆಟಿಂಗ್ ಮತ್ತು ಮಾರ್ಕೆಟಿಂಗ್ ಟ್ರೆಂಡ್ಗಳಿಗೆ ಸಂಬಂಧಿಸಿದ ಎಲ್ಲವೂ ಸಾರ್ವಜನಿಕ ಸಂಪರ್ಕ ಸಾಧನಗಳ ಉತ್ತಮ ಬಳಕೆಯನ್ನು ಹೊಂದುವುದು ಬಹಳ ಮುಖ್ಯವಾಗಿದೆ, ಮಾರ್ಕೆಟಿಂಗ್ ಟ್ರೆಂಡ್ಗಳಿಗೆ ಸಂಬಂಧಿಸಿದ ಎಲ್ಲವೂ ಬ್ರಾಂಡ್ ನೋಡಿ ಖರೀದಸುವ ಗ್ರಾಹಕರನ್ನು ಆಕರ್ಷಿಸಲು ಅಗತ್ಯವಿರುವುದನ್ನು ಕಂಪನಿಯು ಮಾಡುತ್ತದೆ ಎಂದು ಭಾವಿಬಹುದಾಗಿದೆ. ಸೂಕ್ಷ್ಮ ಉದ್ಯಮಶೀಲತೆ, ಜಾಹೀರಾತು ತಂತ್ರಗಳಲ್ಲಿ ಒಂದಾದ ಪ್ರಸಿದ್ಧ ರಸ್ತೆ ಮಾರ್ಕೆಟಿಂಗ್, ಸಾರ್ವಜನಿಕರಿಗೆ ಹತ್ತಿರವಾಗುವ ಆಕರ್ಷಕ ಸಾಧನವಾಗಿದೆ.

**ಡಿಜಿಟಲ್ ಪ್ಲಾಟ್ಫಾರ್ಮ್‌ಗಳ ಬಳಕೆ**

ಪ್ರಸ್ತುತ, ಮಾರ್ಕೆಟಿಂಗ್ ಪ್ರಪಂಚವು ಇಂಟರ್ನೆಟ್ಗೆ ಸಂಬಂಧಿಸಿದ ಎಲ್ಲದರಲ್ಲೂ ಉತ್ತಮ ಸಂಪರ್ಕವನ್ನು ಕಂಡುಕೊಳ್ಳುತ್ತದೆ, ಇದಕ್ಕಾಗಿ ಅನೇಕ ಬಳಕೆದಾರರು ಈ ಚಾನಲ್ ಮೂಲಕ ತಮ್ಮ ಉತ್ಪನ್ನದ ಬಗ್ಗೆ ಮಾಹಿತಿಯನ್ನು ಹುಡುಕುತ್ತಾರೆ, ಏಕೆಂದರೆ ಅದರ ಉಪಯುಕ್ತತೆ ಅಥವಾ ಅದರ ಗುಣಲಕ್ಷಣಗಳ ಬಗ್ಗೆ ಅವರಿಗೆ ತಿಳಿದಿಲ್ಲ. ಸಂಭಾವ್ಯ ಗ್ರಾಹಕರಿಗೆ ಅವರು ಖರೀದಿಸಲು ಬಯಸುವ ಉತ್ಪನ್ನದ ಕುರಿತು ಸಂಪೂರ್ಣ ಶ್ರೇಣಿಯ ಮಾಹಿತಿ ಪರ್ಯಾಯಗಳನ್ನು ಒದಗಿಸುವುದು ತುಂಬಾ ಒಳ್ಳೆಯದು. ಅಂತರ್ಜಾಲದ ಮೂಲಕ ಸಾರ್ವಜನಿಕರನ್ನು ಆಕರ್ಷಿಸುವ ಅತ್ಯುತ್ತಮ ಮಾರ್ಗವೆಂದರೆ ಅತ್ಯಂತ ಆಕರ್ಷಕವಾದ ವೆಬ್ ಪುಟವನ್ನು ರಚಿಸುವುದು, ಅಲ್ಲಿ ಸಾರ್ವಜನಿಕರಿಗೆ ಉತ್ಪನ್ನದ ಮೇಲೆ ಕೊಂಡಿಯಾಗಿರಲು ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ನೀಡಲಾಗುತ್ತದೆ. ಈ ಪುಟಗಳಲ್ಲಿ ನೀವು ಹೆಚ್ಚು ಕೆಲಸ ಮಾಡುತ್ತೀರಿ, ಫಲಿತಾಂಶವು ಉತ್ತಮವಾಗಿರುತ್ತದೆ ಮತ್ತು ಅವುಗಳು ಆನ್ಲೈನ್ ಟ್ರೆಂಡ್ಗಳಾಗಿ ತಮ್ಮನ್ನು ತಾವು ಇರಿಸಿಕೊಳ್ಳುತ್ತವೆ.

**ಸಂಪರ್ಕದ ಇತರೆ ಜಾಲಗಳು:-**

ವರದಿಗಾರರು, ದೂರದರ್ಶನ ಕಾರ್ಯಕ್ರಮಗಳಲ್ಲಿ ಸಂದರ್ಶಕರು, ನೆಟ್ವರ್ಕ್‌ಗಳಲ್ಲಿ ಬ್ಲಾಗ್‌ಗಳು, ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿರುವ ಇಲಾಖೆಗಳು(ಉದಾ:ರೈಲು,ಬಸ್) ಮತ್ತು ಹೆಚ್ಚಿನ ಪ್ರಭಾವ ಹೊಂದಿರುವ ವ್ಯಕ್ತಿಗಳಂತಹ ಪ್ರಮುಖ ಮಾಹಿತಿ ಮತ್ತು ಸಂಪರ್ಕಗಳ ಪಟ್ಟಿಯನ್ನು ಹೊಂದಲು ಸಾಧ್ಯವಾಗುತ್ತದೆ, ಕೆಲವು ರೀತಿಯಲ್ಲಿ ವಿವಿಧ ಪ್ರದೇಶಗಳಲ್ಲಿ ಬ್ರ್ಯಾಂಡ್ನ ಎಲ್ಲಾ ಜಾಹೀರಾತು ಕಾರ್ಯಗಳನ್ನು ಹೆಚ್ಚು ಬಲಪಡಿಸುತ್ತದೆ. ಇದೆಲ್ಲವೂ ಒಂದು ರೀತಿಯ ಬಹು ವಿಧವಾದ ವಿನಿಮಯವಾಗಿದೆ, ಅಲ್ಲಿ ಅನೇಕ ಸಾಮಾನ್ಯ ಅಂಶಗಳನ್ನು ಹೇಗಾದರೂ ರಚಿಸಲಾಗುತ್ತದೆ, ಮಾರ್ಕೆಟಿಂಗ್ ಮತ್ತು ಸಾರ್ವಜನಿಕ ಸಂಬಂಧಗಳ ಮಟ್ಟದಲ್ಲಿ ಬ್ರ್ಯಾಂಡ್ನ ಉತ್ತಮ ಸಾರ್ವಜನಿಕ ಸಂಪರ್ಕವನ್ನು ಸ್ಥಾಪಿಸುವ ಸಲುವಾಗಿ ಈವೆಂಟ್ಗಳನ್ನು ರಚಿಸಲಾಗುತ್ತದೆ.

**ಆಡಿಯೋವಿಶುವಲ್ ಮೂಲಕ ಸಾರ್ವಜನಿಕ ಸಂಬಂಧಗಳ ನಿರ್ವಹಣೆ**

ದೃಶ್ಯ ಮಾಧ್ಯಮವು ಸಾರ್ವಜನಿಕ ಸಂಪರ್ಕ ಸಾಧನಗಳನ್ನು ಬಳಸಲು ಅತ್ಯಂತ ವಿಶ್ವಾಸಾರ್ಹ ವೇದಿಕೆಗಳಿಂದ ನಿರೂಪಿಸಲ್ಪಟ್ಟಿದೆ, ಸಂದರ್ಶನಗಳಿಂದ ಇಂಟರ್ನೆಟ್ ಮಾಧ್ಯಮದವರೆಗೆ, ಈ ವಿಭಾಗದಲ್ಲಿ, ಮತ್ತಷ್ಟು ಉಪಯೋಗ ಪಡೆದುಕೊಳ್ಳಬಹುದು. ಲಭ್ಯವಿರುವ ಪತ್ರಕರ್ತರನ್ನು ಸಂಪರ್ಕಿಸಿ ಇದರಿಂದ ನೀವು ಅವರಿಗೆ ನೀಡಬಹುದಾದ ಯಾವುದೇ ಈವೆಂಟ್ ಅನ್ನು ಅವರು ಕವರ್ ಮಾಡಬಹುದು. ಸಾಮಾಜಿಕ ನೆಟ್ವರ್ಕ್‌ಗಳಲ್ಲಿ ಪೋಸ್ಟ್‌ಗಳ ವಿಷಯದಂತಹ ವರ್ಗಗಳ ಮೂಲಕ ಪತ್ರಕರ್ತರನ್ನು ಹುಡುಕಲು ಸಾಧ್ಯವಾಗುವ ಪ್ರಯೋಜನವನ್ನು ನೀಡುತ್ತದೆ. ಸಾರ್ವಜನಿಕ ಸಮಾರಂಭದಲ್ಲಿ ಪತ್ರಕರ್ತರೊಬ್ಬರು ಬ್ರ್ಯಾಂಡ್ ಅನ್ನು ಪ್ರಸ್ತಾಪಿಸಿದಾಗ ತಾವು ತಮ್ಮ ಉತ್ಪನದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿ ಹಾಗೂ ಮಾಧ್ಯಮದಲ್ಲಿ ಹೆಚ್ಚಿನ ವ್ಯಾಪ್ತಿಯನ್ನು ಹೊಂದಲು ನೀವು ಮಾಧ್ಯಮ ವಿಭಾಗಗಳನ್ನು ಸಹ ಆಯೋಜಿಸಬಹುದು. ಹೆಚ್ಚಿನ ಸಂಖ್ಯೆಯ ಬ್ಲಾಗರ್ಗಳನ್ನು ಅವರಿಗೆ ಸೂಕ್ತವಾದವುಗಳನ್ನು ಪತ್ತೆಹಚ್ಚಲು ವಿವಿಧ ವರ್ಗಗಳಾಗಿ ವರ್ಗೀಕರಿಸಲು ಸಾಧ್ಯವಾಗುತ್ತದೆ.

**ಉಪಸಂಹಾರ:**

ಇಂದಿನ ಪೈಪೋಟಿ ಯುಗದಲ್ಲಿ ಸಾರ್ವಜನಿಕ ಸಂಬಂಧಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಕಂಪನಿಗಳಿಗೆ ನಿರ್ವಹಿಸುವಂತೆ ಸಹಕಾರ ಸಂಸ್ಥೆಗಳು ಕೂಡ ಉತ್ತಮ ಸಾರ್ವಜನಿಕ ಸಂಬಂಧವನ್ನು ನಿರ್ವಹಿಸಲು ಸಾಧ್ಯವಾಗುತ್ತದೆ.

ಹೆಚ್ಚು ಹಣ ವೆಚ್ಚ ಮಾಡದೇ ಇರುವಂತಹ ಪರಿಕರಗಳನ್ನು ಸದ್ವಿನಿಯೋಗ ಮಾಡಿಕೊಂಡು ಸಹಕಾರ ಸಂಸ್ಥೆಗಳು ಉತ್ತಮ ಸಾರ್ವಜನಿಕ ಸಂಪರ್ಕವನ್ನು ಹೊಂದಿದಾಗ ಸಹಕಾರ ಸಂಸ್ಥೆಗಳ ಅಭಿವೃದ್ಧಿ ಸಾಧ್ಯವಾಗುತ್ತದೆ.

# ಸಹಕಾರದಿಂದ ಸಮೃದ್ಧಿಯ ಅರಿವು ಮೂಡುತ್ತಿದೆ (Realizing Sahakar Se Samriddhi)

**- ಶ್ರೀ ಅಮಿತ್ ಶಾ, ಕೇಂದ್ರ ಗೃಹ ಹಾಗೂ ಸಹಕಾರ ಸಚಿವರು, ಭಾರತ ಸರ್ಕಾರ**

**ಮೂಲ : ದಿ ಕೋಆಪರೇಟರ** **ಅನುವಾದ : ಶ್ರೀಮತಿ ದಿವ್ಯ.ಟಿ., ಹಿರಿಯ ಸಹಾಯಕಿ, ಕರಾಸೌಸಂಸನಿ., ಬೆಂಗಳೂರು.**

'ಸಹಕಾರ'ವು ಮಾನವ ನಾಗರೀಕತೆಯ ಎರಡು ಪ್ರಮುಖ ತತ್ವಗಳನ್ನು ಒಳಗೊಂಡಿದೆ 'ಸಹ್' ಮತ್ತು 'ಕಾರ್ಯ' ಅಂದರೆ ಎಲ್ಲವನ್ನು ಒಳಗೊಳ್ಳುವ ವಿಧಾನವನ್ನು ಅನುಸರಿಸುವ ಫಲಿತಾಂಶ-ಆಧಾರಿತ ಚಟುವಟಿಕೆಗಳ ಸಾಧನೆ. ಸಹಕಾರಿ ಸಂಸ್ಥೆಗಳು ತಳಮಟ್ಟದವರೆಗೂ ಅಗತ್ಯವಿರುವ ಸರಕು ಮತ್ತು ಸೇವೆಗಳನ್ನು ತಲುಪಿಸಲು ಹಾಗೂ ಸುಸ್ಥಿರ ಮತ್ತು ಗುಣಮಟ್ಟ ಬೆಳವಣಿಗೆಗಳನ್ನು ಖಚಿತಪಡಿಸಿಕೊಳ್ಳಲು ಅಪಾರ ಸಾಮರ್ಥ್ಯವನ್ನು ಹೊಂದಿವೆ. ಸ್ವಾತಂತ್ರ್ಯ ಗಳಿಸಿದ ಏಳು ದಶಕಗಳಲ್ಲಿ ರಾಜ್ಯಗಳಾದ್ಯಂತ ಸಹಕಾರಿಗಳ ಓರೆಯಾದ ವಿತರಣೆಗೆ ಸಾಕ್ಷಿಯಾಗಿದೆ, ಇದು ಸಹಕಾರ ಚಳುವಳಿಯ ವಿಸ್ತರಣೆಗೆ ಅಪಾರ ವ್ಯಾಪ್ತಿಯನ್ನು ಸೂಚಿಸುತ್ತದೆ. ಭಾರತದ ಐದು ಟ್ರಿಲಿಯನ್ ಡಾಲರ್ ಆರ್ಥಿಕತೆಯ ಮೇಲೆ ಸಹಕಾರಿ ಸಂಸ್ಥೆಗಳ ಕೊಡುಗೆಯು ಗುಣಾತ್ಮಕ ಪರಿಣಾಮವನ್ನು ಬೀರುತ್ತದೆ ಎಂಬುದು ನಮ್ಮ ಪ್ರಧಾನ ಮಂತ್ರಿಯವರ ದೃಷ್ಟಿಯಾಗಿದೆ. ಸಮುದಾಯ ಮಟ್ಟದಲ್ಲಿ ಕೃಷಿ, ಉತ್ಪಾದನೆ ಮತ್ತು ಸೇವಾ ವಲಯಗಳ ಬೇಡಿಕೆಗಳನ್ನು ಪೂರೈಸಲು ಸಹಕಾರ ಸಂಸ್ಥೆಗಳನ್ನು ವಿವಿಧೋದ್ದೇಶ ಮತ್ತು ಬಹು ಆಯಾಮದ ಸಮುದಾಯ ವ್ಯವಹಾರ ಘಟಕಗಳಾಗಿ ಪರಿವರ್ತಿಸುವ ಸಮಯ ಬಂದಿದೆ. ಭಾರತದಲ್ಲಿ ಸಹಕಾರಿ ಅಭಿವೃದ್ಧಿಗೆ ಎಲ್ಲವನ್ನೊಳಗೊಂಡ ಸಾಮಾಜಿಕ-ಆರ್ಥಿಕ ಪ್ರಗತಿಗೆ ತ್ವರಿತ, ಸಮಯಬದ್ಧ ಮತ್ತು ಸಮಗ್ರ ಹಾಗೂ ಸಮಾಲೋಚನಾ ಕ್ರಿಯಾ ಯೋಜನೆಯ ಅಗತ್ಯವಿದೆ. ಈ ಕಾರ್ಯವು ಕಷ್ಟವೆಂದು ತೋರುತ್ತದೆ, ಆದರೆ ಸಾಧಿಸಬಹುದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸಹಕಾರಿ ನಾಯಕರು ಮತ್ತು ಒಕ್ಕೂಟ ಮುಖ್ಯಸ್ಥರ ಸಂಚಿತ ಪ್ರಯತ್ನಗಳಿಂದಾಗಿ ನಿಸ್ಸಂದೇಹವಾಗಿ 'ಸಹಕಾರದಿಂದ ಸಮೃದ್ಧಿ' ಗುರಿಯನ್ನು ಸಾಧಿಸಲು ನಮ್ಮೆಲ್ಲರನ್ನು ಹತ್ತಿರಕ್ಕೆ ತರುತ್ತದೆ.

'ಸಹಕಾರ'ವು ನಮ್ಮ ರಾಷ್ಟ್ರದ ಶತಮಾನಗಳ ತತ್ವಶಾಸ್ತ್ರವಾಗಿ ಉಳಿದಿದೆ. ಭಾರತವು ಸಹಕಾರಿ ನೇತೃತ್ವದಲ್ಲಿ ಎಲ್ಲವನ್ನು ಒಳಗೊಂಡ ಸಾಮಾಜಿ-ಕ-ಆರ್ಥಿಕ ಪ್ರಗತಿಗಾಗಿ ಶ್ರಮಿಸುತ್ತದೆ. ಸಹಕಾರ ಕ್ಷೇತ್ರವು ತನ್ನ ಸದಸ್ಯ ಆಧಾರಿತ ಮತ್ತು ಎಲ್ಲವನ್ನು ಒಳಗೊಳ್ಳುವ ವಿಧಾನದೊಂದಿಗೆ ದೇಶದ ಒಟ್ಟಾರೆ ಆರ್ಥಿಕ ಅಭಿವೃದ್ಧಿಯಲ್ಲಿ ಯಾವಾಗಲೂ ಮಹತ್ವದ ಪಾತ್ರವನ್ನು ವಹಿಸಿದೆ. 'ಸಹಕಾರ'ವು ಮಾನವ ನಾಗರೀಕತೆಯ ಎರಡು ಪ್ರಮುಖ ತತ್ವಗಳನ್ನು ಒಳಗೊಂಡಿದೆ 'ಸಹ್' ಮತ್ತು 'ಕಾರ್ಯ' ಅಂದರೆ ಎಲ್ಲವನ್ನು ಒಳಗೊಳ್ಳುವ ವಿಧಾನವನ್ನು ಅನುಸರಿಸುವ ಫಲಿತಾಂಶ-ಆಧಾರಿತ ಚಟುವಟಿಕೆಗಳ ಸಾಧನೆ. ಕೃಷಿ ಮತ್ತು ಕೈಗಾರಿಕಾ ಒಳ ಹರಿವು ಸೇವೆಗಳು, ನೀರಾವರಿ, ಮಾರ್ಕೆಟಿಂಗ್, ಸಂಸ್ಕರಣೆ ಹಾಗೂ ಸಮುದಾಯ ಸಂಗ್ರಹಣೆಗಳಂತಹ ಇತ್ಯಾದಿ ಮತ್ತು ಕೋಳಿ ಸಾಕಣೆ, ಮೀನುಗಾರಿಕೆ, ತೋಟಗಾರಿಕೆ, ಡೈರಿ, ಜವಳಿ, ಗ್ರಾಹಕ, ಹೌಸಿಂಗ್, ಆರೋಗ್ಯದಂತಹ ಇತರ ಚಟುವಟಿಕೆಗಳಂತಹ ವಿವಿಧ ನಿರ್ಣಾಯಕ ಮೂಲಸೌಕರ್ಯಗಳಿಗೆ ಸಮಯೋಚಿತ, ಸಮಪರ್ಕ ಮತ್ತು ಮನೆಯ ಬಾಗಿಲಿಗೆ ತಲುಪಿಸುವುದರ ಮೂಲಕ ಸರಕು ಮತ್ತು ಸೇವಾ ಬೆಂಬಲಗಳ ಹರಿವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಮಾನ ಮತ್ತು ಸಂಘಟಿತ ಪ್ರಯತ್ನಗಳನ್ನು ಖಚಿತಪಡಿಸಿಕೊಳ್ಳಲು ಅಗತ್ಯವಾದ ಸಾಮರ್ಥ್ಯವನ್ನು ಹೊಂದಿದೆ.

ಪ್ರಸ್ತುತ ಭಾರತವು ಸಾಮಾಜಿಕ ಮತ್ತು ಆರ್ಥಿಕ ನೀತಿಯ ಅತ್ಯಗತ್ಯ ಸಾಧನವಾಗಿ ತನ್ನ ಹಿಂದಿನ ವೈಭವವನ್ನು ಆಚರಿಸುತ್ತಿದೆ ಮತ್ತು ವರ್ಧಿತ ಜೀವನೋಪಾಯದ ಭದ್ರತೆ ಹಾಗೂ ಉದ್ಯೋಗದೊಂದಿಗೆ ಒಟ್ಟಾರೆ ಆರ್ಥಿಕ ಸಮೃದ್ಧಿಗೆ ಕಾರಣವಾಗುವ ಪ್ರಯತ್ನಗಳನ್ನು ಬಲಪಡಿಸುವಲ್ಲಿ ಅಂತರ್ಗತ ಪ್ರಯೋಜನಗಳನ್ನು ಹೊಂದಿದೆ. ಅಗತ್ಯವಿರುವ ಸರಕುಗಳು ಮತ್ತು ಸೇವೆಗಳನ್ನು ತಳಮಟ್ಟದವರೆಗೆ ತಲುಪಿಸಲು ಮತ್ತು ಸುಸ್ಥಿರ ಹಾಗೂ ಗುಣಮಟ್ಟದ ಬೆಳವಣಿಗೆಯ ವಾತಾವರಣವನ್ನು ಖಚಿತಪಡಿಸಿಕೊಳ್ಳಲು ಸಹಕಾರಿ ಸಂಸ್ಥೆಗಳು ಅಪಾರ ಸಾಮರ್ಥ್ಯವನ್ನು ಹೊಂದಿವೆ. ಕೊರತೆ ಮುಕ್ತ ಮತ್ತು ಸಾಮಾಜಿಕ-ಆರ್ಥಿಕ ಸಮೃದ್ಧ ಪರಿಸರವನ್ನು ನಿರ್ಮಾಣ ಮಾಡಲು ಸಾಧನೆಗಳು ಮತ್ತು ಮಾರ್ಗಗಳನ್ನು ಅನ್ವೇಷಿಸುತ್ತಿದ್ದೇವೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಮತ್ತು ಭಾರತ@75ರ ಸಂಭ್ರಮದಲ್ಲಿ, ಸಹಕಾರದ ಕಾರ್ಯವಿಧಾನದ ಮೂಲಕ ವಿಶ್ವ ಆರ್ಥಿಕ ನಾಯಕರಲ್ಲಿ ಒಬ್ಬರಾಗಲು ನಾವು ಸಿದ್ಧರಾಗಬೇಕು. ಸಹಕಾರಿ ಸಂಸ್ಥೆಗಳು ಸಾರ್ವತ್ರಿಕವಾಗಿ ಅಂಗೀಕ-ರಿಸಲ್ಪಟ್ಟಿವೆ, ನಮ್ಮ ಸಹಕಾರಿ ಸಂಸ್ಥೆಗಳ ಶಕ್ತಿಯನ್ನು ಶ್ಲಾಘಿಸಬೇಕು ಮತ್ತು ಗುರುತಿಸಬೇಕು. ಬಂಡವಾಳ-ಕೇಂದ್ರಿತ ಸಂಸ್ಥೆಗಳಿಗೆ ಹೋಲಿಸಿದರೆ ಇವು ಜನ-ಕೇಂದ್ರಿತವಾಗಿದೆ ಮತ್ತು ಸಾಮೂಹಿಕ ಪ್ರಯತ್ನಗಳ ಮೂಲಕ ಒಗ್ಗಟ್ಟನ್ನು ತರುತ್ತದೆ, ಸಮುದಾಯ ವ್ಯವಹಾರ ಪ್ರಜ್ಞೆಯನ್ನು ಉಂಟು ಮಾಡುತ್ತದೆ ಮತ್ತು ಸಾಮಾಜಿಕ ಬಾಂಧವ್ಯವನ್ನು ಹೆಚ್ಚಿಸುತ್ತದೆ. ಸಹಕಾರಿ ಸಂಸ್ಥೆಗಳು ಏಳು ಸುವರ್ಣ ತತ್ವಗಳಿಂದ ಆಡಳಿತವನ್ನು ನಡೆಸುತ್ತಿದೆ.

**ಹೊಸ ಸಚಿವಾಲಯದ ರಚನೆ – ಐತಿಹಾಸಿಕ ಕ್ರಮ (Creation of a New Ministry - A Historic Move) :**

ಸಹಕಾರದಲ್ಲಿ ಭಾರತವು ಶ್ರೀಮಂತ ಇತಿಹಾಸವನ್ನು ಹೊಂದಿದ್ದು, ಕಳೆದ 74 ವರ್ಷಗಳ ಸ್ವತಂತ್ರ್ಯ ಆಡಳಿತ ವ್ಯವಸ್ಥೆಯಲ್ಲಿ ಈ ವಲಯದ ಅಂತರ್ಗತ ಸಾಮಾಜಿಕ-ಆರ್ಥಿಕ ಸಾಮರ್ಥ್ಯವನ್ನು ಪರಿಗಣಿಸಿ ರಾಷ್ಟ್ರೀಯ ಮಟ್ಟದಲ್ಲಿ ಪ್ರತ್ಯೇಕ ಆಡಳಿತ ರಚನೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಸಂದರ್ಭದಲ್ಲಿ, ಭಾರತದ ಸಹಕಾರ ಕ್ಷೇತ್ರಕ್ಕೆ ಜುಲೈ 6, 2021 ಐತಿಹಾಸಿಕ ದಿನವಾಗಿ ಶಾಶ್ವತವಾಗಿ ಉಳಿಯುತ್ತದೆ. ಅಂದು ದೇಶದ ಗೌರವಾನ್ವಿತ ಪ್ರಧಾನಮಂತ್ರಿಯವರಾದ ಶ್ರೀ ನರೇಂದ್ರ ಮೋದಿಜಿರವರು ದೃಢ ನಿರ್ಧಾರವನ್ನು ಕೈಗೊಂಡರು. ಭಾರತದಲ್ಲಿ ಮೊದಲ ಬಾರಿಗೆ ಸಹಕಾರಿ ಆಂದೋಲನದ ಬೆಳವಣಿಗೆಯನ್ನು ಭಾರತದಾದ್ಯಂತ ವಿಸ್ತರಿಸಲು

ಸಹಕಾರ ಸಚಿವಾಲಯವನ್ನು ಸ್ಥಾಪಿಸಲಾಯಿತು. ಪ್ರತ್ಯೇಕ ಸಚಿವಾಲಯವನ್ನು ರಚಿಸುವ ಮೂಲಕ ಸಹಕಾರ ಕ್ಷೇತ್ರದ ನಿರ್ಣಾಯಕ ವಿಷಯಗಳಿಗೆ ಸರಿಯಾದ ನೀತಿ ಮನ್ನಣೆಯನ್ನು ನೀಡಿ, ದೀರ್ಘಾವಧಿಯ ಬೇಡಿಕೆಯನ್ನು ಈಡೇರಿಸಲು ಕ್ರಮವಿಡಲಾಗಿದೆ. ಸಹಕಾರಿ ಸಂಸ್ಥೆಗಳಿಗೆ ಬೆಂಬಲ ನೀಡುವ ಮತ್ತು ಸಕ್ರಿಯಗೊಳಿಸುವ ನೀತಿಯ ಚೌಕಟ್ಟನ್ನು ಒದಗಿಸುವಲ್ಲಿ ಸಹಕಾರ ಸಚಿವಾಲಯದ ಉದ್ದೇಶಗಳು ಬಹಳ ಸ್ಪಷ್ಟವಾಗಿವೆ.

**ಸಮಾನವಾದ ಹರಡುವಿಕೆ ಮತ್ತು ವ್ಯಾಪ್ತಿಯನ್ನು ಖಚಿತಪಡಿಸಿಕೊಳ್ಳುವುದು (Ensuring Equitable Spread and outreach) :**

'ಸಹಕಾರದಿಂದ ಸಮೃದ್ಧಿ' ಧ್ಯೇಯವು ಸಹಕಾರಿ ಸಂಸ್ಥೆಗಳ ಸಮಾನ ಮತ್ತು ವ್ಯಾಪಕ ಬೆಳವಣಿಗೆಯನ್ನು ಖಾತರಿಪಡಿಸುವ ಗುರಿಯನ್ನು ಹೊಂದಿದೆ. ಆರಂಭಿಕ ಪ್ರಯತ್ನವಾಗಿ ಭಾರತದ ಪ್ರತಿಯೊಂದು ಗ್ರಾಮವು ಪ್ರಾಥಮಿಕ ಸಹಕಾರ ಸಂಘ, ಪ್ರಾಥಮಿಕ ಸಹಕಾರ ಪತ್ತಿನ ಸಂಘವನ್ನು ಹೊಂದಿರಬೇಕು ಮತ್ತು ಸಮೀಪದ ಸಹಕಾರಿ ಬ್ಯಾಂಕ್‌ಗೆ ಸಂಪರ್ಕವನ್ನು ಹೊಂದಿರಬೇಕು. ಸಾಧ್ಯವಾದಲ್ಲೆಲ್ಲಾ, ಸಹಕಾರಿ ಸಂಸ್ಥೆಗಳು ವಿಶಾಲ ವ್ಯಾಪ್ತಿಯನ್ನು ಹೊಂದಿರಬೇಕು ಮತ್ತು ಸಾಮರ್ಥ್ಯವಿರುವಲ್ಲೆಲ್ಲಾ ಅವುಗಳನ್ನು ಉತ್ತೇಜಿಸಬೇಕು, ರೂಪಿಸಬೇಕು ಮತ್ತು ಬೆಳೆಸಬೇಕು. ಮೀನುಗಾರಿಕೆ, ಕೃಷಿ ಸಂಸ್ಕರಣೆ, ಪ್ರಾಥಮಿಕ ಉತ್ಪಾದನೆ, ವಸತಿ ಮತ್ತು ನಿರ್ಮಾಣ ಕ್ಷೇತ್ರಗಳಲ್ಲಿ ಹೆಚ್ಚಿನ ಸಂಖ್ಯೆಯ ಸಹಕಾರ ಸಂಸ್ಥೆಯನ್ನು ಉತ್ತೇಜಿಸುವ ದೊಡ್ಡ ಸಾಧ್ಯತೆ ಇದೆ. ಹಾಗೆಯೇ, ಆರೋಗ್ಯ, ಔಷಧ, ವಿಮೆ ಮತ್ತು ಜವಳಿ ಮುಂತಾದ ಇತರ ಕೆಲವು ಕ್ಷೇತ್ರಗಳಲ್ಲಿ ಅಪಾರ ಸಾಮರ್ಥ್ಯವಿದೆ. ಸಹಕಾರಿ ವ್ಯವಹಾರ ಮಾದರಿಯನ್ನು ಖಾದಿ ಹಾಗೂ ಗ್ರಾಮೋದ್ಯಮಗಳಲ್ಲಿ ತೊಡಗಿಸಬಹುದು ಮತ್ತು ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಜ್ಯಗಳಲ್ಲಿ ಆದಾಯ ಮತ್ತು ಉದ್ಯೋಗದ ಬೆಳವಣಿಗೆಯಲ್ಲಿ ಸಮಾನತೆಯನ್ನು ತರಬಹುದು.

**ಸಹಕಾರ ಮತ್ತು ಆರ್ಥಿಕ ಸಬಲೀಕರಣ (Cooperation and Economic Empowerment) :**

ಸಹಕಾರ ಮಾದರಿಯು ನಮ್ಮ ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲವಾಗಿರುವ ವರ್ಗಗಳನ್ನು ಆರ್ಥಿಕ ಬೆಳವಣಿಗೆಯಲ್ಲಿ ಮುಂಚೂಣಿಗೆ ತರಬಹುದು ಮತ್ತು ವ್ಯಾಪಕವಾದ ಆರ್ಥಿಕ ಸಮೃದ್ಧಿಯನ್ನು ಸೃಷ್ಟಿಸಬಹುದು. ಲಿಜ್ಜತ್ ಪಾಪಡ್, ಅಮೂಲ್ ಮತ್ತು ದಕ್ಷಿಣದ ರಾಜ್ಯಗಳಲ್ಲಿ ಕರ್ನಾಟಕ ಹಾಗೂ ಇತರ ಹಲವು ಸೇರಿದಂತೆ ಇತರ ಹಾಲಿನ ಸಹಕಾರಿ ಸಂಘಗಳು ಸಮಾಜದ ಅಂಚಿನಲ್ಲಿರುವ ವರ್ಗಗಳ ಲಕ್ಷಾಂತರ ಜನರಿಗೆ ಆರ್ಥಿಕ ಸಮೃದ್ಧಿಯನ್ನು ತಂದ ಉದಾಹರಣೆಗಳಿವೆ. ದಿವಂಗತ ತ್ರಿಭುವಂದಾಸ್ ಪಟೇಲ್ ಪ್ರಾರಂಭಿಸಿದ ಸಣ್ಣ ಡೈರಿ ಸೊಸೈಟಿ ಇಂದು ಭಾರತದ ಅತಿದೊಡ್ಡ ಆಹಾರ ಮತ್ತು ಎಫ್‌ಎಂಸಿಜಿ ದೈತ್ಯ ಅಮೂಲ್ ಆಗಿ ರೂಪಾಂತರಗೊಂಡಿದೆ ಮತ್ತು ಲಕ್ಷಾಂತರ ಮಹಿಳೆಯರ ಜೀವನವನ್ನು ಬದಲಾಯಿಸಿದೆ. ಇದು ಮಹಿಳಾ ಸಬಲೀಕರಣದ ದ್ಯೋತಕವಾಗಿದ್ದು, ಇಲ್ಲಿ ರೂ.60,000 ಕೋಟಿಗಳನ್ನು ನೇರವಾಗಿ ಮಹಿಳಾ ರೈತರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗುತ್ತಿದೆ.

**ಸಹಕಾರ ಕ್ಷೇತ್ರದ ಮೂಲಕ ಹೊಸ ಕ್ಷೇತ್ರದಲ್ಲಿ ಸಾಹಸೋದ್ಯಮಗಳನ್ನು ಕೈಗೊಳ್ಳುವುದು (Venturing New Areas through Cooperation) :**

ವಿಮೆ, ಆರೋಗ್ಯ, ಪ್ರವಾಸೋದ್ಯಮ, ಸಂಸ್ಕರಣೆ, ಸಂಗ್ರಹಣೆ, ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳು ಮುಂತಾದ ಹೊಸ ಮತ್ತು ವಿಕಾಸಗೊಳ್ಳುತ್ತಿರುವ ಕ್ಷೇತ್ರಗಳಲ್ಲಿ ಹೆಚ್ಚಿನ ಸಂಖ್ಯೆಯ ಸಹಕಾರ ಸಂಸ್ಥೆಗಳ ಹೊರಹೊಮ್ಮುವಿಕೆಯನ್ನು ಖಚಿತಪಡಿಸಿಕೊಳ್ಳುವುದು ಅಗತ್ಯವಾಗಿದೆ. ಸಹಕಾರ ಚಳುವಳಿಯು ಎಲ್ಲಾ ಹಳ್ಳಿಗಳನ್ನು ತಲುಪಬೇಕು ಮತ್ತು ಸಾಮೂಹಿಕ ಚಳುವಳಿಯಾಗಿ ಮಾರ್ಪಡಬೇಕು. ಗೌರವಾನ್ವಿತ ಪ್ರಧಾನ ಮಂತ್ರಿಗಳು ಅಮೃತ ಮಹೋತ್ಸವದ ವರ್ಷದಲ್ಲಿ ಎಲ್ಲಾ ಸಚಿವಾಲಯಗಳು ತಮಗಾಗಿ ಒಂದು ಗುರಿಯನ್ನು ನಿಗದಿಪಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ. ನಮ್ಮ ಸ್ವಾತಂತ್ರ್ಯದ 75ನೇ ವರ್ಷದಲ್ಲಿ ನಮಗಾಗಿ ಗುರಿಗಳನ್ನು ಹೊಂದಿಸುವ ಸಮಯ ಬಂದಿದೆ. ಮುಂದಿನ 10 ವರ್ಷಗಳಲ್ಲಿ ಪ್ರತಿ ಗ್ರಾಮವು ಹಾಲಿನ ಸಹಕಾರ ಸಂಸ್ಥೆ ಮತ್ತು ಕ್ರೆಡಿಟ್ ಸಹಕಾರ ಸಂಸ್ಥೆಯನ್ನು ಹೊಂದುವ ಗುರಿಯನ್ನು ಹೊಂದೋಣ, ಅದು ಕಾರ್ಯಸಾಧ್ಯವಾಗಿರುತ್ತದೆ ಮತ್ತು ಕ್ರಿಯಾತ್ಮಕವಾಗಿರುತ್ತದೆ. ಪ್ರತಿಯೊಂದು ಗ್ರಾಮವು ಕೆಲವು ಪ್ರಾಥಮಿಕ ಸಹಕಾರ ಸಂಸ್ಥೆಯನ್ನು ಹೊಂದಿರಬೇಕು ಅಥವಾ ಸಮುದಾಯದಲ್ಲಿಯೇ ಇತರ ಸಹಕಾರಿ ವ್ಯವಹಾರ ಚಟುವಟಿಕೆಗಳನ್ನು ಹರಡಬೇಕು ಎಂಬ ಗುರಿಯನ್ನು ನಾವು ನಿಗದಿಪಡಿಸಿಕೊಳ್ಳೋಣ. ಭಾರತವು ಇದನ್ನು ಮಾಡಲು ಸಾಧ್ಯವಾದರೆ, ಈ ಘಟಕಗಳು ರಾಷ್ಟ್ರೀಯ ಆರ್ಥಿಕತೆಗೆ ಗಣನೀಯ ಕೊಡುಗೆಯನ್ನು ನೀಡುತ್ತದೆ ಮತ್ತು ಸಾಮಾನ್ಯವಾಗಿ ಹಿಂದುಳಿದಿರುವ ಲಕ್ಷಾಂತರ ಬಡ ಮತ್ತು ಅಂಚಿನಲ್ಲಿರುವ ವರ್ಗಗಳ ಜೀವನವನ್ನು ಸುಧಾರಿಸುತ್ತದೆ.

**ಪರಿಣಾಮಕಾರಿ ಸಹಕಾರಕ್ಕಾಗಿ ಸವಾಲುಗಳನ್ನು ಎದುರಿಸುವುದು (Meeting Challenges for Effective Cooperation) :**

ಸಹಕಾರ ಕ್ಷೇತ್ರವು ವೃತ್ತಿಪರತೆಯತ್ತ ಸಾಗಬೇಕಾಗಿದೆ ಮತ್ತು ಕಾರ್ಪೊರೇಟ್ ಆಡಳಿತದ ತತ್ವಗಳ ಮೇಲೆ ನಡೆಸಬೇಕಿದೆ. ನಮ್ಮ ದೇಶದಲ್ಲಿ ಇಫ್ಕೋ, ಅಮೂಲ್, ಇತ್ಯಾದಿಗಳಂತಹ ಅನೇಕ ಮಾದರಿಗಳಿವೆ, ಅವುಗಳು ಸಹಕಾರ ಮನೋಭಾವವನ್ನು ಇಟ್ಟುಕೊಂಡಿವೆ ಮತ್ತು ಕಾರ್ಪೊರೇಟ್ ಆಡಳಿತದ ಮೌಲ್ಯಗಳ ಶಕ್ತಿಯನ್ನು ತುಂಬಿವೆ. ಅಖಂಡವಾಗಿ ಸಹಕಾರಿ ಮೌಲ್ಯಗಳು ಮತ್ತು ಕಾರ್ಪೊರೇಟ್ ಆಡಳಿತದ ವಿವೇಚನಾಯುಕ್ತ ಸಮ್ಮಿಶ್ರಣಕ್ಕೆ ಅನುಗುಣವಾಗಿ ನಾವು ಅಂತಹ ಮಾದರಿಗಳನ್ನು ನಿರ್ಮಿಸಬೇಕಾಗಿದೆ. ಇದು ಪಾರದರ್ಶಕತೆ, ಹೊಣೆಗಾರಿಕೆ, ವೃತ್ತಿಪರತೆ ಮತ್ತು ಉತ್ತಮ ಆಡಳಿತವನ್ನು ಖಚಿತಪಡಿಸುತ್ತದೆ. ಅಲ್ಲದೇ, ಸಹಕಾರಿ ಸಂಸ್ಥೆಗಳಿಗೆ ಉತ್ತಮ ಮೂಲಸೌಕರ್ಯ ಮತ್ತು ವ್ಯವಹಾರ ಸಾಲ ನೀಡಿಕೆ ಹಾಗೂ ದುಡಿಯುವ ಬಂಡವಾಳ ಮತ್ತು ಸ್ಥಾವರ ಹಾಗೂ ಯಂತ್ರೋಪಕರಣಗಳ ಅಗತ್ಯತೆಗಳನ್ನು ಪೂರೈಸುವ ಅಗತ್ಯವಿದೆ.

**ಸಂಯುಕ್ತ ಸಹಕಾರಿ ವ್ಯವಸ್ಥೆ – ಏಕೈಕ ಮಾರ್ಗ (Cooperative Federalism - the only Way) :**

97ನೇ ಸಾಂವಿಧಾನಿಕ ತಿದ್ದುಪಡಿಯು ಸಹಕಾರ ಕ್ಷೇತ್ರದ ಸವಾಲುಗಳನ್ನು ಎದುರಿಸಬಹುದಾದರೂ, ಕೇಂದ್ರ ಸರ್ಕಾರವು ದೇಶದ ಸಹಕಾರ ಚಳುವಳಿಯನ್ನು ಪರಿವರ್ತಿಸಲು ಶಕ್ತಗೊಳಿಸುವ ಪಾತ್ರವನ್ನು ವಹಿಸುತ್ತಿದೆ ಮತ್ತು ಕೇಂದ್ರ ಹಾಗೂ ರಾಜ್ಯಗಳ ನ್ಯಾಯವ್ಯಾಪ್ತಿಯು ನಮ್ಮ ಸಂವಿಧಾನದ

ಮೂಲಭೂತ ಅಂಶಗಳ ಪ್ರಕಾರ ಸ್ಪಷ್ಟವಾಗಿರಬೇಕು. ಮಲ್ಟಿಸ್ಟೇಟ್ ಕೋಆಪರೇಟಿವ್ ಸೊಸೈಟಿಯು ಕೇಂದ್ರದ ವಿಷಯವಾಗಿದೆ. ಆದರೆ, ರಾಜ್ಯ ಸಹಕಾರ ಸಂಘಗಳು ರಾಜ್ಯಗಳೊಂದಿಗೆ ಉಳಿಯುತ್ತವೆ. ರಾಜ್ಯಗಳೊಂದಿಗೆ ಸಂವಾದಗಳು, ಚರ್ಚೆಗಳು ಹಾಗೂ ಸಮಾಲೋಚನೆಗಳಲ್ಲಿ ತೊಡಗಿಸಿಕೊಳ್ಳುವುದು ಮತ್ತು ಸಹಕಾರಿಗಳಿಗೆ ಕಾನೂನು ಚೌಕಟ್ಟನ್ನು ರೂಪಿಸುವುದು ಸಹಕಾರ ಸಚಿವಾಲಯದ ಜವಾಬ್ದಾರಿಯಾಗಿದೆ.

**ಹೊಸ ಸಹಕಾರಿ ನೀತಿ ಯೋಜನೆ (Planning New Cooperation Policy) :**

ಭಾರತವು 8.5 ಲಕ್ಷ ಸಹಕಾರಿ ಸಂಸ್ಥೆಗಳನ್ನು ಹೊಂದಿದ್ದು, ಇದರಲ್ಲಿ 20 ಪ್ರತಿಶತ [1.77 ಲಕ್ಷ ಸಂಸ್ಥೆಗಳು] ಕ್ರೆಡಿಟ್ ಸಹಕಾರಿ ಸಂಸ್ಥೆಗಳಾಗಿವೆ. ಉಳಿದ 80 ಪ್ರತಿಶತವು ಸಾಲ ರಹಿತ ಸಹಕಾರ ಸಂಸ್ಥೆಗಳು ಅಂದರೆ ಮೀನುಗಾರಿಕೆ, ಡೈರಿ, ಉತ್ಪಾದಕರು, ಸಂಸ್ಕರಣೆ, ಗ್ರಾಹಕ, ಕೈಗಾರಿಕೆ, ಮಾರುಕಟ್ಟೆ, ಪ್ರವಾಸೋದ್ಯಮ, ಆಸ್ಪತ್ರೆ, ವಸತಿ, ಸಾರಿಗೆ, ಕಾರ್ಮಿಕ, ಕೃಷಿ, ಸೇವೆ, ಜಾನುವಾರು, ವಿವಿಧೋದ್ದೇಶ ಸಹಕಾರಿ ಸಂಸ್ಥೆಗಳು ಇತ್ಯಾದಿ. ಸುಮಾರು 96,000 ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳು (ಕಂಅ) ಭಾರತದ ಒಟ್ಟು ಹಳ್ಳಿಗಳ 91 ಪ್ರತಿಶತದಷ್ಟು ಹರಡಿಕೊಂಡಿವೆ, ಇದರಲ್ಲಿ 63,000 [65%] ಸಹಕಾರ ಸಂಘಗಳು ಸಕ್ರಿಯವಾಗಿವೆ ಮತ್ತು ಕಾರ್ಯಸಾಧ್ಯವಾಗಿದೆ. ಸಹಕಾರಿ ಸಂಸ್ಥೆಗಳಲ್ಲಿ ತಂತ್ರಜ್ಞಾನ ಅಭಿವೃದ್ಧಿಯು ಇಂದಿನ ಅಗತ್ಯವಾಗಿದೆ ಮತ್ತು ಕಂಅಗಳ ಗಣಕೀಕರಣವು ಅತ್ಯಗತ್ಯವಾಗಿದೆ.

ಸುಮಾರು 13 ಕೋಟಿ ರೈತರ ಮನೆಗಳಿಗೆ ನೇರವಾಗಿ ಸಹಕಾರಿ ಸಂಸ್ಥೆಗಳು ಸಂಪರ್ಕವನ್ನು ಹೊಂದಿವೆ. ಇದು ಸಹಕಾರ ಚಳುವಳಿಯ ಸಾಮರ್ಥ್ಯವನ್ನು ತೋರಿಸುತ್ತದೆ. ಸಹಕಾರ ನೀತಿಗಳು ಮತ್ತು ಕ್ರಮಗಳು, ವಲಯದ ಉಪಯೋಗಕ್ಕಾಗಿ ಸಹಕಾರಿ ಸಂಸ್ಥೆಗಳ ಈ ಬೃಹತ್ ಜಾಲದ ಮೇಲೆ ಪ್ರಭಾವ ಬೀರಬಹುದು. ಪುನರುಜ್ಜೀವನದ ಮೂಲಕ ಅವರ ಏಳಿಗೆ ಮತ್ತು ವ್ಯವಹಾರದ ಕಾರ್ಯಸಾಧ್ಯತೆಗಾಗಿ ಕೆಲಸ ಮಾಡಬೇಕಾಗಿದೆ. ಯೋಜನೆಗಳ ಮಧ್ಯಸ್ಥಿಕೆ, ನೀತಿ ಬೆಂಬಲ ಮತ್ತು ತಂತ್ರಜ್ಞಾನವನ್ನು ಒದಗಿಸುವುದರೊಂದಿಗೆ ಅವರನ್ನು ಸಬಲೀಕರಣಗೊಳಿಸಬೇಕಾಗಿದೆ. ದೇಶದ ಆರ್ಥಿಕತೆಯಲ್ಲಿ ಸಹಕಾರಿ ಸಂಸ್ಥೆಗಳ ಕೊಡುಗೆಯು ಅದ್ಭುತವಾಗಿದೆ. ಸಹಕಾರಿ ಕೃಷಿ ಹಣಕಾಸು ಪಾಲು ಶೇ.25, ರಸಗೊಬ್ಬರ ವಿತರಣೆ ಶೇ.35, ರಸಗೊಬ್ಬರ ಉತ್ಪಾದನೆ ಶೇ.25, ಸಕ್ಕರೆ ಉತ್ಪಾದನೆ ಶೇ.31, ಹಾಲು ಸಂಗ್ರಹಣೆ, ಉತ್ಪಾದನೆ ಮತ್ತು ಮಾರುಕಟ್ಟೆ ಶೇ.25, ಗೋಧಿ ಸಂಗ್ರಹಣೆ ಶೇ.13, ಭತ್ತ ಶೇ.20, ಮೀನು ಉತ್ಪಾದನೆ ಶೇ.21, ಇತ್ಯಾದಿ. ಈ ಬಲವಾದ ಅಡಿಪಾಯದ ಮೇಲೆ ಉತ್ಸಾಹ ಭರಿತ ಮತ್ತು ಸ್ಥಿತಿಸ್ಥಾಪಕತ್ವ ಸಹಕಾರ ಕ್ಷೇತ್ರವನ್ನು ನಿರ್ಮಿಸುವ ಅಗತ್ಯತೆ ಇದೆ. ಹೊಸ ಸಹಕಾರ ನೀತಿ ಮತ್ತು ಸರ್ಕಾರದ ಸೂಕ್ತ ಮಧ್ಯಸ್ಥಿಕೆಗಳ ಮೂಲಕ ಎಲ್ಲಾ ಹತ್ತು ಹಲವು ಅಡೆತಡೆಗಳು ಮತ್ತು ಅಡಚಣೆಗಳನ್ನು ಪರಿಹರಿಸಬೇಕಾಗಿದೆ. ಸಹಕಾರದಿಂದ ಸಮೃದ್ಧಿಯನ್ನು ಸಾಧಿಸಲು ಪ್ರಮುಖ ನೀತಿ ನಿಯತಾಂಕಗಳನ್ನು ಈ ಕೆಳಗಿನಂತೆ ಉಲ್ಲೇಖಿಸಲಾಗಿದೆ.

**ಸಹಕಾರದಿಂದ ಸಮೃದ್ಧಿ : ಏಳು ಪ್ರಮುಖ ನಿಯತಾಂಕಗಳು (The seven Vital Parameters)**

| 4 Ps | 3 Es |
|---|---|
| 1. ಜನರು ಸಹಕರಿಸುವ ಜನರು (People Cooperating People) | . ವ್ಯವಹಾರ ಮಾಡುವುದು ಸುಲಭ (Ease of Doing Business) |
| 2. ಜನರಿಂದ ಉತ್ಪಾದನೆ (Production by People) | 2. ಬದುಕಲು ಸುಲಭ (Ease of Living) |
| 3. ಲಾಭದ ಮೊದಲು ಜನರು (People before Profit) | 3. ಸುಲಭ ಸಹಕಾರ ಮತ್ತು ಅವಕಾಶಗಳಿಗೆ ಪ್ರವೇಶ (Ease of Cooperation and Access to Opportunities) |
| 4. ಉದ್ದೇಶದೊಂದಿಗೆ ಲಾಭ (Profit with Purpose) | |

**ಹೊಸ ಸಹಕಾರ ನೀತಿಯ ಆಯಾಮಗಳು (Dimensions of New Cooperation Policy) :**

ಸಹಕಾರದ ನೀತಿಯನ್ನು ಪರಿಶೀಲಿಸಲು ಇದು ಸಕಾಲವಾಗಿದೆ. ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಸಹಕಾರ ನೀತಿಯು 20 ವರ್ಷಗಳಷ್ಟು ಹಳೆಯದಾಗಿದೆ. ಮುಂದಿನ 8–9 ತಿಂಗಳೊಳಗೆ ಹೊಸ ಸಹಕಾರ ನೀತಿಯನ್ನು ರಚಿಸಲು ಸಹಕಾರ ಸಚಿವಾಲಯವು ಸಂವಾದಗಳು ಮತ್ತು ಸಮಾಲೋಚನೆಗಳನ್ನು ಪ್ರಾರಂಭಿಸಿದೆ. ಕಂಅಗಳಿಂದ ಅಪೆಕ್ಸ್ ಸಹಕಾರಿಗಳವರೆಗಿನ ಎಲ್ಲಾ ಸಹಕಾರ ಸಂಸ್ಥೆಗಳ ಅಗತ್ಯತೆಗಳನ್ನು ನೀತಿಯು ಪರಿಗಣಿಸುತ್ತದೆ. ಈ ನೀತಿಯು ಸಹಕಾರಿ ಸಂಸ್ಥೆಗಳನ್ನು ವಿಸ್ತರಿಸಲು ಮತ್ತು ಬೆಳವಣಿಗೆಯ ಹೊಸ ಆಯಾಮಗಳನ್ನು ಹೊರಹೊಮ್ಮಿಸಲು ವಾತಾರಣವನ್ನು ಸೃಷ್ಟಿಸುತ್ತದೆ. ನಾವು ಹೊಸ ಕ್ಷೇತ್ರಗಳನ್ನು ಅನ್ವೇಷಿಸಬೇಕಾಗಿದೆ ಮತ್ತು TEAM (ತಂಡ) ಸ್ಫೂರ್ತಿಯೊಂದಿಗೆ ಸಹಕಾರದಿಂದ ಕೆಲಸ ನಿರ್ವಹಿಸಬೇಕಾಗಿದೆ.

**ಸಹಕಾರ ವ್ಯವಸ್ಥೆಯ ಆಯಾಮಗಳನ್ನು ಗುರುತಿಸಿ – ವಿಭಾಗಿಸುವುದು (Decoding TEAM Cooperation)**

| | | |
|---|---|---|
| T | ಪಾರದರ್ಶಕತೆ (Transparency) | ಸಹಕಾರಿ ಸಂಸ್ಥೆಗಳು ತಮ್ಮ ಆಡಳಿತಕ್ಕಾಗಿ ಹೊಣೆಗಾರಿಕೆಯೊಂದಿಗೆ ಮತ್ತು ರಾಜಕೀಯಕ್ಕಿಂತ ಮೇಲೇರುವ ಮೂಲಕ ಉತ್ತಮ ಅಭ್ಯಾಸವನ್ನು ಅಳವಡಿಸಿಕೊಳ್ಳುವುದು. |
| E | ಸಬಲೀಕರಣ (Empowerment) | ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿಗಳನ್ನು ಸಬಲೀಕರಣಗೊಳಿಸುವುದು. |
| A | ಆತ್ಮನಿರ್ಭರ್ (ಸ್ವಾವಲಂಬನೆ) (Atmanirbhar ) (Self-Reliance) | ಸಮುದಾಯ ಮತ್ತು ಸಾಮೂಹಿಕ ಕ್ರಿಯೆಯ ಮೂಲಕ ಸ್ವಾವಲಂಬನೆ. |
| M | ಆಧುನೀಕರಣ (Modernization) | ಉತ್ಪಾದಕತೆ ಮತ್ತು ದಕ್ಷತೆಯನ್ನು ಹೆಚ್ಚಿಸಲು ಸರಿಯಾದ ತಂತ್ರಜ್ಞಾನವನ್ನು ತರುವುದು ಮತ್ತು ಅದರ ತ್ವರಿತ ಅಳವಡಿಕೆ. |

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 34
Licensed to post without Prepayment License No. PMG BG/WPP-384/2023-2025.

ಇಂದು, ಸಂಪೂರ್ಣ ಸಹಕಾರ ಕ್ಷೇತ್ರದ ಗಣಕೀಕರಣವು ಅನಿವಾರ್ಯವಾಗಿದೆ ಮತ್ತು ಈ ಕಾರ್ಯವು ಪೂರ್ಣಗೊಳ್ಳುವವರೆಗೂ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ದಕ್ಷತೆಯನ್ನು ತರಲು ಸಾಧ್ಯವಿರುವುದಿಲ್ಲ.

**ತೀರ್ಮಾನ ಮತ್ತು ಮುಂದಿನ ಹಾದಿ (Conclusion and Road Ahead) :**

ನಮ್ಮ ಪ್ರಧಾನಮಂತ್ರಿಯವರ ಸ್ಪಷ್ಟ ಕರೆ 'ಸಹಕಾರದಿಂದ ಸಮೃದ್ಧಿ'ಗೆ ತ್ವರಿತ, ಸಮಯಬದ್ಧ ಮತ್ತು ಎಲ್ಲವನ್ನೊಳಗೊಂಡ ಸಮಾಲೋಚನಾ ಕ್ರಮದ ಅಗತ್ಯವಿದೆ. ಸಹಕಾರಿಗಳ ಪ್ರಗತಿಯನ್ನು ಮಿತಿಗೊಳಿಸಬಹುದಾದ ವಿವಿಧ ಸಮಸ್ಯೆಗಳನ್ನು ಗುರುತಿಸುವ ಮತ್ತು ಸೂಕ್ತವಾಗಿ ಪರಿಹರಿಸುವ ಅವಶ್ಯಕತೆಯಿದೆ. ತಕ್ಷಣದ ಗಮನ ಕೇಂದ್ರೀಕರಣದ ಅಗತ್ಯವಿರುವ ಕೆಲವು ಪ್ರಮುಖ ಸಮಸ್ಯೆಗಳೆಂದರೆ – (ಎ) ಸಹಕಾರಿ ಚಳುವಳಿಯಲ್ಲಿ ಪ್ರಾಂತೀಯ/ರಾಜ್ಯ ಮಟ್ಟದ ಮತ್ತು ವಲಯದ ಅಸಮತೋಲನ; (ಬಿ) ನಿಯಂತ್ರಣಾತ್ಮಕ ಸಂಕೀರ್ಣತೆಗಳು; (ಸಿ) ಆಡಳಿತ, ನಾಯಕತ್ವ ಮತ್ತು ಕಾರ್ಯಾಚರಣೆಯ ಸಮಸ್ಯೆಗಳು; (ಡಿ) ಸಹಕಾರಿ ಘಟಕಗಳಲ್ಲಿ ವೃತ್ತಿಪರ ನಿರ್ವಹಣೆಯ ಕೊರತೆ; (ಇ) ಸಮಯ–ಪರೀಕ್ಷಿತ ರಚನಾತ್ಮಕ ಸುಧಾರಣಾ ಕ್ರಮಗಳ ಅಗತ್ಯತೆ; (ಎಫ್) ಸಹಕಾರಿಗಳ ನಡುವಿನ ಸಹಕಾರದ ಕೊರತೆ, ಇತ್ಯಾದಿಗಳು. ಸಹಕಾರಿ ಚಳುವಳಿಯಲ್ಲಿ ಸಾಕಷ್ಟು ಗಮನ ಕೇಂದ್ರೀಕರಣದ ಅಗತ್ಯವಿರುವ ಇತರ ನಿರ್ಣಾಯಕ ಆಯಾಮಗಳೆಂದರೆ – ಸಹಕಾರಿಗಳ ಕೇಂದ್ರ ರಿಜಿಸ್ಟ್ರಾರ್ ಮತ್ತು ರಾಜ್ಯ ರಿಜಿಸ್ಟ್ರಾರ್‌ಗಳ ನಡುವೆ ಪರಿಣಾಮಕಾರಿ ಸಂವಾದ ಮತ್ತು ಸಮನ್ವಯ ಕಾರ್ಯವಿಧಾನವನ್ನು ಸ್ಥಾಪಿಸುವುದು; ಸಹಕಾರ ತತ್ವಗಳು ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಅನುಸರಿಸುವುದು, ಪಾರದರ್ಶಕತೆ, ಬಲಪಡಿಸುವಿಕೆ, ಶೇರು ಬಂಡವಾಳ ರಚನೆ ಸೇರಿದಂತೆ ಮೂಲಭೂತ ಸೌಕರ್ಯಗಳ ಬಲಪಡಿಸುವಿಕೆ, ವೈವಿಧ್ಯೀಕರಣ ಕಾರ್ಯವಿಧಾನ; ಉದ್ಯಮಶೀಲತೆ, ಬ್ರ್ಯಾಂಡಿಂಗ್, ಮಾರ್ಕೆಟಿಂಗ್ ಮತ್ತು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು, ತರಬೇತಿ, ಶಿಕ್ಷಣದ ವಿನಿಮಯ ಮತ್ತು ಸದಸ್ಯರ ತರಬೇತಿಯನ್ನು ಉತ್ತೇಜಿಸುವುದು; ಹೊಸ ಸಹಕಾರಿ ಸಂಸ್ಥೆಗಳ ರಚನೆ ಹಾಗೂ ಉತ್ತೇಜನ ಮತ್ತು ಸಾಮಾಜಿಕ ಸಹಕಾರಿ ಸಂಸ್ಥೆಗಳ ಉತ್ತೇಜನ ನೀಡುವುದಾಗಿದೆ. ಅಂತಹ ಸಮಸ್ಯೆಗಳ ಸಮಯೋಚಿತ ಗುರುತಿಸುವಿಕೆ ಮತ್ತು ಪರಿಹಾರಕ್ಕಾಗಿ ತಂತ್ರಜ್ಞಾನ–ಚಾಲಿತ ಸಮಗ್ರ ಸಹಕಾರಿ ಅಭಿವೃದ್ಧಿ ಕಾರ್ಯತಂತ್ರವನ್ನು ಅಳವಡಿಸಲು ಮತ್ತು ಸಮುದಾಯ ಸ್ವಾಮ್ಯದ ವ್ಯವಹಾರ ಘಟಕಗಳ ಸ್ಪರ್ಧಾತ್ಮಕತೆಯನ್ನು ಖಚಿತಪಡಿಸಿಕೊಳ್ಳಲು ಕಾರ್ಯಸಾಧ್ಯವಾದ ಮಾರ್ಗಗಳನ್ನು ಅನ್ವೇಷಿಸಲು ನಮ್ಮನ್ನು ಪ್ರೇರೇಪಿಸುತ್ತದೆ.

ನಮ್ಮ ಪ್ರಧಾನಿಯವರ ದೃಷ್ಟಿಯಲ್ಲಿ ಐದು ಟ್ರಿಲಿಯನ್ ಡಾಲರ್ ಭಾರತದ ಆರ್ಥಿಕತೆ ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಸಹಕಾರಿಗಳ ಕೊಡುಗೆಯು ಗುಣಾತ್ಮಕ ಪರಿಣಾಮವನ್ನು ಬೀರುತ್ತದೆ. ಇದನ್ನು ಸಂಭವಿಸುವಂತೆ ಮಾಡಲು, ನಾವು ಮೊದಲಿಗೆ ಸಮುದಾಯ ಮಟ್ಟದ ಪ್ರಾಥಮಿಕ ಸಹಕಾರಿ ಸಂಸ್ಥೆಗಳನ್ನು ಸಶಕ್ತಗೊಳಿಸಬೇಕು ಮತ್ತು ಪುನರುಜ್ಜೀವನಗೊಳಿಸಬೇಕು. PACಗಳನ್ನು ಸಕ್ರಿಯಗೊಳಿಸಲು ಮತ್ತು ಉತ್ಸಾಹಭರಿತವಾಗಿಸಲು, ನಾವೆಲ್ಲರೂ ನಮ್ಮ ದೃಷ್ಟಿಕೋನದಲ್ಲಿ ಒಮ್ಮತ ತರಬೇಕಾಗಿದೆ. ಸಹಕಾರ ಸಚಿವಾಲಯವು ಕಂಳಗಳನ್ನು ಗಣಕೀಕರಣಗೊಳಿಸಲು ಮತ್ತು ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ತಂತ್ರಜ್ಞಾನದ ಅಳವಡಿಕೆಯ ಉತ್ತೇಜನಕ್ಕಾಗಿ ಯೋಜನೆ ರೂಪಿಸಲು ಸಜ್ಜಾಗಿರುವಾಗ ಪ್ರತಿಯೊಂದು ಹಳ್ಳಿಗೂ ಕಂಳಗಳು ತಲುಪುವುದು ನಮ್ಮ ಸಹಕಾರ ನೀತಿಯ ಗುರಿಯಾಗಿರಬೇಕು. ಗ್ರಾಮವನ್ನು ಸ್ವಾವಲಂಬಿ ಮತ್ತು ಸದೃಢಗೊಳಿಸುವುದು, ಸಹಕಾರಿ ಸಂಘಗಳ ಸದಸ್ಯರ ಆದಾಯವನ್ನು ದ್ವಿಗುಣಗೊಳಿಸುವುದು ಸಹ ಸಹಕಾರ ನೀತಿಯ ಗುರಿಗಳಾಗಿರಬೇಕು. ಇದಲ್ಲದೇ, ಎಲ್ಲಾ ರೀತಿಯ ಸಹಕಾರಿ ಸಂಸ್ಥೆಗಳನ್ನು ಆರ್ಥಿಕವಾಗಿ ಸದೃಢವಾಗಿಸುವ ಮತ್ತು ಸುಸ್ಥಿರವಾಗಿಸುವ ಪ್ರಾವಧಾನವನ್ನು ನೀತಿಯು ಹೊಂದಿರಬೇಕು.

ಈ ಕಾರ್ಯವು ಕಷ್ಟಕರವೆಂದು ತೋರುತ್ತದೆ, ಆದರೆ ಸಾಧಿಸಬಹುದಾಗಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಉದಾತ್ತ ಉದ್ದೇಶಗಳು ಮತ್ತು ಮಧ್ಯಸ್ಥಿಕೆಗಳಿಂದ ಮಾತ್ರ ಇದನ್ನು ಸಾಧಿಸಲಾಗುವುದಿಲ್ಲ. ನಾವು ಆಗಾಗ್ಗೆ ಉಲ್ಲೇಖಿಸಿದ ಮಹಾ ಉಪನಿಷತ್‌ನ ಪದ – ವಸುಧೈವ ಕುಟುಂಬಕಂ ಅಂದರೆ ಈ ಭೂಮಿಯ ಮೇಲಿನ ಎಲ್ಲಾ ಜೀವಿಗಳು ಒಂದು ಕುಟುಂಬ ಎಂಬಂತೆ ಈ ಸಂದರ್ಭದಲ್ಲಿ ಸಹಕಾರಿ ಚಳುವಳಿಯ ಮುಖಂಡರು ಮತ್ತು ಒಕ್ಕೂಟದ ಮುಖ್ಯಸ್ಥರು ಅವರ ಜಿಲ್ಲೆಗಳಿಗೆ ಭೇಟಿ ನೀಡಲು ಹೆಚ್ಚಿನ ಪ್ರಯತ್ನಗಳನ್ನು ಹಾಕಬೇಕು, ಸದಸ್ಯರೊಂದಿಗೆ ಸಂವಹಿಸಿ ಕ್ಷೇತ್ರದ ಅಭಿವೃದ್ಧಿಗೆ ಭರವಸೆಯನ್ನು ತುಂಬಬೇಕು. ಈ ಸಂಚಿತ ಪ್ರಯತ್ನಗಳು ನಿಸ್ಸಂದೇಹವಾಗಿ, 'ಸಹಕಾರದಿಂದ ಸಮೃದ್ಧಿ'ಯ ಗುರಿಯನ್ನು ಸಾಧಿಸಲು ನಮ್ಮೆಲ್ಲರನ್ನು ಹತ್ತಿರಕ್ಕೆ ತರುತ್ತದೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : ನಿವೇಶನ ಸಂಖ್ಯೆ 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003